(*g*) Villages and towns that come under submersion are :—

Under Harangi :—

In Coorg District ...	Madapura Township and some Estate Labourers Lines.
In Mysore District ...	Nil.

Under Kambadakada :—

4 Villages :—

(i) Nanjarajapatna,

(ii) Rangasamudra,

(iii) Virupakshapura,

(iv) Hospatna.

(*h*) The following rates are provided for in the estimate :—

(i) Good condition Coffee land	Rs. 3,000	per acre
(ii) Paddy land	Rs. 1,000	"
(iii) Uncultivated Private land	Rs. 250	"

(*i*) No.

BUDGET ESTIMATES FOR 1961-62

General discussion (*contd.*).

Mr. DEPUTY SPEAKER.—Sri Shankarappa will continue.

Sri RAMAKRISHNA HEGDE.—Sir, I have a representation.

Sri M. C. NARASIMHAN.—On a point of order. The Chair has called Sri Shankarappa. Question time is over and the next item has begun. How can representations be made now ?

Mr. DEPUTY SPEAKER.—Quite correct.

Sri D. B. S. SHANKARAPPA.—Mr. Speaker, Sir...

Sri RAMAKRISHNA HEGDE.—I had written to you day before yesterday......

Sri M. RAMAPPA.—I rise to a point of order. You have called upon Sri Shankarappa and he was about to speak. A point of order was raised and you called upon Sri Shankarappa again. How can the Hon'ble Member persist in making the representation ?

Mr. DEPUTY SPEAKER.—Sri Shankarappa should yield if the Hon'ble Member Ramakrishna Hegde wants to interrupt.

† ಶ್ರೀ ಬಿ. ಎಸ್. ಶಂಕರಪ್ಪ (ಹೊಸದುರ್ಗ).—ಸ್ವಾಮೀ, ನಾನು ಭೂಮಿ ಹಂಚಿಕೆ ವಿಷಯದಲ್ಲಿ ನಿನ್ನೆ ಪ್ರಸ್ತಾಪ ಮಾಡುತ್ತಿದ್ದೆ. 1947ರಲ್ಲಿ ನಮಗೆ ಪ್ರಜಾಪ್ರಭುತ್ವಬಂದು ಇಲ್ಲಿಗೆ 13 ವರ್ಷಗಳು ಕಳೆದಿವೆ. ಪ್ರತಿವರ್ಷವೂ ನಮ್ಮ ತಾಲ್ಲೂಕಿಗೆ ರಸ್ತೆಗಳನ್ನು ಮತ್ತು ಜಮೀನುಗಳನ್ನು ಬೇಕಾದಷ್ಟು ಕೊಡುತ್ತೇವೆಂದು ಆಡಳಿತಪಕ್ಷದವರು ಹೇಳುತ್ತಲೇ ಬಂದಿದ್ದಾರೆ. ಆದರೆ ನಮ್ಮ ತಾಲ್ಲೂಕಿಗೆ ಇಷ್ಟು ಈ ಬಾಬಿಗೆ ಖರ್ಚು ಮಾಡುತ್ತೇವೆಂಬುದನ್ನು ತೋರಿಸಿಲ್ಲ. ಹಿಂದೆ ತಾಲ್ಲೂಕ್‌ಬೋರ್ಡ್ ಮತ್ತು ಗ್ರಾಮಪಂಚಾಯಿತಿಗಳ ಚುನಾವಣೆ ಕಾಲದಲ್ಲಿ ಜನಗಳ ಬೆಂಬಲವನ್ನು ತಮ್ಮ ಪಕ್ಷದ ಕಡೆಗೆ ಪಡೆಯುವ ದೃಷ್ಟಿಯಿಂದ ಎಲ್ಲರಿಗೂ ಜಮೀನು ಕೊಡುತ್ತೇವೆ, ರಸ್ತೆಗಳನ್ನು ಕಟ್ಟಿಸಿಕೊಡುತ್ತೇವೆ, ಇನ್ನೂ ಇತರ ಸೌಕರ್ಯಗಳನ್ನು ಕಲ್ಪಿಸಿ ಕೊಡುತ್ತೇವೆ ಎಂದು ಒಂದು ಕೆಟ್ಟ ದೃಷ್ಟಿಯಿಂದ ಈ ಸರ್ಕಾರದವರು ಆಶ್ವಾಸನೆಯನ್ನು ನೀಡಿದರು. ಇವರು ಜಮೀನು ಕೊಡುವ ರೀತಿ ನೀತಿ ಹೇಗಿದೆಯೆಂದರೆ, ಯಾರಿಗೆ ಜಮೀನು ಕೊಟ್ಟಿದ್ದಾರೆಂದರೆ ಯಾವನು ತನ್ನ ಜಮೀನನ್ನು ಮಾರಿ ಲಾಭದ ದೃಷ್ಟಿಯಿಂದ ತಾನು ಕೊಂಡ ಬೆಲೆಗಿಂತ 1½ಯಷ್ಟು ಹಣವನ್ನು ಹೆಚ್ಚು ಪಡೆಯುತ್ತಾನೋ, ಬೇರೆಯವರಿಗೆ ಆ ರೀತಿ ಆಧಾರ ಮಾಡುತ್ತಾನೋ ಅಂತಹವನಿಗೆ ಕೊಡುತ್ತಾರೆ. ಆ ರೀತಿ ಸರ್ಕಾರ ಇನ್ನುಮುಂದೆ ಕೊಡಬಾರದು ಎಂದು ನಾನು ಸಲಹೆ ಮಾಡುತ್ತೇನೆ.

ಹಿಂದೆ 1957ರಲ್ಲಿ ಈ ನಿಯಮಾವಳಿಗಳ ಬಗ್ಗೆ ಒಂದು ಬಿಲ್ಲನ್ನು ಪಾಸ್ ಮಾಡಿದರು. ಅದರ ಪ್ರಕಾರ ಎಲ್ಲರೂ ಅರ್ಜಿ ಕೊಡುವ ಅಭ್ಯಾಸವಿತ್ತು. ಈಗ ಬೊಂಬಾಯಿ ವಿಲೇಜ್ ಪಂಚಾಯಿತಿ ಬಿಲ್ ಬಂದು ಅದು ಇಲ್ಲಿ ಪಾಸಾದಮೇಲೆ ಇದುವರೆಗೂ ಆ ರೀತಿ ನಮ್ಮ ಸರ್ಕಾರದವರು ರೂಲ್ಸನ್ನು ಮಾಡಿಲ್ಲದೆ ಇರುವುದರಿಂದ ಈಗ ಬಹಳ ತೊಂದರೆಯಾಗಿದೆ. ಹೇಗೆಂದರೆ ಒಬ್ಬನೇನಾದರೂ ಒಂದು ತಾಲ್ಲೂಕ್ ಕಛೇರಿಗೆ ಅರ್ಜಿ ಕೊಡಬೇಕಾದರೆ ಮೊದಲು ಶ್ಯಾನುಬೋಗರಿಗೆ ಕೊಡುತ್ತಾನೆ, ಶ್ಯಾನುಬೋಗರು ತಹಸೀಲ್ದಾರರಿಗೆ ಕೊಡುತ್ತಾನೆ. ಅವರು ಸರ್ಟಿಫೈ ಮಾಡಿದರೆ ಆಗ ರೈತರು ಅಡಮಾನ ಬ್ಯಾಂಕಿನಲ್ಲಿ ಸಾಲಕ್ಕಾಗಿ ಅರ್ಜಿ ಹಾಕಬೇಕಾಗುತ್ತದೆ. ಈ ರೀತಿಯಾಗಿ ಸುಮಾರು ಐದಾರು ವರ್ಷಗಳಿಂದಲೂ ಅವರಿಗೆ ಬಹಳ ಕಷ್ಟವಾಗುತ್ತಿದೆ. ಅದಕ್ಕೋಸ್ಕರ ಸರ್ಕಾರದವರು ಈ ಕೂಡಲೇ ಈ ಬಗ್ಗೆ ತಕ್ಕ ರೂಲ್ಸ್‌ಗಳನ್ನು ಮಾಡಿದ ಹೊರತು ಏನು ಮಾಡುವುದಕ್ಕೂ ಆಗುವುದಿಲ್ಲ ಎಂದು ನನ್ನ ಅಭಿಪ್ರಾಯ. ಅನೇಕ ರೈತರಿಗೆ ಸರಿಯಾದ ಕಾನೂನುಗಳು ಸುಲಭವಾಗಿ ಇಲ್ಲದೇ ಬಹಳ ತೊಂದರೆಯಾಗುತ್ತಿದೆ.

ಇನ್ನು ವಿಲೇಜ್ ಆಫೀಸರುಗಳಾದ ಪಟೇಲ್, ಶ್ಯಾನುಬೋಗರ ಅನುವಂಶಿಕ ಹಕ್ಕನ್ನು ರದ್ದುಮಾಡುತ್ತೇವೆಂದು ಅವರನ್ನು ಅತೃಪ್ತರನ್ನಾಗಿ ಮಾಡಿದುದರ ಪರಿಣಾಮವಾಗಿ ಪಟೇಲರು ಮತ್ತು ಶ್ಯಾನುಬೋಗರು ಕಂದಾಯ ವಸೂಲಿ ಮಾಡುವುದು ಮತ್ತು ಗ್ರಾಮಪಂಚಾಯಿತಿ ಕೆಲಸಗಳನ್ನು ಚೆನ್ನಾಗಿ ಮಾಡುತ್ತಾ ಇಲ್ಲ. ಆದರೆ ಇವರ ಬದಲಿಗೆ ಗ್ರಾಮದ ಕೆಲಸಗಳು ಸುಸೂತ್ರವಾಗಿ ನಡೆಯುವಂತೆ ಗ್ರಾಮಪಂಚಾಯಿತಿಗಳಿಗೆ ಸೆಕ್ರೆಟರಿಗಳನ್ನೇ ನೇಮಿಸಿಲ್ಲ. ಸ್ಥಳೀಯ ಸಂಸ್ಥೆಗಳ ಸಚಿವರು 14 ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದೇವೆ ಎಂಬುದಾಗಿ ಮೊನ್ನೆ ಹೇಳಿದರು. ಹೀಗೆ ಇಷ್ಟು ಹೊತ್ತು ಕೆಲಸ ಮಾಡುವಾಗ, ಇಂತಹ ಬಿಲ್ಲನ್ನು ಪಾಸ್ ಮಾಡಿದ್ದು ಯಾವಾಗ ? ಇದರ ಮೇಲೆ ಚರ್ಚೆ ಯಾವಾಗ ಆಯಿತು ? ಸೆಲೆಕ್ಟ್ ಕಮಿಟಿಗೆ ಯಾವಾಗ ಹೋಯಿತು ? ಇನ್ನೂ ಆಕ್ಟ್ ಆಗಲಿಲ್ಲವೆಂದರೆ ಹೇಗೆ ? ಆ ಕಾನೂನನ್ನು ಜಾರಿ ಮಾಡಲಿಲ್ಲವೆಂದರೇನು ?—ನೊಂದು ಸುಖೀರಾಜ್ಯಸ್ಥಾಪವೆ ಮಾಡುತ್ತೇವೆಂಧು ಹೇಳುತ್ತಾರೋ ಅದಕ್ಕೆ ಇದು ವಿರುದ್ಧವಾಗಿದೆ. ಆದ್ದರಿಂದ ಕೂಡಲೇ ವಿಲೇಜ್ ಪಂಚಾಯಿತಿಗಳಿಗೆ ಖಾಯಂ ಆಗಿ ಸೆಕ್ರೆಟರಿಗಳನ್ನು ನೇಮಕ ಮಾಡಿ ಗ್ರಾಮಪಂಚಾಯಿತಿ ಕೆಲಸಕಾರ್ಯಗಳು ಸುಗಮವಾಗಿ ನಡೆಯುವಂತೆ ಸರ್ಕಾರದವರು ವ್ಯವಸ್ಥೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಈ ಪ್ರಕಾರವಾಗಿ ಸರ್ಕಾರ ಗ್ರಾಮಾಂತರ ಪ್ರದೇಶಗಳನ್ನು ಅಲಕ್ಷ್ಯಮಾಡಿ, ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅನುಕೂಲ ಮಾಡುತ್ತಾರೆಂದರೆ ಏನು ತಪ್ಪಾಗುತ್ತದೆ ?

†ಶ್ರೀ ಟಿ. ಸುಬ್ರಹ್ಮಣ್ಯ (ಸ್ಥಾನೀಯ ಪ್ರಾಧಿಕಾರಿ ಶಾಖೆಯ ಮಂತ್ರಿಗಳು).—ಎಲ್ಲಾ ಪಂಚಾಯಿತಿಗಳಿಗೂ ಸೆಕ್ರೆಟರಿಗಳನ್ನು ಅಪಾಯಿಂಟ್ ಮಾಡಬೇಕೆಂದು ನಮ್ಮಿಂದ ಆದೇಶ ಹೋಗಿ, ಎಲ್ಲಾವುದಕ್ಕೂ ಮಾಡಿದ್ದಾರೆ. ಅದರ ಜೊತೆಗೆ ಎಲ್ಲೆಲ್ಲಿ ವಿಲೇಜ್ ಪಂಚಾಯಿತಿಯವರು ಶಾನುಭೋಗ್, ಪಟೇಲರ ಕೆಲಸವಾಗಿಲ್ಲವೆಂದರೆ ಲೋಕಲ್ ಕ್ಯಾಂಡಿಡೇಟ್‌ಗಳನ್ನು ನೇಮಕ ಮಾಡಿಕೊಳ್ಳಬೇಕೆಂದು ಆಜ್ಞೆ ಕೊಟ್ಟುಬಿಟ್ಟಿದ್ದೇವೆ. ಅಪಾಯಿಂಟ್ ಮಾಡಿಲ್ಲದೆಂದು ನಮಗೆ ಇದುವರೆಗೆ ಒಬ್ಬರೂ ಒಂದು ಅರ್ಜಿ ಬರೆದಿಲ್ಲ.

ಶ್ರೀ ಬಿ. ಎಸ್. ಶಂಕರಪ್ಪ.—ಅನೇಕ ವಿಲೇಜ್ ಪಂಚಾಯಿತಿಗಳಿಗೆ ಸೆಕ್ರೆಟರಿಗಳಿಲ್ಲದೆ, ನಾನೇ ಡಿವಿಜನಲ್ ಕಮಿಶನರಿಗೆ ಟೆಲಿಫೋನ್ ಮಾಡಿ 1,200 ರೂಪಾಯಿ ರಿಲೀಸ್ ಮಾಡಿಸಿದೆ. ಅದರ ಮೇಲೆ ಸ್ವೀಪರುಗಳ ಸಂಬಳದ ಖರ್ಚನ್ನು ನಿರ್ವಹಿಸಿದರು. ಸರ್ಕಾರ ಪಟ್ಟಣಗಳ ಶೃಂಗಾರ ಮಾಡಿ ಹಳ್ಳಿಗಳಲ್ಲಿ ಸುಖೀ ರಾಜ್ಯ ಸ್ಥಾಪನೆ ಮಾಡುತ್ತಿದ್ದೇವೆ ಪಂಚಾಯಿತಿ ರಾಜ್ಯ ಸ್ಥಾಪನೆ ಮಾಡುತಿದ್ದೇವೆ ಎಂಬ ಒಂದು ಸೋಗು ಹಾಕಿಕೊಂಡು, ನಿಜವಾಗಿ ಕೆಲಸ ಮಾಡುತ್ತಿಲ್ಲ. ಪಬ್ಲಿಕ್ ವರ್ಕ್ಸ್ ಮತ್ತು ಇರ್ರಿಗೇಶನ್ ಬಡ್ಜೆಟ್ಟನಲ್ಲಿ 4 ಕೋಟಿ ಚಿಲ್ಲರೆ ಬಿಲ್ಡಿಂಗ್ಸ್ ಮೇಲೆ ಹಾಕಿದ್ದಾರೆ. ಕೆರೆಕಟ್ಟೆ ಮಾಡಿ ಅಂದರೆ, ಚನ್ನಬಸಪ್ಪನವರು It is not paying, return 10-20 ಪರ್ಸೆಂಟೂ ಬರುವುದಿಲ್ಲ ಎಂದು ಹೇಳುತ್ತಾರೆ ಪೋಲೀಸು ಇನ್ಸ್‌ಪೆಕ್ಟರುಗಳಿಗೆ ಕ್ವಾರ್ಟರುಗಳು, ಹಾಸ್ಪಿಟಲುಗಳು, ಇತರ ಕಟ್ಟಡಗಳನ್ನು ಕಟ್ಟುವುದರಿಂದ ಎಷ್ಟು ಖರ್ಚಾಗುತ್ತದೆ, ಅದರಿಂದ ಏನು ಫಾಯಿದೆ ಬರುತ್ತದೆ.

ಶ್ರೀ ಟಿ. ಮರಿಯಪ್ಪ (ಅರ್ಥಿಕ ಮಂತ್ರಿಗಳು).—ವರ್ಗವಾದ ಅಧಿಕಾರಿಗಳು ಕ್ವಾರ್ಟರ್ಸ್ ಇಲ್ಲದಿರುವುದರಿಂದ ಬರುವುದಿಲ್ಲ ಗವರ್ನಮೆಂಟ್ ಆಫೀಸರುಗಳಿಗೆ ಕ್ವಾರ್ಟರ್ಸ್ ಕಟ್ಟಿಸಿಕೊಡಬೇಕೆಂದು ಅಸೋಸಿಯೇಶನ್ನಿನವರು ಒಂದು ಕಡೆ ಸಲಹೆ ಕೊಟ್ಟು, ಇನ್ನೊಂದು ಕಡೆ ಹೀಗೆ ಹೇಳಿದರೆ ಏನು ಮಾಡಬೇಕು.

ಶ್ರೀ ಬಿ. ಎಸ್. ಶಂಕರಪ್ಪ.—ರೂರಲ್ ಪಾರ್ಟುಗಳಲ್ಲಿರುವ ಆಸ್ಪತ್ರೆಗಳಲ್ಲಿ ಎರಡು ಮೂರು ವರ್ಷದಿಂದ ಡಾಕ್ಟರೇ ಇಲ್ಲ. ಬೇಕಾದರೆ ಇವತ್ತು ಪರೀಕ್ಷೆ ಮಾಡಿ. ಕೆಲವು ಆಸ್ಪತ್ರೆಗಳಲ್ಲಿ ಟಿಂಚರ್ ಐಯೋಡೀನ್, ಮತ್ತು ಕಾಟನ್ ಮತ್ತು ಬ್ಯಾಂಡೇಜ್ ಕ್ಲಾತ್ ಸಹಿತ ಸಣ್ಣ ಗಾಯಗಳನ್ನು ಟ್ರೀಟ್ ಮಾಡಲಿಕ್ಕೆ ಇಲ್ಲ. ಔಷದಿ ಸಹ ಇಲ್ಲ. ಡಾಕ್ಟರುಗಳು "ನಾವೇನು ಮಾಡೋಣ, ಸಪ್ಲೈ ಬರುವುದಿಲ್ಲ" ಎಂದು ಹೇಳುತ್ತಾರೆ, ಆಸ್ಪತ್ರೆಗಳ ನಿಗಾ ನೋಡುತ್ತಾ ಇಲ್ಲ.

ಎರಡನೆಯದಾಗಿ ಸ್ಕೂಲು ಬಿಲ್ಡಿಂಗುಗಳ ವಿಚಾರ. ನಿನ್ನೆಯೇ ಹೇಳಿದೆ; ನಾರಾಯಣಗೊಂಡನ ಹಳ್ಳಿ ಎನ್ನುವ ಕಡೆ ಎಲ್ಲ ಕಾಂಗ್ರೆಸ್ ಮುಖಂಡರು ಇದ್ದಾರೋ ಅಲ್ಲಿ ಮಿಡ್ಲ್‌ಸ್ಕೂಲ್ 20,600 estimate ಮಾಡಿ ಕಟ್ಟಿದೆ. ಅದಕ್ಕೆ ವಿಲೇಜ್ ಕಂಟ್ರಿಬ್ಯೂಶನ್ ಇಲ್ಲ. ಜೀವಂಡಹಳ್ಳಿ ಎನ್ನುವುದರಲ್ಲಿ ಬಡ ಜನರಿದ್ದಾರೆ, ಸ್ಕೂಲು ಕಟ್ಟಿಸಿಕೊಡಿಯೆಂದರೆ, ಸ್ಕೂಲು ಮುಚ್ಚಿದ್ದಾರೆ. ಅಪೋಸಿಶನ್ನಿಗೆ ಎಲ್ಲಿ ಸಪೋರ್ಟ್ ಬಂದುಬಿಡುತ್ತದೋ ಎಂದು ಸರ್ಕಾರ ಇಚ್ಛಾನುಸಾರ ಖರ್ಚು ಮಾಡುತ್ತಿದೆ ಎನ್ನುವುದನ್ನು ನೀವು ಒಪ್ಪಿಕೊಳ್ಳಲೇ ಬೇಕು. ಹೊಸದುರ್ಗ ತಾಲ್ಲೂಕು ರಾಣಿಬೆನ್ನೂರಿನಲ್ಲಿ ಪಂಚವಾರ್ಷಿಕ ಯೋಜನೆ ಮೇರೆಗೆ ಶೀಪ್ ಬ್ರೀಡಿಂಗ್ ಸೆಂಟರ್ ಮಾಡಿದ್ದಾರೆ ಅದಕ್ಕೆ ಸೆಂಟ್ರಲ್ ಗವರ್ನಮೆಂಟಿನ ಸಹಾಯವೂ ಇದೆ. ಅದಕ್ಕೆ 870 ರ್ಯಾಮುಗಳನ್ನು ತೆಗೆದುಕೊಂಡುಬಿಟ್ಟಿದ್ದಾರೆ. ಅವುಗಳನ್ನು ಕೂಡುವುದಕ್ಕೆ ಶೆಡ್ಡುಗಳನ್ನು ಕಟ್ಟಿಸಿದ್ದಾರೆ. ಒಂದೊಂದು ಶೆಡ್ಡಿಗೆ 13 ಸಾವಿರ ರೂಪಾಯಿ ಖರ್ಚಾಗಿದೆ. ಮಕ್ಕಳನ್ನು ಓದಿಸುವುದಕ್ಕೋಸ್ಕರ ಒಂದು ಪ್ರೈಮರಿ ಸ್ಕೂಲು ಕಟ್ಟಿಸಿಕೊಡಿ ಎಂದರೆ ದುಡ್ಡಿಲ್ಲ ಅನ್ನುತ್ತಾರೆ.

(ಶ್ರೀ ಬಿ ಎಚ್. ಶಂಕರಪ್ಪ)

ಇಷ್ಟಾಗಿಯೂ ಕಡ್ಡಾಯ ಶಿಕ್ಷಣ ಜಾರಿಗೆ ತರುತ್ತೇವೆಂದು ಸರ್ಕಾರದವರು ಹೇಳುತ್ತಾರೆ. ಎಷ್ಟೋ ಹಳ್ಳಿಗಳಲ್ಲಿ ಪಂಚಾಯಿತಿ ಹಾಲ್ ಇಲ್ಲ. ಹಳ್ಳಿಗಳಲ್ಲಿ ಸ್ಕೂಲ್ ಕಟ್ಟಡಗಳನ್ನು ಕಟ್ಟಿಸಲಿಕ್ಕೆ ಏನು ನಿಯಮವಿದೆಯೋ ಆ ನಿಯಮದಿಂದ 1-2 ಸಾವಿರ ಜನಸಂಖ್ಯೆ ಇರತಕ್ಕ ಹಳ್ಳಿಗಳನ್ನು ಎಕ್ಸ್‌ಟೆಂಪ್ಟ್ ಮಾಡಿ, ಸರ್ಕಾರದವರೇ ಆ ಹಳ್ಳಿಗಳಲ್ಲಿ ಸ್ಕೂಲ್ ಬಿಲ್ಡಿಂಗುಗಳ ಪೂರ ಖರ್ಚು ಕೊಡಬೇಕು.

ರಾಷ್ಟ್ರೀಯ ವಿಸ್ತರಣೆ ಯೋಜನೆ ಎಂದು ಬಂದಿದೆ. ನಮ್ಮ ಎನ್. ಇ. ಎಸ್. ಡೆಪ್ಯುಟಿ ಮಿನಿಸ್ಟರು ಭಾಷಣ ಮಾಡುವಾಗ ಅದು ಕಲ್ಪವೃಕ್ಷ ಕಾಮಧೇನು ಎಂದು ಹೇಳುತ್ತಾರೆ. ಲೆಕ್ಕಾಚಾರ ಹಾಕಿದರೆ, ಎನ್. ಇ. ಎಸ್. ದುಡ್ಡೆಲ್ಲಾ, ನೇಮ್‌ಬೋರ್ಡುಗಳಿಗೆ, ಟಿ. ಎ. ಮುಂತಾದ್ದಕ್ಕೇ ಹೋಗುತ್ತದೆ. ಡೆಪ್ಯುಟಿ ಮಿನಿಸ್ಟರ ಸಂಚಾರಕ್ಕೆ ಹೆಚ್ಚು ಹಣ ಹೋಗುತ್ತದೆ. ಎನ್. ಇ. ಎಸ್. ಕೆಲಸ ಹೇಗಿದೆಯೆಂದರೆ, ನೀರು ಹಾಯಿಸುವುದಕ್ಕೆ ನಾಲೆ ಮಾಡುತ್ತೇವೆಂದು ಹೇಳಿ, ಗದ್ದೆಗೆ ನೀರು ಮುಟ್ಟುವುದಕ್ಕೆ ಮುಂಚೆ ಕಾಲುವೆಯೇ ನೀರು ಕುಡಿದ ಹಾಗಾಗಿದೆ. ಎನ್. ಇ. ಎಸ್. ನಲ್ಲಿ 75 ಪರ್ಸೆಂಟ್ ವೇಸ್ಟ್ ಆಗಿದೆ. ಯಾವ ಗ್ರಾಮದಲ್ಲಿ ಐಕ್ಯಮತ್ಯವಿದೆಯೋ, ಎಲ್ಲಿ ಕಂಟ್ರಿಬ್ಯೂಶನ್ ಕೊಡುತ್ತಾರೋ ಅಲ್ಲಿಗೆ ಮಾತ್ರ ರಾಷ್ಟ್ರೀಯ ವಿಸ್ತರಣಾ ಯೋಜನೆಯಿಂದ ಒಂದು ಉಪಯೋಗ ಕಂಡುಬರುತ್ತಿದೆ.

ಇನ್ನು ಅಭಾವ ಪ್ರದೇಶಗಳ ವಿಚಾರ : ಚಿತ್ರದುರ್ಗ, ಮೊಳಕಾಲ್ಮೂರು, ಹೊಳಲ್ಕೆರೆ, ಹಿರಿಯೂರು, ಸಿರ, ಮಧುಗಿರಿ, ಪಾವಗಡ ಮುಂತಾದ ಕಡೆಗಳಲ್ಲಿ ಮಳೆ ಸಾಮಾನ್ಯ. ಆ ಪ್ರದೇಶಗಳಲ್ಲಿ ಸರ್ಕಾರ ಏನು ಸ್ಪೆಶಲ್ ಕೆಲಸ ಮಾಡಿದೆ. ಮಳೆ ಬರತಕ್ಕಂಥದ್ದು ಕಡಿಮೆ. ಜಲವಸತಿ ಜಾಸ್ತಿ ಇಲ್ಲ. 150-200 ಅಡಿ ತೆಗೆದರೂ ನೀರು ಬರುವುದಿಲ್ಲ. ದೈವಿಕ ಸಂಪತ್ತು ಕಡಿಮೆ. ಅವಿದ್ಯಾವಂತ ಜನರು ಡೀಸಲ್ ಇಂಜಿನ್ ಇಟ್ಟುಕೊಂಡು ತಮ್ಮ ಆರ್ಜನೆಯನ್ನೆಲ್ಲಾ ಇಂಜಿನ್ ರಿಪೇರಿಗೇ ಹಾಕುತ್ತಾರೆ. ಎಲ್ಲಿ ಮಳೆ ಕಡಿಮೆ ಆಗುತ್ತದೆಯೋ ಎಲ್ಲಿ ನೀರಿನ ಅಭಾವವಿದೆಯೋ ಅಲ್ಲಿ ಸರ್ಕಾರದವರು ಈಗಿರುವ ನಿಯಮವನ್ನು ಸರಿಮಾಡಿ ಇರ್ರಿಗೇಶನ್ ಭಾವಿಗಳಿಗೆ ಎಲೆಕ್ಟ್ರಿಸಿಟಿಯನ್ನು ಯಾವ ಪರ್ಸೆಂಟೇಜ್ ಬರಲಿ, ಕೊಡಬೇಕು.

ಲ್ಯಾಂಡ್ ರೆವಿನ್ಯೂ ಮೇಲೆ ಮಾನ್ಯ ಸಚಿವರು ಸರ್ಚಾರ್ಜ್ ತಂದಿದ್ದಾರೆ. ಹಾಕಿದ ಟ್ಯಾಕ್ಸುಗಳನ್ನು ಸರಿಯಾಗಿ ವಸೂಲು ಮಾಡುತ್ತಿಲ್ಲ, ಪ್ರತಿಸಾರಿಯೂ ಅನಾದಾರಣೆ ತೋರಿಸುತ್ತಿದ್ದಾರೆ, ಸರಿಯಾಗಿ ವಸೂಲು ಮಾಡಿ ಎಂದು ಹೇಳಿದ್ದಕ್ಕೆ ಫೈನಾನ್ಸ್ ಡೆಪ್ಯುಟಿ ಮಿನಿಸ್ಟರು ಒರಟೊರಟಾಗಿ ಜವಾಬು ಕೊಟ್ಟರು. ಐದು ಎಕರೆಗೆ ಕಡಿಮೆ ಇರುವವರಿಗಿ ಕಂದಾಯ ಮಾಫಿ ಮಾಡಿ ಸರ್ಕಾರಕ್ಕೆ ಲುಕ್ಸಾನು ಆಗತಕ್ಕಂಥ ದುಡ್ಡನ್ನು, ತೆಂಗು, ಬಾಳೆ, ಏಲಕ್ಕಿ ಮುಂತಾದ ಕಮರ್ಸಿಯಲ್ ಕ್ರಾಪುಗಳ ಮೇಲೆ ಸರ್ಚಾರ್ಜ್ ಹಾಕಿ, ಭರ್ತಿಮಾಡಿ. ಸಣ್ಣಪುಟ್ಟ ಹೋಲ್ಡರುಗಳ ಮೇಲೆ ಸರ್ಚಾರ್ಜ್ ಹಾಕಬೇಡಿ, ಜನರಲ್ಲಿ ನೆಮ್ಮದಿ ಇಲ್ಲ; ಅವರಿಗೆ ಸಾಲ ಹುಟ್ಟುವುದೂ ಕಷ್ಟ, ಆಡಳಿತ ಕ್ರಮ ಬದಲಾಯಿಸಲಿ. ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿಗೆ ಸಾಲ ಬೇಕು ಎಂದು ಅರ್ಜಿ ಹಾಕಿದರೆ ಆರು ತಿಂಗಳಿಗೂ ಹೆಚ್ಚಿಗೆ ಬೇಕು.

ದುಡ್ಡು ಸಿಕ್ಕುವುದಕ್ಕೆ ಆರು ತಿಂಗಳಾದರೂ ಬೇಕು. ಎಷ್ಟೋ ವೇಳೆ ಕೆಲವರಿಗೆ ಆರು ತಿಂಗಳ ಮೇಲೂ ಸಾಲ ಸಿಕ್ಕುವುದು ಕಷ್ಟವಾಗಿರುತ್ತೆ. ಆದಕಾರಣ ಸರ್ಕಾರದವರು ಈ ಸಾಲ ಕೊಡಲು ವಿಧಿಸಿರತಕ್ಕ ನೀತಿ-ನೇಮಗಳನ್ನು ಕೂಡಲೇ ಬದಲಾಯಿಸಬೇಕು. ಈ ಕ್ರಮ ಸರಿಯಾಗಿಲ್ಲ. ನಮಗೆ ಬೇಕಾದ್ದೇನು ಬೆಕ್ಕು ಕಪ್ಪಾಗಿರಲಿ–ಬಿಳುಪಾಗಿರಲಿ ಒಟ್ಟಿನಲ್ಲಿ ಅದು ಇಲಿ ಹಿಡಿದರಾಯಿತು ಎನ್ನುವಂತೆ ನಮಗೆ ಕೆಲಸ-ಕಾರ್ಯಗಳು ಸಲೀಸಾಗಿ ನಡೆಯುವಂಥ ಯಾವ ಕಾನೂನಾದರೂ ಪರವಾಯಿಲ್ಲ. ಒಟ್ಟಿನಲ್ಲಿ ಆಗತಕ್ಕ ಕೆಲಸಗಳಿಗೆ ಅಡ್ಡಿ ತರಬಾರದು.

ಇತ್ತೀಚೆಗೆ ರಾಜ್ಯದಲ್ಲಿ ಎಲ್ಲಿ ನೋಡಿದರೂ ಲಂಚ-ರುಷವತ್ತುಗಳ ಹಾವಳಿ ವಿಪರೀತವಾಗಿದೆ. ಈ ಪಾನನಿರೋಧವನ್ನು ಜಾರಿಗೆ ತಂದ ಮೇಲಂತೂ ಜನರ ಆರೋಗ್ಯವೇ ಕೆಡುವುದಕ್ಕೆ ಅವಕಾಶ ಹೆಚ್ಚಾಗಿದೆ. ಜನರು ಈ ಕಳ್ಳಭಟ್ಟಿ ಸಾರಾಯನ್ನು ಸಿಕ್ಕಾಪಟ್ಟೆ ಕುಡಿಯುತ್ತಿದ್ದಾರೆ. ಜನರ ಸೇವನೆಗೆ ಕೆಡುಕನ್ನುಂಟು ಮಾಡತಕ್ಕ ಅಮೋನಿಯಂ ಸಲ್ಫೇಟ್ ಮತ್ತು ಕಿತ್ತಳೆಹಣ್ಣಿನ ಸಿಪ್ಪೆ ಇತ್ಯಾದಿ ಸಾಮಾನುಗಳನ್ನು ಹಾಕಿ ತಯಾರಿಸಿದ ಸಾರಾಯನ್ನು ಜನರು ಕುಡಿಯುವುದಕ್ಕೆ ಮೊದಲು ಮಾಡಿದರೆ ಅವರ ಆರೋಗ್ಯ ಹಾಳಾಗೇ ಆಗುತ್ತೆ. ಆದರೆ ಈ ಕಳ್ಳಭಟ್ಟಿ ಸಾರಾಯಿ ತಯಾರಿಕೆ ಬಗ್ಗೆ ತಿಂಗಳಿಗೆ ಇಂತಿಷ್ಟು ಕೇಸುಗಳನ್ನು ಹಾಕಲೇಬೇಕೆಂಬ ಒತ್ತಾಯವನ್ನು ಪೋಲೀಸ್ ಇಲಾಖೆಗೆ ಸರ್ಕಾರ ಹಾಕಿರುವುದರಿಂದ ಅವರು.........

ಶ್ರೀ ಟಿ. ಮರಿಯಪ್ಪ.—ಎಲ್ಲೆಲ್ಲಿ ಈ ಕೇಸುಗಳು ನಡೆಯುತ್ತಿವೆಯೋ ಅಲ್ಲಿ ಮಾತ್ರ ಆಕ್ಷನ್ ತೆಗೆದುಕೊಳ್ಳಬೇಕೆಂದು ಆರ್ಡರ್ ಮಾಡಿದ್ದೇವೆ. ಆದರೆ ಇಷ್ಟು ಕೇಸುಗಳನ್ನು ಹಾಕಲೇಬೇಕೆಂದು ನಾವೇನೂ ನಿಗದಿ ಮಾಡಿಲ್ಲ.

ಶ್ರೀ ಬಿ. ಎಸ್. ಶಂಕರಪ್ಪ.—ಹಾಗಾದರೆ ಸ್ವಾಮೀ ಮೊನ್ನೆತಾನೆ ಕಡೂರಿನ ಹತ್ತಿರ ಆ ಡಿ. ಎಸ್. ಪಿ. ಅವರೇ ರಿವಾಲ್ವರ್ ತೆಗೆದುಕೊಂಡುಹೋಗಿ ಅಲ್ಲಿ ಹೊಡೆದಾಟವೇ ನಡೆಯಿತಲ್ಲ. ಆದರೆ ಈ ದಿವಸ ಅಲ್ಲಿ ಏನಾಯಿತು ? ಸ್ವಾಮಿ ನಾವು ಇದನ್ನು ಒಂದೇ ಮಾತಿನಲ್ಲಿ ಹೇಳಿ ಮುಗಿಸ ಬೇಕೆಂದರೆ ಈ ದಿವಸ ಈ ಕಳ್ಳಭಟ್ಟಿ ಸಾರಾಯಿಯು ಒಂದು ಗ್ರಾಮ ಕೈಗಾರಿಕೆಯಾಗಿ ನಡೆಯು ತ್ತಿದೆ. ಊರಿನ ಜನರಲ್ಲಿ ಕೆಲವು ಮುಖಂಡರುಗಳು ಇದಕ್ಕೆ ಷರೀಕಾಗಿರುತ್ತಾರೆ. ಎಲ್ಲವೂ ಮಾಮೂಲುಮೇಲೆ ನಡೆದುಕೊಂಡು ಹೋಗುತ್ತಿದೆ. ಹೀಗಾಗಿ ಈ ದಿವಸ ದೇಶದಲ್ಲಿ ಬಹಳ ಜನರ ಆರೋಗ್ಯ ಕೆಡುತ್ತಿದೆ. ಈ ಪಾನನಿರೋಧ ಇಲಾಖೆಯ ಮೇಲ್ವಿಚಾರಣೆಯನ್ನು ಪೋಲೀಸ್ ಇಲಾಖೆ ಯಿಂದ ತಪ್ಪಿಸಿ ಇದಕ್ಕೆ ಬೇರೆ ಜನರನ್ನು ನೇಮಕ ಮಾಡುವುದು ಒಳ್ಳೆಯದು.

Sri H. M. CHANNABASAPPA.—If the Hon'ble Member assures us of the Co-operation, he can give at his command, we will try and make it a success.

ಶ್ರೀ ಬಿ. ಎಸ್. ಶಂಕರಪ್ಪ.—ಸ್ವಾಮಿ, ಇನ್ನು ಹೊಸದುರ್ಗ ತಾಲ್ಲೂಕಿನಲ್ಲಿ ಎಂಟು-ಹತ್ತು ಮೈನುಗಳಿರುತ್ತವೆ. ಒಂದಕ್ಕೂ ಹೋಗಿಬರಲು ಸರಿಯಾದ ರಸ್ತೆಯಿಲ್ಲ. ಕಮ್ಮರಡಿ, ಮತ್ತೋಡು ಹಾರೋಹಳ್ಳಿ ಇತ್ಯಾದಿ ಮೈನುಗಳು ರಸ್ತೆ ಸಂಚಾರಕ್ಕೆ ನಾಲಾಯಕ್ಕಾಗಿದೆ. ಸರ್ಕಾರಕ್ಕೆ ಈ ಮೈನುಗಳಿಂದ ಬೇಕಾದಷ್ಟು ರಾಯಲ್ಟಿ ಬರುತ್ತಿದೆ. ನಾನು ಮುಖ್ಯ ಮಂತ್ರಿಗಳಿಗೆ ಈ ಬಗ್ಗೆ ಒಂದು ಪ್ರತ್ಯೇಕ ಪಟ್ಟಿಯನ್ನೇ ಕೊಟ್ಟಿದ್ದೇನೆ. ಆದರೂ ಅದೇಕೋ ಸರ್ಕಾರದವರು ಈ ವಿಚಾರ ದಲ್ಲಿ ತುಂಬಾ ಅಲಕ್ಷ್ಯ ಮನೋಭಾವದಿಂದಿದ್ದಾರೆ. ಬಹುಶಃ ನಾನು ಕಾಂಗ್ರೆಸ್ ಪಾರ್ಟಿಗೆ ಸೇರಿಲ್ಲವೆಂತಲೋ ಏನೋ !

ಇನ್ನು ನಮ್ಮ ಚುನಾವಣೆ ಕ್ಷೇತ್ರದಲ್ಲಿರತಕ್ಕ ವಜ್ರಾ ಪ್ರಾಜೆಕ್ಟ್-ಗುಂಡಿಹಳ್ಳ ಪ್ರಾಜೆಕ್ಟ್ ಗಳ ಬಗ್ಗೆ ಮಾನ್ಯ ಲೋಕೋಪಯೋಗಿ ಶಾಖೆಯ ಮಂತ್ರಿಗಳು ಇವುಗಳನ್ನು ಖಂಡಿತ ಮಾಡಿಸಿ ಕೊಡುತ್ತೇನೆಂದು ಭರವಸೆ ಕೊಟ್ಟಿದ್ದರು. ನಾನೂ ಮತ್ತು ಮಂತ್ರಿಗಳೂ ಒಂದು ದಿವಸ ಕಾರಿನಲ್ಲಿ ನಮ್ಮ ಕ್ಷೇತ್ರದಲ್ಲಿ ಹೋಗುತ್ತಿರುವಾಗ ಈ ಪ್ರಾಜೆಕ್ಟುಗಳ ವಿಷಯವಾಗಿ ಇವುಗಳೆಲ್ಲ a drop in a Ocean ಎಂತ ಹೇಳಿದ್ದರು. ಎಪ್ಪತ್ತೆಂಟು ಸಾವಿರದ್ದೆಲ್ಲ ಏನು ದೊಡ್ಡ ವಿಷಯ ಎಂತ ಹೇಳಿದ್ದರು.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಹೇಳಿದ್ದು ನಿಜ. ಆದರೆ ಆ ವಿಚಾರ ಯಾವುದು ಎಂಬುದನ್ನು ಮಾನ್ಯ ಸದಸ್ಯರು ಬದಲಾಯಿಸಿದ್ದಾರೆ. ನಾನು ಒಪ್ಪಿಕೊಂಡಿದ್ದುದು ಈ ಪ್ರಾಜೆಕ್ಟುಗಳ ಸರ್ವೆ ಮಾಡಿಸುತ್ತೇನೆ ಎಂತ ಹೇಳಿದ್ದೆ. ಈ ವಜ್ರಾ ಪ್ರಾಜೆಕ್ಟಿನಲ್ಲಿ ನೀರು ನಿಲ್ಲು ತ್ತದೆಯೇ ಎಂಬುದನ್ನು ಪರೀಕ್ಷೆ ಮಾಡಿಸಲಾಗುತ್ತೆಂದೂ ಸಹ ತಿಳಿಸಿದ್ದೆ ಅಷ್ಟೇ ಹೊರತು ಈ

[ಶ್ರೀ ಎಚ್. ಎಂ. ಚನ್ನಬಸಪ್ಪ]

ಪ್ರಾಜೆಕ್ಟುಗಳನ್ನು ಏಕ್‌ದಂ ಮಂಜೂರು ಮಾಡೇ ಬಿಡುತ್ತೇನೆ ಎಂತ ಏನೂ ನಾನು ಹೇಳಿರಲಿಲ್ಲ. ಮೇಲಾಗಿ ಮೇಲೆ ಶ್ರೀರಾಮಪುರ ಕೆರೆಯಿದೆ. ಅದಕ್ಕೆ ಹೋಗತಕ್ಕ ನೀರನ್ನು ಡೈವರ್ಟ್ ಮಾಡ ಬೇಕಾಗುತ್ತೆ. ಇದರಿಂದ ಆ ಕೆರೆಗೇನಾದರೂ ತೊಂದರೆ ಆಗುತ್ತೆಯೇ ಎಂಬುದನ್ನು ಸಹ ಪರಿ ಶೀಲಿಸಬೇಕಾಗುತ್ತದೆ ಎಂತ ಇಷ್ಟನ್ನೆಲ್ಲ ತಿಳಿಸಿದ್ದೆ.

ಶ್ರೀ ಬಿ. ಎಸ್. ಶಂಕರಪ್ಪ.-ಹೋಗಲಿ ಸ್ವಾಮಿ, ಹಿರಿಯೂರು ತಾಲ್ಲೂಕಿನಲ್ಲಿ ಗುಂಡಿಹಳ್ಳಕ್ಕೆ ಒಂದು ಸೇತುವೆ ಹಾಕತಕ್ಕ ಕೆಲಸವೋ? ಅಲ್ಲಿ ಒಬ್ಬರು ಬಿದ್ದುಹೋಗಿ ಬೇಕಾದಷ್ಟು ತೊಂದರೆ ಆಗಿದೆ. ಈ ಸೇತುವೆ ಕಟ್ಟಲು 1957ರಲ್ಲೇ ಅಂದಾಜು ತಯಾರಾಯಿತು. ಮತ್ತೆ ಅದು 1959 ರಲ್ಲಿ ಬದಲಾವಣೆ ಆಗಿ 1 ಲಕ್ಷ 80 ಸಾವಿರಕ್ಕೆ ರಿ-ಎಸ್ಟಿಮೇಟ್ ಆಯಿತು. ಮತ್ತೆ ಇದೂ ಸಹ ಈಗ ಡಿಸೈನ್ ಬದಲಾವಣೆ ಮಾಡುತ್ತೇವೆಂದು ನಿಲ್ಲಿಸಿದ್ದಾರೆ. ಹೀಗಾಗಿ ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ ಎಂಬ ಹಾಗಾಗಿದೆ ನಮ್ಮ ಬಾಳು. ಇನ್ನಾದರೂ ರಾಜ್ಯ ಸರ್ಕಾರದ ಆಡಳಿತ ಸೂತ್ರಹಿಡಿದಿರುವ ಜನರು ದೇಶದ ಹಿತದೃಷ್ಟಿಯಿಂದ ನಿಷ್ಪಕ್ಷಪಾತ ಭಾವನೆಯಿಂದ ಕೆಲಸ ಮಾಡಬೇಕೆಂದು ನನ್ನ ಈ ನಾಲ್ಕು ಮಾತುಗಳನ್ನು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

† ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮಿ, ಈಗ ನಮ್ಮ ಅರ್ಥಮಂತ್ರಿಗಳು ಈ ಸಭೆಯ ಎದುರಿಗೆ ಇರಿಸಿರತಕ್ಕ ಬಡ್ಜೆಟ್ಟನ್ನು ಸಾಧಾರಣವಾಗಿ ಸ್ವಾಗತಿಸುತ್ತ ಕೆಲವು ಮಾತು ಗಳನ್ನು ಹೇಳುವುದಕ್ಕೆ ಅಪೇಕ್ಷೆ ಮಾಡುತ್ತೇನೆ.

ಆಮೇಲೆ ಈಗ ಬಡ್ಜೆಟ್ಟಿನಲ್ಲಿ ಸೂಚಿಸಲಾಗಿರತಕ್ಕ ಕರಗಳ ಬಗ್ಗೆ ಒಂದು ವಿಷಯವನ್ನು ವಿವೇಚನೆ ಮಾಡುವುದು ನನ್ನ ಮೊದಲನೇ ಕರ್ತವ್ಯ. ಹೀಗೆ ಈಗ ಹೇಳಿರತಕ್ಕ ಕರಗಳ ಬಗ್ಗೆ, ಕಂದಾಯದ ಬಗ್ಗೆ ಅಥವಾ ಈ ಸರ್-ಛಾರ್ಜುಗಳ ಬಗ್ಗೆ ಆಗಲೀ, ಭೂಕಂದಾಯದ ಬಗ್ಗೆಯಾಗಲೀ ಇವು ಕೆಲವು ಮಟ್ಟಿಗೆ ನನ್ನ ವಿವೇಚನೆಗೊಳಗಾಗಿರುವುದರಲ್ಲಿ ಇವು ಯಾವ ರೀತಿಯಿವೆ ಎಂದರೆ–ಈಗ ಭೂಕಂದಾಯದಮೇಲೆ ಸರ್ ಛಾರ್ಜುಹಾಕುವುದೆಂದರೆ ತತ್ತ್ವಶಃ ನಾನು ಇದಕ್ಕೆ ಒಪ್ಪಿಕೊಳ್ಳು ತ್ತೇನೆ. ಕೆಲವು ಕಡೆ ಈ ಬಗ್ಗೆ ವಿನಾಯ್ತಿ ಕೊಡುವುದಕ್ಕೂ ನಾನು ಒಪ್ಪಿಕೊಳ್ಳುತ್ತೇನೆ. ಈ ಸಣ್ಣ ಹಿಡುವಳಿದಾರರ ಮೇಲೆ ಇಡೀ ಕಂದಾಯವನ್ನೇ ಹಾಕದಿದ್ದರೂ ಅದಕ್ಕೂ ನನ್ನ ಅಭ್ಯಂತರವೇನಿಲ್ಲ. ಆದರೆ ಇದರಲ್ಲಿ ಒಂದು ವಿಚಾರವೇಸಿದೆ ಎಂದರೆ ಈಗ ವಿಧಿಸತಕ್ಕ ಸರ್ ಛಾರ್ಜ್ ಏನಿದೆ ಇದು ಮುಂದೆ ಭೂಕಂದಾಯಗಳ ಪುನರ್–ಪರಿಶೀಲನೆ ಆದಾಗ ಹೊಸ ಕಂದಾಯ ಜಾರಿಗೆ ಬಂದಮೇಲೆ ಈ ಸರ್ ಛಾರ್ಜನ್ನು ನಿಲ್ಲಿಸುತ್ತೇವೆಂಬ ಒಂದು ಭರವಸೆಯನ್ನು ಆಶ್ವಾಸನವನ್ನು ನಮಗೀಗ ಸರ್ಕಾರದವರು ನೀಡಬೇಕಾಗಿದೆ. ಮೇಲಾಗಿ ಈ ವಿಚಾರದಲ್ಲಿ ಒಂದು ಕಾನೂನು ಕೂಡ ಮಾಡ ಬೇಕಾಗಿರುತ್ತೆಂದು ಹೇಳುತ್ತೇನೆ. ಈ ದಿವಸ ಈ ಸರ್–ಛಾರ್ಜನ್ನು ನಿರೂಪಿಸುವಲ್ಲಿ ಹಳ್ಳಿಯ ಜನರಿಗೆ ಒಂದು ವಿಪರೀತವಾಗಿರುತ್ತೆ. ಅದು ಯಾವ ರೀತಿಯಲ್ಲಿ ಎಂದರೆ ಈ ತೆರಿಗೆಗಳು ಏಕರೂಪತೆ ಯಾವ ಪ್ರದೇಶಕ್ಕೆ ಯಾವ ರೀತಿ ಅನ್ವಯಿಸುತ್ತದೋ ಆರೀತಿ ನೀವು ಈ ಕಂದಾಯವನ್ನು ಹೇರ ಬೇಕಾಗಿದೆ. ಇದರಿಂದ ಪ್ರತಿಯೊಂದು ಜಿಲ್ಲೆಗೂ ಸರಾಸರಿ ಎಕರೆಗೆಷ್ಟು ಕಂದಾಯ ಬೀಳುತ್ತೆ ಅನ್ನುವುದನ್ನು ಸರ್ಕಾರ ಪರಿಶೀಲನೆ ಮಾಡಬೇಕು.

ಇನ್ನು ಎರಡನೆಯದಾಗಿ ಮುಂಬೈ ಪ್ರದೇಶದಲ್ಲಿ ವಿಲೀನವಾದ ಸುಮಾರು 19 ಸಣ್ಣಸಣ್ಣ ಸಂಸ್ಥಾನಗಳಿದ್ದವು. ಅಲ್ಲಿನ ಭೂಕಂದಾಯ ಭೂವಡೆಯರಿಗೆ ಗೇಣಿದಾರರು ಕೊಡುತ್ತಿದ್ದ ಲೇವಣಿಯೂ ಸ್ವಲ್ಪ ಹೆಚ್ಚುಕಡಿಮೆ ಅಷ್ಟೇ ಇರುತ್ತಿತ್ತು ಎಂದರೆ ಅದೇನೂ ಒಂದು ಅತಿಶಯೋಕ್ತಿ ಯಲ್ಲ. ಈ ದಿವಸ ನಮ್ಮ ಮುಖ್ಯ ಮಂತ್ರಿಗಳು ಬಂದಿರುವ ಸಂಸ್ಥಾನ ಆದರೆ ಆ ಜಮಖಂಡಿ ಸಂಸ್ಥಾನದಲ್ಲಿ ಕೆಲವು ಕಡೆ ಎಕರೆಗೆ ಈ ಹಿಂದೆ ನಾಲ್ಕು-ಐದು ರೂಪಾಯಿಗಳ ಭೂಕಂದಾಯವಿತ್ತು. ಸ್ವಾತಂತ್ರ್ಯ ಹೋರಾಟ ನಡೆದಿತ್ತೀಚೆಗೆ ಇದು 100ಕ್ಕೆ 25ರಷ್ಟು ಕಮ್ಮಿ ಮಾಡಲಾಯಿತು.

2-30 P.M.

ರಾಮದುರ್ಗ ಸವಣೂರ ಮುಂತಾದ ಹಿಂದಕ್ಕೆ ಇದ್ದ 19 ಸಣ್ಣ ಸಣ್ಣ ಸಂಸ್ಥಾನಗಳ ಪ್ರದೇಶದಲ್ಲಿ ಭೂಕಂದಾಯದ ಪ್ರಮಾಣ ಹೆಚ್ಚಾಗಿದೆ. ಅಲ್ಲಿ ನ್ಯಾಯ ದೊರಕಿಸಿಕೊಡಬೇಕು. ಆದ್ದರಿಂದ ಸರಛಾರ್ಜ ಹಾಕುವ ವಿಚಾರದಲ್ಲಿ ಯೋಚನೆ ಮಾಡಬೇಕಾಗಿದೆ. ಮುಖ್ಯವಾಗಿ ಒಂದು ಮಾತು ಹೇಳಬೇಕಾಗಿದೆ. ಭೂಕಂದಾಯ ವಸೂಲು ಮಾಡಿ ಬೆಂಗಳೂರು ಟ್ರೆಜರಿಗೆ ಹಣ ಭರ್ತಿ ಮಾಡಬಾರದು. ಸರಚಾರ್ಜ ರೂಪದಿಂದ ಬರತಕ್ಕ ಹಣವನ್ನು ಪಂಚಾಯತಿಗಳಿಗೆ ತಾಲ್ಲೂಕ್ ಬೋರ್ಡುಗಳಿಗೆ ಕೊಟ್ಟುಬಿಡುವುದು ಒಳ್ಳೆಯದು. ಈ ಹಣ ದುರುಪಯೋಗವಾಗದಂತೆ ನೋಡಿಕೊಳ್ಳುವುದು ಅವಶ್ಯಕ. ಹಳ್ಳಿಗಾಡಿನಿಂದ ಬರತಕ್ಕ ಹಣವನ್ನು ಹಳ್ಳಿಗಳ ಅಭಿವೃದ್ಧಿಗಾಗಿ ಉಪಯೋಗಿಸಬೇಕಾದುದು ನ್ಯಾಯ. ಈ ರೀತಿ ಮಾಡಲಾಗುವುದಿಲ್ಲವೆಂದು ಅನೇಕ ದಿನಗಳಿಂದ ಕೂಗು ಇದೆ. ಇದು ಪೂರ್ತಿಯಾಗಿ ಸುಳ್ಳು ಎಂದು ಹೇಳುವುದಕ್ಕಾಗುವುದಿಲ್ಲ. ಪಟ್ಟಣದಲ್ಲಿರತಕ್ಕ ಜನರಿಗೆ ಹೆಚ್ಚು ಸೌಕರ್ಯ ಒದಗಿಸಿಕೊಡುತ್ತಿರುವುದರಿಂದ ಅಂಥವರ ಮೇಲೆ ಹೆಚ್ಚಿನ ತೆರಿಗೆ ಭಾರ ಹಾಕಬಹುದು. ತೆರಿಗೆ ಉತ್ಪತ್ತಿ ಬೆಳೆಸುವುದಕ್ಕೆ ಇನ್ನೂ ಅನೇಕ ಮಾರ್ಗಗಳಿವೆ. ಅವುಗಳನ್ನು ಯೋಚನೆ ಮಾಡಬೇಕು. ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಮೇಲೆ ಟ್ಯಾಕ್ಸ್ ಹಾಕುವುದಕ್ಕೆ ಏತಕ್ಕೆ ಯೋಚನೆ ಮಾಡಬಾರದು? ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆ ಹಾಕಬಹುದು. ತೆರಿಗೆ ವಿಧಿಸುವ ಮೂಲ ಉದ್ದೇಶ ಏನದೆಯೆಂದರೆ ದೇಶದಲ್ಲಿರುವ ಬಡತನಶ್ರೀಮಂತಿಕೆ ನಡುವೆ ಇರತಕ್ಕ ಅಂತರ ಕಡಿಮೆಯಾಗಬೇಕು. ಆದ್ದರಿಂದ ತೆರಿಗೆಯ ಭಾರವನ್ನು ಶ್ರೀಮಂತರ ಮೇಲೆ ಹಾಕುವುದು ಒಳ್ಳೆಯದು. ಇದನ್ನು ವಿಚಾರಮಾಡುವುದು ಅಗತ್ಯ. ಮೂರನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ 2½ ಕೋಟಿ ರೂಪಾಯಿಯಷ್ಟು ಹೆಚ್ಚಿಗೆ ತೆರಿಗೆ ಹಾಕಿದ್ದೀರಿ. ಒಟ್ಟಿಗೆ ಐದು ವರ್ಷಗಳಲ್ಲಿ ಸುಮಾರು 45 ಕೋಟಿ ರೂಪಾಯಿಗಳಷ್ಟು ಹಣ ಈ ಬಾಬಿನಿಂದ ಬರಬೇಕಾಗಿದೆ. ಇಷ್ಟು ಹಣ ಯಾವ ರೀತಿ ಸಂಪಾದಿಸುತ್ತೀರಿ? ಅದರ ರೂಪರೇಷೆ ಏನಾದರೂ ಹೇಳಿದರೆ ಒಳ್ಳೆಯದಾಗುತ್ತದೆ. ಬಡತನ ಮತ್ತು ಶ್ರೀಮಂತರ ಮಧ್ಯೆ ಇರುವ ಅಂತರ ಕಡಿಮೆ ಮಾಡಬೇಕಾದುದು ಅಗತ್ಯ ಎಂಬ ನಿರ್ದಿಷ್ಟ ಗುರಿಯನ್ನು ಇಟ್ಟುಕೊಂಡು ಮುಂದೆ ಸಾಗಬೇಕು ಎಂದು ನಾನು ಈ ಸಂದರ್ಭದಲ್ಲಿ ಮತ್ತೊಮ್ಮೆ ಹೇಳುತ್ತೇನೆ. ಈ ದೃಷ್ಟಿಯಿಂದ ಒಂದೆರಡು ಸೂಚನೆಗಳನ್ನು ಕೊಡುತ್ತೇನೆ. ಲೋಕೋಪಯೋಗಿ ಖಾತೆಯು ಸರಕಾರದ ಕಣ್ಣು ಇದ್ದ ಹಾಗೆ ಇದೆ. ಅನೇಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿದೆ. ಕೆಲವು ಕಡೆ ಕೈಕೊಂಡ ಕೆಲಸಗಳನ್ನು ಪೂರ್ತಿಯಾಗಿಲ್ಲ. ಸರಕಾರದ ಹಣ ಈ ಇಲಾಖೆಯ ಮೂಲಕ ಅನೇಕ ಯೋಜನೆಗಳಿಗಾಗಿ ಖರ್ಚಾಗುತ್ತದೆ. ಈ ಕಾರ್ಯಗಳನ್ನು ಮಿತವ್ಯಯದಿಂದ ಮಾಡಿಸಬೇಕು. ಯಾವದೇ ರೀತಿ ದುಂದುಗಾರಿಕೆ ಆಗಬಾರದು. ಒಂದು ಉದಾಹರಣೆ ಹೇಳಬೇಕೆಂದಿದ್ದೇನೆ. ಖಾದಿ ಯೋಜನೆಯಲ್ಲಿ ಒಂದು ರೂಪಾಯಿ ಖಾದಿ ಬಟ್ಟೆ ಕೊಂಡುಕೊಂಡರೆ ಮೂರು ಆಣೆ ರಿಬೇಟ್ ಕೊಡಲಾಗುತ್ತದೆ. ಈ ರೀತಿ ರಿಬೇಟ್ ಕೊಟ್ಟು ಇಂಥ ಉದ್ಯಮವನ್ನು ಎಷ್ಟು ದಿವಸ ನಡೆಸಿಕೊಂಡು ಬರಲು ಸಾಧ್ಯವಿದೆ? ಪ್ರಾರಂಭದಲ್ಲಿ ಪ್ರಚಾರ ಮಾಡುವುದಕ್ಕೆ ಹಾಗೆ ಮಾಡಬಹುದು. ಆದರೆ ಕೊನೆಯವರೆಗೆ ಹಾಗೆ ಮಾಡುವುದು ಸರಿಯಲ್ಲ. ಇಂಥ ಗ್ರಾಮ ಕೈಗಾರಿಕೆಗಳು ಸ್ವಾವಲಂಬನವಾಗಿರಬೇಕು. ನನ್ನ ಅಭಿಪ್ರಾಯದಲ್ಲಿ ಖಾದಿ ಉದ್ಯಮೆಯು ಸ್ವಾವಲಂಬನವಾಗಬೇಕು. ಈ ದೃಷ್ಟಿಯಿಂದ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಇದನ್ನು ಆಲೋಚನೆ ಮಾಡುವುದು ಅಗತ್ಯ. ಇದರಲ್ಲಿ ಬಹಳ ದೋಷಗಳಿವೆ. ಅವನ್ನೆಲ್ಲಾ ಹೇಳುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ಇದನ್ನು ಒಂದು ದೃಷ್ಟಿಯಿಂದ ತಾವು ವಿಚಾರ ಮಾಡಬೇಕು. ಏನೆಂದರೆ ನಮ್ಮ ಖರ್ಚನ್ನು ಕಡಿಮೆ ಮಾಡುವುದು ಮತ್ತು ಹೆಚ್ಚು ಹಣವನ್ನು ಗಳಿಸುವುದು, ಈ ರೀತಿ ಮಾಡಿದರೆ ನಾವು ಹೆಚ್ಚು ಹೆಚ್ಚು ಸುಖೀರಾಜ್ಯವನ್ನು ಈ ದೇಶಕ್ಕೆ ಒದಗಿಸಬಲ್ಲೆವು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಇನ್ನು ನಾಲ್ಕು ಜನ ಮಂತ್ರಿಗಳಾದರೆ ಸುಖೀ ರಾಜ್ಯವಾಗುತ್ತದೆ !

ಶ್ರೀ ಎ. ಜಿ. ದೊಡ್ಡಮೇಟಿ.—ನಾನು ವಿರೋಧ ಪಕ್ಷದವರಂತೆ ಕೇವಲ ಪಾಕ್ಷಿಕವಾಗಿ ಮಾತನಾಡುವುದಿಲ್ಲವೆಂದು ಈಗಿನ ತನಕ ನಡೆದ ನನ್ನ ಮಾತಿನ ಮೇಲಿಂದ ತಿಳಿದುಕೊಳ್ಳಬಹುದು. ಇದ್ದುದನ್ನು ಸ್ಪಷ್ಟವಾಗಿ ಹೇಳುವುದು ಮತ್ತು ಅವರನ್ನು ದಾರಿಗೆ ತರುವುದಕ್ಕೆ ಪ್ರಯತ್ನ ಮಾಡತಕ್ಕದ್ದು ಮತ್ತು ಎಲ್ಲಿ ಒಳ್ಳೆಯ ದಾರಿಯಲ್ಲಿದ್ದಾರೆ ಅಲ್ಲಿ ನಮ್ಮ ಕೈಜೋಡಿಸಿ ಅವರ ಕೈ ಬಲಪಡಿಸಬೇಕು. ಈ ರೀತಿ ಕಾಂಗ್ರೆಸ್ ಪಕ್ಷದವರೂ ಮಾಡಬೇಕು, ವಿರೋಧಿ ಪಕ್ಷದವರೂ ಮಾಡಬೇಕು. ಸುಮ್ಮನೆ ವಿರೋಧಕ್ಕಾಗಿ ವಿರೋಧ ಮಾಡಬಾರದು.

ಸಾಧಾರಣವಾಗಿ ಲೋಕೋಪಯೋಗಿ ಶಾಖೆಯಲ್ಲಿ ಕಾಮಗಾರಿಗಳು ನಿಧಾನವಾಗುತ್ತಿವೆ ಯೆನ್ನುವುದಕ್ಕೆ ಕೆಲವೊಂದು ಉದಾಹರಣೆಗಳನ್ನು ನಾನು ಹೇಳಬೇಕು. ಶ್ರೀಮಾನ್ ಚನ್ನಬಸಪ್ಪನವರು ಲೋಕೋಪಯೋಗಿ ಶಾಖೆಯ ಮಂತ್ರಿಗಳಾಗಿದ್ದಾಗ ಸುಮಾರಿಗೆ ಒಂದು ಒಂದೂವರೆ ವರ್ಷದ ಹಿಂದೆ ಕೆಲವು ಚಿಕ್ಕ ನೀರಾವರಿ ಕೆರೆಗಳಿಗೆ ಭೇಟಿ ಕೊಟ್ಟು ಅವುಗಳನ್ನು ಆದಷ್ಟು ಬೇಗನೆ ಚಾಲೂ ಮಾಡಲಿಕ್ಕೆ ಅಭಯ ಕೊಟ್ಟು ಆ ರೀತಿ ಕಾರ್ಯ ನಡೆಸಲಿಕ್ಕೆ ಹೇಳಿದರು. ಆದರೆ ನನಗೆ ಗೊತ್ತಿದ್ದಂತೆ ಕೆಲವು ಕೆರೆಗಳ ದಾಖಲೆಗಳು ಸುಮಾರಿಗೆ 10-15 ಸಲ ಚೀಫ್ ಇಂಜಿನೀಯರ್ ಆಫೀಸಿನಿಂದ ಸೂಪರಿಂಟೆಂಡಿಂಗ್ ಇಂಜಿನೀಯರ್ ಆಫೀಸಿಗೆ, ಅಲ್ಲಿಂದ ಎಕ್ಸಿಕ್ಯೂಟಿವ್ ಇಂಜಿನೀಯರ್ ಆಫೀಸಿಗೆ ಮರಳಿ ಮರಳಿ ಪ್ರಯಾಣ ಮಾಡುತ್ತಿದೆ. ಮರಳಿ ಮರಳಿ ಪ್ರಯಾಣ ಎಷ್ಟು ವೆಚ್ಚದ್ದು, ಎಷ್ಟು ಕಷ್ಟಕರದ್ದು ಮತ್ತು ಎಷ್ಟು ಆಯಸ್ಸು ಬೇಕು ಎನ್ನುವುದನ್ನು ತಾವು ವಿಚಾರ ಮಾಡಬೇಕು. ಕಳೆದ ವರ್ಷ ಜುಲೈ ತಿಂಗಳಿನಲ್ಲಿ ಬರಗಾಲ ಪ್ರಸಂಗ ಒದಗಿದಾಗ್ಗೆ ರೋಣ ತಾಲ್ಲೂಕಿನ ಪಾರ್ವತಿ ಕೊಳ ಮತ್ತು ನಾಗೇಂದ್ರಗಡ, ಈ ಎರಡು ಕೆರೆಗಳನ್ನು ತೆಗೆದುಕೊಳ್ಳಬೇಕೆಂದು ಆದೇಶ ಕೊಟ್ಟರು. ಇವೊತ್ತಿನ ತನಕ ಅದನ್ನು ತೆಗೆದುಕೊಳ್ಳಲಿಲ್ಲ. ಆಮೇಲೆ ಬರಗಾಲ ಮುಗಿಯಿತು ಎಂದುಬಿಟ್ಟರು. ಇವು ಬರಗಾಲಕ್ಕಾಗಿ ತೆಗೆದುಕೊಳ್ಳುವಂಥ ಕಾಮಗಾರಿಗಳಲ್ಲ. ಲೋಕೋಪಯೋಗಿ ಇಲಾಖೆಯಿಂದ ಚಿಕ್ಕ ನೀರಾವರಿ ಯೋಜನೆಯಲ್ಲಿ ತೆಗೆದುಕೊಳ್ಳುವಂಥಾದ್ದು. ಇದನ್ನು ತೆಗೆದುಕೊಂಡರೆ ಬರಗಾಲದಲ್ಲಿ ಉಪಯೋಗವಾಗುತ್ತಿತ್ತು ಎಂದು ಹೇಳುವಂಥಾದ್ದು. ಅದು ಇನ್ನೂವರೆಗೂ ಆಗಿಲ್ಲ. ಸ್ವತಃ ಚೀಫ್ ಇಂಜಿನೀಯರನ್ನು ಭೇಟಿಯಾಗಿ ಅವರಿಂದ ಸೂಪರಿಂಟೆಂಡಿಂಗ್ ಇಂಜಿನೀಯರಿಗೆ D.O. letter ಬರೆಸಿದೆ. ಇನ್ನು ಐದಾರು ದಿವಸಗಳಲ್ಲಿ ಆ ಕೆಲಸವನ್ನು ಮಾಡಲಾಗುತ್ತದೆ ಎಂದು ಕಾಗದ ಬರೆದರು. ಐದಾರು ತಿಂಗಳಾದರೂ ಇನ್ನೂ ಆಗಿಲ್ಲ. ಇದನ್ನು ಉದಾಹರಣಾರ್ಥವಾಗಿ ಹೇಳುತ್ತಿದ್ದೇನೆ. ಇದಲ್ಲದೆ ಹಲವಾರು ಸೇತುವೆಗಳು ಮಂಜೂರಾಗಿವೆ. ಆ ಸೇತುವೆಗಳು ಮಂಜೂರಾದದ್ದು ಅನೇಕ ಕಾರಣಗಳಿಂದ. ಆ ಕಾಮಗಾರಿಗಳೂ ಪ್ರಾರಂಭವಾಗಿಲ್ಲ. ಇದಕ್ಕೆ ಮುಖ್ಯ ಕಾರಣವೇನೆಂದರೆ ಯೋಗ್ಯ ಕಂಟ್ರಾಕ್ಟರುಗಳ ಅಭಾವ. ಯೋಗ್ಯ ಕಂಟ್ರಾಕ್ಟರುಗಳ ಪುರವಠೆಗೂ, ಅವರನ್ನು ಒದಗಿಸುವುದಕ್ಕೂ ಸರ್ಕಾರ ಕೆಲವೊಂದು ಯೋಜನೆಗಳನ್ನು ಸಿದ್ಧ ಮಾಡಿದಂತೆ ಕಾಣುತ್ತದೆ. ಆದರೆ ಅದು ಸಾಕಷ್ಟು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಆ ಯೋಜನೆಯನ್ನು ಪುನರ್ವಿಮರ್ಶಿಸಬೇಕು ಮತ್ತು ಸಾಕಷ್ಟು ಕಂಟ್ರಾಕ್ಟರುಗಳು ಮುಂದೆ ಬರುವಂಥ ರೀತಿಯಲ್ಲಿ ತಾವು ಪ್ರಯತ್ನ ಮಾಡಬೇಕು. ಅನೇಕ ಕಂಟ್ರಾಕ್ಟರುಗಳಿಂದ ದೂರುಗಳು ಕೇಳಿಬರುತ್ತಿವೆ. ನಾನು ಕೆಲವರಿಗೆ ಪುಸಲಾಯಿಸಿ ಕಂಟ್ರಾಕ್ ಕೆಲಸಕ್ಕೆ ಏಕೆ ಹೋಗುವುದಿಲ್ಲ, ಕಂಟ್ರಾಕ್ಟಿಗೆ ಹೋಗಿರಿ ಎಂದು ಹೇಳಿದ್ದಕ್ಕೆ ನಾವೇನೋ ಕೆಲಸ ಮಾಡುತ್ತೇವೆ. ಆದರೆ ದುಡ್ಡು ಕೊಡುವುದಕ್ಕೆ ಮಧ್ಯೆ ಏನೇನೋ ರೀತಿಯೊಳಗೆ ತೊಂದರೆ ಕೊಡುತ್ತಾರೆಂದು ಹೇಳಿದರು. ಈ ರೀತಿಯ ಕೆಲವು ದೂರುಗಳಿವೆ. ಆ ರೀತಿ ಆಗದ ಹಾಗೆ ಮಾಡಬೇಕು. ಕಂಟ್ರಾಕ್ಟರುಗಳು ಮುಂದೆ

ಬರಬೇಕು. ಅವರಿಂದ ಒಳ್ಳೆಯ ಕೆಲಸವಾಗಬೇಕು. ಎಂದರೆ ಅವರಿಗೆ ಆಫೀಸಿನಿಂದ ಹೆಚ್ಚಿನ ಅಡಚಣೆ ಆಗಬಾರದು ಮತ್ತು ಅವರೂ ಪ್ರಾಮಾಣಿಕತೆಯಿಂದ ನಡೆಯುತ್ತಾರೆಯೋ ಇಲ್ಲವೋ ಎಂದೂ ನೋಡಬೇಕು. ಈ ರೀತಿ ವಿಚಾರ ಮಾಡಿ ಲೋಕೋಪಯೋಗಿ ಶಾಖೆಯ ಕಾರ್ಯವನ್ನು ಯಶಸ್ವಿಗೊಳಿಸಬೇಕು. ಮುಂದಿನ ಒಂದು ವರ್ಷದೊಳಗೆ ಮುಗಿಸಬೇಕೆಂಬ ಜಿಗುಟುತನದಿಂದ, 1962ನೆಯ ಇಸವಿಯಲ್ಲಿ ಹೊಸ ಬಡ್ಜೆಟ್ ಮಂಡಿಸುವುವರೊಳಗೆ ಮುಗಿಸಬೇಕು ಎನ್ನುವ ಹಠದಿಂದ ಕೆಲಸ ಮಾಡಬೇಕು. ಈಗ ಎರಡು ವರ್ಷಗಳಲ್ಲಿ ಹೊಳೆ ಆಲೂರ ಹತ್ತಿರ ಮಲಪ್ರಭ ನದಿಗೆ ಒಂದು ಸೇತುವೆಯನ್ನು ಕಟ್ಟುತ್ತೇವೆಂದು ಆಶ್ವಾಸನೆಯನ್ನು ಕೊಟ್ಟರು ಕಳೆದ ಬಡ್ಜೆಟ್ಟಿನಲ್ಲಿ ಇದಕ್ಕೆ ಹತ್ತು ಸಾವಿರ ರೂಪಾಯಿಗಳನ್ನು ಹಾಕಿದ್ದರು. ಈ ಸಲದ ಬಡ್ಜೆಟ್ಟಿನಲ್ಲಿಯೂ ಹತ್ತು ಸಾವಿರ ರೂಪಾಯಿ ಹಾಕಿದ್ದಾರೆ. 14 ಲಕ್ಷ ರೂಪಾಯಿ ಎಸ್ಟಿಮೇಟು ಆದಂಥ ಸೇತುವೆಗೆ ವರ್ಷೇ ವರ್ಷೇ ಹತ್ತು ಸಾವಿರ ರೂಪಾಯಿಗಳನ್ನು ಹಾಕುತ್ತಾ ಹೋದರೆ ಎಂದಿಗೆ ಈ ಕಾರ್ಯವನ್ನು ತಾವು ಮಾಡಬಲ್ಲಿರಿ ? ಇದರ ಚಮತ್ಕಾರ ಸರಿಯಾಗಿ ಅರ್ಥವಾಗುವುದಿಲ್ಲ.

ಪಾನ ಪ್ರತಿಬಂಧದ ವಿಷಯದಲ್ಲಿ, ಧೋರಣೆ ಮತ್ತು ತತ್ವದ ವಿಷಯದಲ್ಲಿ ಬಹುಶಃ ಯಾರು ವಿರೋಧ ಮಾಡುತ್ತಿದ್ದಾರೆಂದು ಕಾಣುವುದಿಲ್ಲ. ಆದರೆ ಕಾರ್ಯಾಚರಣೆಯ ವಿಷಯದಲ್ಲಿ ಯಶಸ್ವಿಯಾಗಿದೆ ಎಂದು ಕೆಲವರೂ, ಯಶಸ್ವಿಯಾಗಿಲ್ಲವೆಂದು ಕೆಲವರೂ ಹೇಳಬಹುದು. ಅದನ್ನು ಯಶಸ್ವಿ ಮಾಡಬೇಕು.

Sri C. M. ARUMUGHAM (K. G. F.).—Why not the Government introduce prohibition in Bangalore and see whether it would be successful or not ? To see whether it is successful or not, they must introduce it in Bangalore where Ministers and big officers live. Sir, it appears to me that prohibition is not introduced in Bangalore because Ministers big officers live here. Because poor people live in K.G.F., prohibition is introduced there. It is like the doctor testing his surgery experiment on a poor man's body.

ಶ್ರೀ ಎ. ಜೆ. ದೊಡ್ಡಮೇಟಿ.—ಕೇವಲ ನೀವು ಜಿಲ್ಲೆಗಳ ವಿಸ್ತರಣೆಯನ್ನು ಹೆಚ್ಚುಮಾಡುತ್ತಾ ಹೋಗುತ್ತಿದ್ದರೆ ಯಶಸ್ವಿಯಾಗುತ್ತದೆ ಎಂದು ತಿಳಿದು ಕೊಂಡಿದ್ದೀರಾ? ನೀವು ಎಷ್ಟು ಕ್ಷೇತ್ರಗಳನ್ನು ಮಾಡಿದರೂ ಅದರೊಳಗೆ ನೂರಕ್ಕೆ ನೂರು ಭಾಗ ಯಶಸ್ವಿಯಾಗುತ್ತದೆಯೇ ಎನ್ನುವುದನ್ನು ತಾವು ಆಲೋಚನೆ ಮಾಡಬೇಕು. ಈಗ ನೀವು ಮಾಡಿರುವ ಆಲೋಚನೆ ಸರಿಯಾದುದಲ್ಲ. ಇದನ್ನು ಸರಿಪಡಿಸಲು ಯಾವ ಕಾರ್ಯಕ್ರಮ ಕೈಗೊಂಡಿದ್ದೀರಿ ಈಗ ಕೈಗೊಂಡಿರುವ ಕ್ರಮ ದೋಷಯುಕ್ತವಿದೆ ಮತ್ತು ತಪ್ಪುತ್ತಿದೆ ಎನ್ನುವುದನ್ನೂ ಬಹುಶಃ ತಾವೂ ಒಪ್ಪಿಕೊಳ್ಳಬೇಕು. ಇದರಲ್ಲಿ ಮೂಲಭೂತವಾದ ಒಂದು ದೋಷವಿದೆ. ಈ ಪಾನ ಪ್ರತಿಬಂಧಕವನ್ನು ಪೋಲೀಸು ಶಾಖೆಗೆ ಒಪ್ಪಿಸಿದ್ದಾರೆ. ಈ ಪೋಲಿಸು ಶಾಖೆಯಲ್ಲಿ ಕುಡಿಯದೆ ಇರುವ ಜನಸಂಖ್ಯೆ ಕಡಿಮೆ ಮಾಡಿದರೆ. ಇಂತಹವರ ಕಡೆಗೆ ಈ ಕೆಲಸವನ್ನು ಒಪ್ಪಿಸುವುದರಿಂದ ಇದರಲ್ಲಿ ಯಶಸ್ಸು ಆಗುತ್ತಿಲ್ಲವೋ ಏನೋ ಎನ್ನುವುದನ್ನು ತಿಳಿಯಬೇಕು. ಇದೂ ಅಲ್ಲದೆ ಕೆಲವರು ಇಲಾಖೆಯಲ್ಲಿ ಕುಡಿಯದೆ ಇರುವಂತಹ ಪೋಲೀಸ್ ಅಧಿಕಾರಿಗಳನ್ನು ನೋಡಿ ಆರಿಸಿ ಅಂತಹವರನ್ನು ಇಲ್ಲಿ ಕೆಲಸಮಾಡಲಿಕ್ಕೆ ಹಾಕುವುದು ಒಳ್ಳೆಯದು ಎಂದು ಸಲಹೆ ಮಾಡಿದ್ದಾರೆ. ಇಡೀ ರಾಜ್ಯದಲ್ಲಿ ಪಾನ ಪ್ರತಿಬಂಧಕವನ್ನು ಜಾರಿಗೆ ತರಬೇಕೆಂದು ಈಗಾಗಲೇ ಒಂದು ತೀರ್ಮಾನವನ್ನು ತೆಗೆದುಕೊಂಡಿರುವುದರಿಂದ ಈ ಕೆಲಸವನ್ನು ಪೋಲೀಸು ಇಲಾಖೆಗೇ ಬಿಡುವುದು ಉತ್ತಮವೇ ಎನ್ನುವ ಪ್ರಶ್ನೆ ಬಂದಿದೆ. ಈ ಪ್ರಶ್ನೆಯನ್ನು ವಿಚಾರಮಾಡುವಾಗ ಒಂದು ದೃಷ್ಟಿಯಲ್ಲೇ ಇದನ್ನು ಸಂಪೂರ್ಣವಾಗಿ ಪೋಲೀಸಿನವರು ಹತೋಟಿಯಲ್ಲಿಡುವುದಕ್ಕೆ ಬದಲಾಗಿ ಇದನ್ನು ಬೇರೆ ಆಡಳಿತದ ಯಂತ್ರಕ್ಕೆ ಇಡುವುದು ಒಳ್ಳೆಯದು.

ಶ್ರೀ ಟಿ. ಮರಿಯಪ್ಪ.—ಮೊದಲು ಬೇರೆ ಯಂತ್ರವಿತ್ತು.

ಶ್ರೀ ಎ. ಜೆ. ದೊಡ್ಡಮೇಟಿ.—ಇದು ಪರಿಣಾಮಕಾರಿಯಾಗಿ ಆಗುವುದು ಹೇಗೆ ಎನ್ನುವ ಬಗ್ಗೆ ತಾವು ತಮ್ಮ ಉತ್ತರದಲ್ಲೇ ಹೇಳಿದರೆ ಸಾಕು. ಈಗ ನೂರಕ್ಕೆ ನೂರಂಶ ಈ ಯೋಜನೆ ಯಶಸ್ವಿಯಾಗಿಲ್ಲ ಎನ್ನುವುದು ಖರೆ. ಇದನ್ನು ಹೇಗೆ ತಿದ್ದುಪಡಿ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ಯೋಚನೆ ಮಾಡಬೇಕು. ಆದರೆ ಇದನ್ನು ಸರಿಪಡಿಸುವುದಕ್ಕಾಗಿ ಮುಂದೆ ಕೆಲವು ದೇಶಭಕ್ತರುಗಳನ್ನು ಕೂಡಿದ ಕಮಿಟಿಯನ್ನು ಮಾಡಬೇಕೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ? ಪಕ್ಷದ ಪ್ರಜೆಗಳಿಗಿಂತ ದೇಶದ ಪ್ರಜೆಗಳು ದೊಡ್ಡವರು ಎನ್ನುವುದನ್ನು ನಾವು ಮರೆಯಬಾರದು. ಇದರಲ್ಲಿ ಕೆಲವರು ಕೇವಲ ನೂರಕ್ಕೆ ನೂರರಷ್ಟು ಜಯ ಗಳಿಸಿದ್ದಾರೆ ಎಂದು ಹೇಳುವವರೂ ಉಂಟು, ಇಲ್ಲ ಎಂದು ಹೇಳವವರೂ ಇದ್ದಾರೆ. ಇದರ ಬಗ್ಗೆ ಸರಿಯಾಗುವಂತಹ ಹೊಸ ಸೂಚನೆಗಳನ್ನು ಮಾಡಬೇಕು. ಇದರ ಬಗ್ಗೆ ಏನು ಮಾಡಬೇಕು, ಯಾವ ರೀತಿಯಲ್ಲಿ ಮಾಡಬೇಕು ಎನ್ನುವುದನ್ನು ಸ್ಪಷ್ಟವಾಗಿ ಬರೆದು ತಮ್ಮ ಕಡೆಗೇ ಕಳುಹಿಸಿಕೊಡುತ್ತೇನೆ

ವ್ಯವಸಾಯದ ಉತ್ಪತ್ತಿಯನ್ನು ಹೆಚ್ಚು ಮಾಡುವ ದೃಷ್ಟಿಯಿಂದ ಗ್ರೋ-ಮೋರ್ ಫುಡ್ ಕ್ಯಾಂಪೇನ್ ಎಂದು ನಮ್ಮ ಸರಕಾರದವರು ಮಾಡುತ್ತಿದ್ದಾರೆ. ಹೀಗೆ ಮಾಡಿದರೆ ರೈತರ ವ್ಯತಿಯಿಂದ, ಇಲ್ಲಿ ಹೆಚ್ಚಾಗಿ ಉತ್ಪತ್ತಿ ಮಾಡಿದಂತಾಯಿತೇ ಎಂದು ನಾನು ಕೇಳುತ್ತೇನೆ. ಇದರಲ್ಲಿ ರೈತರ ಹಿತವನ್ನು ಸಾಧಿಸಲು ಏನು ಆಡಕವಾಗಿದೆ? ಗ್ರೋ ಮೋರ್ ಫುಡ್ ಕ್ಯಾಂಪೇನ್ ಎನ್ನುವುದು ಬರೀ ಪ್ರಚಾರಕ್ಕಾಗಿ ರೊಕ್ಕವನ್ನುವೆಚ್ಚ ಮಾಡುವುದಕ್ಕಾಗಿದೆ ಎಂದು ನಾನು ತಿಳಿಯುತ್ತೇನೆ. ಇದಕ್ಕೆ ಬದಲಾಗಿ ವ್ಯವಸಾಯದ ಉಪಕರಣಗಳಿಗಾಗಿ ಹೆಚ್ಚು ಖರ್ಚು ಮಾಡು ವುದು ಅವಶ್ಯವಲ್ಲವೇ. ಎನುವುದನ್ನು ಇಲ್ಲಿ ವಿಚಾರ ಮಾಡಬೇಕು. ಮೇಲಾಗಿ ಈ ವ್ಯವಸಾಯದಲ್ಲಿ ಬೆಳೆಗಳಿಗೆ ಕ್ರಿಮಿ ಕೀಟಗಳಿಂದಾಗಿ ಉತ್ಪತ್ತಿಯೂ ಹೆಚ್ಚಾಗುವುದಕ್ಕೆ ಬದಲಾಗಿ ಕಡಿಮೆಯಾಯಿತು. ಈ ವರ್ಷದೊಳಗೆ ಮುಂಗಾರಿ ಮಳೆ ಸರಿಯಾಗಿ ಬಂದದ್ದರಿಂದ ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಹತ್ತಿ ಮತ್ತು ಎಳ್ಳು ಬೀಜಗಳನ್ನು ಬಿತ್ತಲು ಅನುಕೂಲ ವಾಯಿತು. ಆದರೆ ಈ ತಿಂಗಳು ಸುಮಾರು 25 ದಿವಸಗಳ ಹಿಂದೆ ಬಹಳ ತೊಂದರೆ ಯಾಗಿ ಈ ಪೀಕು ಫಸಲಿನ ಮೇಲೆ ಒಂದು ತರಹ ಕೆಟ್ಟಗಾಳಿಯು ಬೀಸಿ ಈಗ ಫಸಲು ಬರುವುದನ್ನು ನೋಡುವುದಾದರೆ ಒಂದು ರೂಪಾಯಿಗೆ ನಾಲ್ಕಾಣೆಯಷ್ಟು ಕೂಡ ಹತ್ತಿ ಬೆಳೆ ಬರುವುದಿಲ್ಲ ಇಂತಹ ಪರಿಸ್ಥಿಯನ್ನು ಹತೋಟಿಗೆ ತರಲು ಹೇಗೆ ಆಲೋಚನೆ ಮಾಡಬೇಕು ಎನ್ನುವುದನ್ನು ನಾನು ಇಲ್ಲ ಹೇಳಬೇಕಾಗಿದೆ. ಅದಕ್ಕಾಗಿ ಇಲ್ಲಿ ಇಟ್ಟಿರುವುದು ವ್ಯಾವಹಾರಿಕವಾದ ಬಜೆಟ್ಟು ಆಗಿದೆಯೇ ಹೊರತು ಕ್ರಾಂತಿಕಾರಕವಾದ ಯಾವ ಒಂದು ಯೋಜನೆಯೂ ಇಲ್ಲ ಎಂದು ಹೇಳಬೇಕಾಗಿದೆ. ಅಲ್ಲದೆ ಇಂದು ವ್ಯವಸಾಗಾರರು ಬೆಳದ ಬೆಳೆಗೆ ರೈತರು ಮಾರಲಿಕ್ಕೆ ಇಕ್ಷೂರು ಮಾಡುವಂತಹ ಕ್ರಾಂತಿಕಾರವಾದ ಯೋಜನೆಯನ್ನು ನೀವು ಏನಾದರೂ ಸೂಚಿ ಸಿದ್ದೀರಾ? ಹಾಗೆ ರೈತರು ಹೆಚ್ಚಿನ ಉತ್ಪತ್ತಿಯನ್ನು ಮಾಡಲು ಅವರಿಗೆ ತಕ್ಕ ಸಹಾಯಗಳನ್ನು ಒದಗಿಸಿದ್ದೀರಾ, ಎನ್ನುವುದನ್ನು ನಾವು ಇಲ್ಲ ಯೋಚನೆಮಾಡಿಲ್ಲ. ಬೆಳೆಯನ್ನು ಹೆಚ್ಚು ಬರುವಂತೆ ಮಾಡುವುದು ಸರಕಾರದ ಕರ್ತವ್ಯ ಮತ್ತು ದೇಶದ ಹೊಣೆಯೆಂದು ಭಾವಿಸಿ ಸಾಮೂಹಿಕ ದೃಷ್ಟಿಯಿಂದ ಇವೊತ್ತು ಸೂಚಿಸಿರುವ ಸಲಹೆಗಳನ್ನು ಸರಿಯಾಗಿ ಆಲೋಚನೆ ಮಾಡಿಲ್ಲ. ಆಡಳಿತದಲ್ಲಿ ಒಂದು ಪಾರಿಶುದ್ಧತೆ, ಆಡಳಿತದಲ್ಲ ಪವಿತ್ರತೆ, ಆಡಳಿತದಲ್ಲಿ ಸಮರ್ಥತೆ ಇಲ್ಲದೆ ಹೋದರೆ ಯಾವ ಯೋಜನೆಯೂ ಯಶಸ್ವಿಯಾಗುವುದಿಲ್ಲ ಎನ್ನುವುದನ್ನು ಎಲ್ಲರೂ ಒಪ್ಪತಕ್ಕ ಮಾತು. ಸರಕಾರದಲ್ಲಿರತಕ್ಕ ಜನ ಈ ರೈತ ವರ್ಗದವರಿಗೆ ಅನುಕೂಲವಾಗು ವಂತಹ ನೀತಿಯನ್ನು ಎಷ್ಟು ಪಾರಿಶುದ್ಧತೆಯಿಂದ ನಮ್ಮ ನೌಕರವರ್ಗದವರು ಮಾಡುತ್ತಿದ್ದರೂ ಈ ವರೆಗೆ ನಮ್ಮ ಈ ರೈತವರ್ಗವನ್ನು ಮುಂದಕ್ಕೆ ತೇಗೆದುಕೊಂಡು ಹೊಗುವಂತಹ ಜನ ನಮ್ಮ

ಪೈಕಿ ಕಡಿಮೆ ಇಲ್ಲ. ಆದರೂ ಸಾಕಷ್ಟು ಕಾರ್ಯಕ್ರಮವನ್ನು ಮಾಡಲು ಗಮನ ಕೊಟ್ಟಿದ್ದರೆ ಇನ್ನೂ ಹೆಚ್ಚು ಅಭಿವೃದ್ಧಿಯಾಗುತ್ತಿತ್ತು ಎಂದು ನಿಜವಾಗಿಯೂ ನಾನು ಹೇಳುತ್ತೇನೆ. ಈ ರೀತಿ ಯಲ್ಲ ಸ್ವಲ್ಪ ಹೆಚ್ಚಿನ ಗಮನವನ್ನು ನಮ್ಮ ಮುಂಬಯಿ ರಾಜ್ಯದ ದೃಷ್ಟಿಯಿಂದ ನಾನಿಲ್ಲಿ ಹೇಳಬೇಕಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೊಂಬಾಯಿನಿಂದ ಬಂದವರಿಗೆ ಅನುಭವವಿದೆ ಮತ್ತು ಅಲ್ಲಿಂದ ಬಂದಿರುವವರೆಲ್ಲಾ ಸತ್ಯ ಹರಿಶ್ಚಂದ್ರರು, ಈ ಮೈಸೂರಿನಲ್ಲಿರುವ ಜನ ಹೊಲಸುಜನ ಎಂದು ಅರ್ಥ ಬರುವಂತೆಹೇಳಿದರೆ ನಮ್ಮ ಮೈಸೂರಿನ ಜನಕ್ಕೆ ಅವಮಾನ ಮಾಡಿದ ಹಾಗಾಗುತ್ತದೆ. ಮೈಸೂರಿನ ಜನ ನಿಮ್ಮ ಬೊಂಬಾಯಿನ ಜನಕ್ಕಿಂತ ಕಡಿಮೆ ಏನಿಲ್ಲ. ಇನ್ನೂ ಹೆಚ್ಚಿನ ಮಟ್ಟದಲ್ಲಿದ್ದಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ಮೈಸೂರಿನ ಜನರನ್ನು ಕಮ್ಮಿ ತರಗತಿಯವರು, ಮುಂಬಯಿನಿಂದ ಬಂದವರು ಉತ್ತಮ ಜಾತಿಯವರು ಎಂದು ಹೇಳುತ್ತಿಲ್ಲ. ನಾನು ಮುಂದಿನ ಜನ್ಮದಲ್ಲಾದರೂ ಸರಿಯೇ, ನಾನು ಸತ್ತಮೇಲೆ ಮುಂದಿನ ಜನ್ಮದಲ್ಲಿ ಜನ್ಮ ಎತ್ತಿದರೂ ಕೂಡ ನನ್ನ ಜನ್ಮ ಈ ಕರ್ಣಾಟಕದಲ್ಲೇ ಆಗಬೇಕೇ ಹೊರತು ಕರ್ನಾಟಕ ರಾಜ್ಯದೊಳಗೆ ಅಗಬೇಕು ಎಂದು ನಾನಿಲ್ಲಿ ಹೇಳುತ್ತೇನೆ. ಇದು ಜನಾಂಗದ ಪ್ರಶ್ನೆಯಲ್ಲ ಇಲ್ಲಿಆಡಳಿತ ಯತ್ರದ ಪ್ರಶ್ನೆ ಇದೆ. ದಿನಂಪ್ರತಿ ಆಡಳಿತಲ್ಲಿ ನಾವು ನೋಡುತ್ತಿರುವಂತೆ ಒಳ್ಳೆಯವರೂ ಇರುತ್ತಾರೆ, ಒಳ್ಳೆಯವರಿಲ್ಲ ಎಂದು ಹೇಳುತ್ತಿಲ್ಲ. ಇಲ್ಲಿ ಯಾರನ್ನೂ ಕಮ್ಮಿ ಎಂದು ನಾನು ಹೇಳುತ್ತಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕರ್ಣಾಟಕದೊಳಗೆ ವಿಭಾಗವಾಗುವಾಗ ನಿಮ್ಮ ಮುಂಬಯಿ ರಾಜ್ಯದಲ್ಲಿ ಎಫಿಷಿಯನ್ಸಿ ಅಡ್ಮಿನಿಸ್ಟ್ರೇಷನ್ನಿಲ್ಲ ನಮ್ಮ ಮೈಸೂರಿನಲ್ಲಿದೆ ಎಂದು ಹೇಳುವವರು ನಿಮ್ಮ ಭಾಗದವರನ್ನೆಲ್ಲಾ ಸೇರಿಸಿ ನೀವೇ ಒಂದು ಭಾಗ ಮಾಡಿಕೊಳ್ಳಬಹುದಿತ್ತು. ಹಾಗೇಕೆ ಮಾಡಿಕೊಳ್ಳಲಿಲ್ಲ?

ಶ್ರೀ ಎ. ಜೆ. ದೊಡ್ಡಮೇಟಿ:—ಬಹುಮಟ್ಟಿಗೆ ನಮ್ಮ ಬೊಂಬಾಯಿ ಭಾಗದಲ್ಲ ಅಲ್ಲಿನ ಸರ ಕಾರ ಸರ್ವ ಸಮರ್ಪಕವಾಗಿ ಮಾಡಲಿಲ್ಲ ಎಂದು ಹೇಳುವುದರಲ್ಲಿ ತಪ್ಪೇನಿಲ್ಲ. ಅದರಲ್ಲ ಎಲ್ಲೂ ತಪ್ಪು ಇಲ್ಲ. ಅಡಳಿತದಲ್ಲಿ ಅಷ್ಟು ಬಿಗಿ ಇಲ್ಲ, ಸರ್ಕಾರದವರಲ್ಲಿ ಪ್ರಾಮಾಣಿಕತೆ ಅಷ್ಟಾಗಿ ಇಲ್ಲ ಎಂದು ನಾನು ಸರ್ಕಾರದವರನ್ನು ಬೈಯ್ಯುವುದಿಲ್ಲ. ಆಡಳಿತ ಯಂತ್ರವನ್ನೂ ಸಹ ಟೀಕಿಸುವುದಿಲ್ಲ. ಸಮಾಜಕಾರ್ಯಕರ್ತರಾದ ನಾವು ಮೊದಲು ನಮ್ಮ ವೃತ್ತಿಯಲ್ಲಿರತಕ್ಕ ಲೋಪದೋಷಗಳನ್ನು ತಿದ್ದಿಕೊಂಡು ಆ ಮೇಲೆ ಆಡಳಿತ ಯಂತ್ರವನ್ನೂ, ಮಂತ್ರಿಗಳನ್ನೂ ಸರ್ಕಾರದವರನ್ನೂ ಟೀಕಿಸ ಬೇಕೇ ಹೊರ್ತು ಆತ್ಮ ವಂಚನೆ ಮಾಡುವುದು ಸರಿಯಲ್ಲ. ಇಂಥಾದಕ್ಕೆಲ್ಲಾ ನಾವು ಆತ್ಮ ನಿರೀಕ್ಷಣೆ ಮಾಡಬೇಕಾಗಿದೆ. ಒಟ್ಟಿನಲ್ಲಿ ಸರ್ಕಾರದವರು ಈ ವರ್ಷವ್ಯವಹಾರಿಕ ಬಡ್ಜೆಟ್ಟನ್ನು ನಮ್ಮ ಈ ಸಭೆಯ ಮುಂದೆ ಮಂಡಿಸಿದುದಕ್ಕಾಗಿ ನಮ್ಮ ಆರ್ಥಿಕ ಮಂತ್ರಿಗಳನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now rise and meet after half-an-hour.

The House adjourned for recess at Three of the Clock and reassembled at Thirty Minutes past Three of the Clock.

[Mr. DEPUTY SPEAKER in the Chair]

†Sri B. SHAMSUNDAR (Bhalki).—Mr. Speaker Sir, the Mysore important Minister as far as this Session is concerned, who is supposed to deal with the figures, the figures which have been supplied to us in the books which are said to be Budget, is unfortunately absent now. I am so sorry.

Before dealing with this subject Sir, I will submit that we have as far as conventions are concerned, failed to establish good conventions. Last time, at the time of the No Confidence motion, we left this House not because we never wanted to hear the Hon'ble Ministers, but we wanted to know before we replied them, what are their replies. Healthy conventions are built upon historical events. It is not that one motion is just like another motion. No doubt all the motions in the legal language are one and the same, but certain motions carry in practice their own importance and in view of this fact, it was the duty of the Government or the Party in Power to have replied us first and given us a chance. It would have been a better convention, Sir.

Mr. DEPUTY SPEAKER.—It is over. Why does he refer to it now ?

Sri B. SHAMSUNDAR.—Yes Sir, everything is over. We need not worry about what is over ! I wanted to repeat it because it had appeared in some other way. When they replied here it was just like performing or acting the dramas of Shakespere, I was told. Every Minister without audience acted as an actor. Some acted like Portia some like Shylock, some like Antanio! but no audience ! The speech was just like the address of the lady. It should not be too long. It should be long enough to cover the subject and it should be short enough to arouse interest. But I am so surprised to see that without creating any interest, our Ministers acted as it looked in fact as if they acted the Drama of Hamlet without the Prince of Denmark ! They did eyerything in their power. It was a soliloquy they abused us, condemned us, they said, 'where are these cowards'. All this happened and it was so unfortunate. It was quite unexpected of our friends. They said that it was our election stunt ! I am so sorroy. It cannot be an election stunt. What we felt long ago—we were thinking that these friends will come to their senses. But instead, they planned in some other way. Therefore, we had to bring it. Otherwise, here was no necessity. We very well knew that there were 150 friends on thier side who would vote at their beck and call.

Sir, let us come to the real situation in this country. Before dealing with this subject of budget, I think I will be right if I give you the psychological set up of our Ministers who are now here shaping the destiny of more than two crores of people. Sir, I have written a small poem two days back, about the mentality of these Ministers—how they have failed. I will read it to you and I will give the translation of it also.

[*Urdu poem*]

What I feel is this : unless we know their mind, it is impossible to understand their actions. This poem is captioned as PRAYER OF A MINISTER-how he prays. Last time, when I read it, they said it was a song. I am not singing any song now.

"Let all the leader in the country die
oh' Shambu, I will offer *Noral.*
Let 5 or 6 dissidents die and 20 or 25
of them suffer from high fever.
Let all these opposition people who always shout
something or the other—all die.
Let the back bone of Nijalingappa break because he
always feels about these Ministers
Let the big shot-Sowcar Channiah-his shop be burnt to
ashes, because through him, help to our enemies is often given."

MR. DEPUTY SPEAKER.—What is it that he is reading?

Sri B. SHAMSUNDAR.—This is a poem. I am giving a picture of how the framers of this budget think. This is all about budget and budget only. This shows the set-up of their mind. Let all the bricks and stones of Vidhana Soudha come down because it is due to this building that the name of Hanumanthaiah is known to each and every one.

Let the mouths of all the flowers which bloom be filled with mud because they speak the truth.

Let all the huts of the poor people be burnt to ashes because they always cry 'justice, justice' and ask for justice.

Let all the *basthis* or localities of the voters be burnt to ashes because they always accuse us of corruption and nepotism.

Let the hearts of all these officers fail, because they say that whatever orders the Ministers pass are wrong and so let their hearts fail.

Let all the files in the cabinet be eaten away by mices because the orders contained in them are not good.

Let the boat of the Central Government sink because it is from there that you always get new orders.

Let the entire Mysore State be destroyed and ruined and let only myself and my Leader Jatti live in it.

This is the prayers of a Minister. This shows the mentality of the people who run our Government and this is how adiministration is carried on in the State. If you see the administration throughout the State, nowhere are the orders of Ministers obeyed. The police never cares for the orders of the Ministers. The revenue officers never care for the orders of the Ministers. No Minister is obeyed anywhere. This is a

(Sri B. SHAMSUNDAR)

fact. I have brought it to the notice of the Minister once or twice that such and such an officer of my place said: "Who cares for these Ministers". This is the situation. I am so sorry. Why is all this going on? What is the matter? All this is going on simply because you are not serious about your own affairs.

Sri B. BASAVALINGAPPA.—Who is that officer?

Sri B. SHAMSUNDAR.–Sri Prabhakar Rao, Assistant Commissioner of Gulbarga.

I do not want to deal with police matters now. I will now come to revenue matters Revenue is the life-blood of the entire State and land is a place where people want to live in peace and tranquility. As my friend said here yesterday, we have been thinking about land reforms all these years. But those days have gone and no land reform will benefit any poor man. We have lost three continuous years in this talk of land reform. We have not implemented land reforms. Where was the hitch? I know the answer and my friends opposite also know. They are conversant with their own problems and so I do not want to mention it here. But one thing that breaks my heart is that we who are the sons of the soil are ignored and thrown to the sea; whereas outsiders are brought here for the sake of political and international propaganda and given all the facilities. Even in our own land we are treated as untouchables when Tibetans are brought here from outside and given all facilities. It was my friend Sri Devaraj Urs who spoke about this yesterday. There is a Department of Rehabilitation throughout the country. People who have come from outside as refugees are taken here and given all the facilities whereas we who have been refugees in our own land for centuries together are neglected and nobody cares for us. Even in your temples we are treated as untouchables. According to them your God is not our God, your Devatha is not our Devatha. When this is the thing, don't you think that it is only just to pacify the international forces that you have invited the Tibetans here? Think what will be the reaction here if some foreign power were to utilize the discontentment in this Country. If you use the discontented forces here against you, do you think it will not be a bad day for you? You have never cared for that. The officers never care even though Ministers pass orders. I have got all the files in this respect here. I have brought them here and I will quote if the Minister wants. Two days ago I gave three files to the Hon'ble Minister Kadidal Manjappa. He is very good man. He is a best friend of mine. I meet him often.

An HON'BLE MEMBER.—He is good to all.

Sri B. SHAMSUNDAR.–Good friends are not needed in a bad set-up. He issued certain orders. What a fall ! If I may say so, the statue fell down. As Shakespeare has said in one place, "What a fall my Country-man? You fell, I fell and the Country fell." This is how he has fallen

down. The Minister was kind enough to pass orders two years ago instructing the Deputy Commissioner to allot ten, ten acres of land to 42 families in Bidar. The Deputy Commissioner passed orders and it is now two years that those orders have not been carried out. Why? Because the Tahsildar and the Guardawar refused to obey the orders. They say Harijans do not require lands. They have actually written in the file that the Harijans may be given one acre of land. One acre is not sufficient even for your graveyard unless you choose to be buried together. If you each want a respectable place for your graveyard, this one acre would not be sufficient. That has become the fate of the Revenue Minister. I am so sorry that with such an able and honest man at the helm of affairs of the Revenue Department, things should go such a rotten extent. With such a man at the helm of affairs in the Revenue Department, what should be the condition in the other Departments? I have no time, otherwise I would have told them here item-by-item. I have brought all records. I want the Minister to take note that we do not want any favour as such, but I want that there should be a provision in the Act itself that Government should acquire lands and give to Harijans. They should provide the money for it. They should acquire the lands for Harijans and those lands should be given to Harijans as lands are given to Tibetans. If they do not do it, they will certainly lose our sympathy and our faith in their goodness.

Here is a telegram and letters which I received. According to this telegram, the same gentleman, that is, Sri Prabhakar Rao went and demolished the graveyard at Shahabad and Nan Mahagaon. He says 'I am entitled to do it.' Why does he do it? He wants to give that land to somebody else. I am only citing about one district; You will find so many cases in regard to other districts. The Honourable Revenue Minister is here. Without my bringing everything to his notice, I am sure he will be very serious in future and issue immediate orders that no hindrance should be created in the way of Harijans getting land. For the time being, he was kind enough to pass orders, but it has not been implemented. I have written a letter to the Divisional Commissioner of Gulbarga to let me know how many acres of land are distributed to Harijans. He has given a list; the names of all others are there in the list but no name of Harijan is mentioned. I found out there was none. In the name of Harijans, lands were distributed to others. There is one defect in the Land Distribution Rules. They say that if the land is more than ten acres, it should be divided and 50 per cent should go to Harijans and 50 per cent to non-Harijans. Non-Harijans already own thousands of acres of land. When we are to get our share, the non-Harijans also come to share with us. If that is the state of affairs, I do not know how you are going to safeguard our interests.

I shall now come to the most important thing education. I want to say that the so-called basic education has proved a failure. In the garb of basic education, it is a plan to keep us where we are. They

(Sri B. SHAMSUNDAR)

want to train us on vocational lines and keep us as dhobis, banias and so on. I am sure that the children of those who strongly advocate basic education are going to Convents here. We do not want basic education, at least for the Scheduled Castes. We want higher education for all of us.

I shall now say something about community development programmes. My friend has published a booklet called 'Community Project Development'. He has given all the details. There is the Balwantrai Mehta Committee which went in to the pros and cons of the development of community projects for which crores have been spent all over india. They came to the conclusion that though a spectacular work was done under this programme, yet the money was actually wasted as the real necessities of the people such as drinking water wells, agricultural facilities, hostels and other facilities were not made available to the poor people in the villages. It is my experience. Go to any village, you will find this situation. Yesterday, some Minister was saying that so many wells were sunk. I do not know where those wells were sunk.

Speaking about co-operative societies, I have no idea of the present-day co-operative societies though as a student of economics, I read something about these institutions. There was a move to get a housing co-operative society registered in Gulbarga; in spite of applications made, even to-day, it is not registered. My friend Sri Kollur Mallappa knows that these co-operative societies are being used for political propaganda. Wherever the societies are formed, they are manned only by the Congress friends. If non-congress people start a society, the congress people would remove them and it would be run by the congress people themselves. I will quote one example. (In Gulbarga, some Muslim and Hindu friends started what is called Bone Fertilisers. Sri Mahomed Ali, ex-Minister for excise, I am sorry to say, tried to spoil that society. The Secretary of that society was removed without calling a general body meeting and Sri Mahomed Ali became the Chairman. Sri Kollur Mallappa might be knowing and Sri Virendra Patil might be knowing that Sri Mahomed Ali was once a Rajakar.)

Sri VEERENDRA PATIL.—Not at all. He is making a very incorrect statement. He is making an allegation, saying that one Honourable Member of this House was formerly a Razakar. That is not at all correct.

Sri B. SHAMSUNDER.—I know what he was, I know what you were. When I came to the platform to speak, he used to stand and salute me. That gentleman spoilt that co-operative society. I have got a big list of such instances in Chitaldrug and other places. This list has been brought to the notice of the Leader of the Congress Party also. One Honourable Member of this House who is present now–I do not want to mention his name brought all this in writting to the notice of the Leader of the Congress Party in the party meeting. I will not waste my time over it.

I shall refer to another matter, a very important thing. 18 Sub Inspectors have been transferred from one place to another place in Gulbarga Division. Sri Virendra Patil may take note of it. What is the cause? I am prepared to give all the relevant facts and all the names and I would request the Government to investigate into the matter.

4–00 P.M.

Sir, Sri Veerendra Patil is a very upright person but he gets exited very soon when I say anything about his friends. (*laughter*)

Sir. the most important department to which I want refer is the Social Welfare Department. It is very social no doubt. It follows what Shri Basaweshwara has said in his Vachanas, in its social welfare work. He has said that you should do a thing in one hand which would not be noticed by the other hand. Sir, what a nice department this is!. The mal-administratration of this department has rooted itself so deep in this department, that unless a committee is set up to go into these things as to where the money has gone, to whom it is given, whether moneys are given where there is no hostel, it would not be possible to find out. Sir, in one case, Rs.6,000 has been paid to a gentleman for a hostel, but there was on hostel at all in that place. In another case, where there was already a hostel, another gentleman was called and given Rs. 8000 to start another hostel. Sir, this Deputy Minister for Home is here. Why not he try to become a Minister? His friend, who a Deputy Minister, is a Minister now. (*laughter*)

Sri VEERENDRA PATIL (Minister for Excise and Prohibition).— It has taken three years for me to become a Minister. (laughter)

Sri B. SHAMSUNDAR.— But, there are fortunate people who become Minister over-night. (*laughter*)

Sir, this Deputy Minister and the Minister in charge of Social Welfare portfolio, went to one place in Mandya district and laid a foundation stone of a Scheduled Castes hostel. One fine morning, the Minister in-charge forgot entirely about it. The foundation-stone is still there, standing all alone. He forgot about it and called another person, whose name is also Rachiah, and granted him Rs.8,000 for a hostel. Sir, in my district of Gulbarga, there is a hostel with nearly 300 students and the are struggling for money and writing to Government for funds to purchase that hostel building, but we are not able to succeed. Here in Magadi Road, Bangalore, two lakhs of rupees is spent for the hostel building. In Chitradurga, where there are very few students, they have spent one lakh. In Nelamangala, for a hostel building, they have spent more than one lakh where there are 32 students. Sir, what is this after all? I demand the Government to constitute a Committee to go into these matters. The members of the opposition as well as the Treasury Benches would be pleased to know the facts when they are placed before the House.

(Sri B. SHAMSUNDAR)

Sir, very recently, the Andhra Chief Minister, Shri Sanjeeviah, was kind enough to announce in the Andhra Assembly that as far as Scheduled Castes are concerned, there is no age limit for joining Goinvernment Service. There is no age limit even to get scholarships. Thirdly, that all the vacant posts should be kept upon for appointing Harijans in future—they should not be filled up, on the plea that Harijan candidates are not available. Even in the case of competitive examintions, that Government has announced that competitive examinations should be held only amongst the Scheduled Castes and not with the general candidates.

Sir, in this State, the exemption of fee has been taken off. There are two Ministers here; one says that it applies and another Minister says that it does not. Whenever there is any difference of opinion in the Cabinet, the Minister should resign. That is the rule everywhere.

Sir, I suggest that 15 per cent of the total allotment of each Department of the Government should be set apart for the welfare of the Scheduled Castes and Scheduled Tribes people. Unless this is done, there is no hope of uplifting these people.

Lastly, Sir, I have just one sentence which I have written here; I will read it and conclude my speech.

"We will speak out, we will be heard,
though all earth's systems crack;
We will not take a single word,
Nor take a letter back;
Let liers fear, let cowards shrink,
Let traitors turn away;
Whatever we have dared to think,
That dare we also say".

Sir, I referred to the constituion of a committee to enquiry the mal-practices in the Social Welfare Department. Suppose, it is not done; I have found out a remedy for that. If they do not take action, I will go to the Court and then I will go to the Governor and to the President and pleace these things before them.

Thank you, Sir.

†ಶ್ರೀ ಎನ್ ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ):—ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಅರ್ಥಸಚಿವರು ನಮ್ಮ ಮುಂದೆ ಮಂಡಿಸಿರತಕಂಥ ಹಣಕಾಸಿನ ಆಯವ್ಯಯ ಪಟ್ಟಿಯನ್ನು ನಾನು ಅನುಮೋದಿಸುತೇನೆ. ಈ ಬಗ್ಗೆ ಒಂದೆರಡು ಸಲಹೆಗಳನ್ನು ಕೋಡುತ್ತೇನೆ. ಸ್ವಾಮಿ, ನಮ್ಮ ಸ್ನೇಹಿತರು ಎದುರು ಪಕ್ಷದಲ್ಲಿ ಕುಳಿತು ಹೇಳತಕ್ಕ ಟೀಕೆಗಳು ಎಲ್ಲವೂ ಸುಳ್ಳು ಎಂದು ಹೇಳಲು ನಾನು ಇಚ್ಛಪಡುವದಿಲ್ಲ. ಅವರು ಬಹಳ ಉತ್ಪ್ರೇಕ್ಷಮಾಡಿ ಹೇಳುತ್ತಾರೆ. ಹೆಚ್ಚಾಗಿ ಇದರಲ್ಲಿ ಸತ್ಯಾಂಶವಿದೆಯೋ ಇಲ್ಲವೇ ಎನ್ನುವ ರೀತಿಯಲ್ಲಿ ಅಷ್ಟು ಉತ್ಪ್ರೇಕ್ಷೆಮಾಡಿ ಹೇಳುತ್ತಾರೆ ಎಂಬುದು ನಿಜ. ವಾದ ಮಾಡುವಾಗ್ಗೆ ಸತ್ಯಾಂಶವನ್ನು

ಗ್ರಹಿಸಿ ಸರಕಾರಕ್ಕೆ ರಚನಾತ್ಮಕ ಸಲಹೆಮಾಡಬೇಕು. ಮತ್ತು ಅಂಥಾದ್ದನ್ನು ಸರಕಾರ ಗಮನದಲ್ಲಿಟ್ಟುಕೊಂಡು ಕೆಲಸ ಮಾಡತಕ್ಕದ್ದು ಅಗತ್ಯ. ಈ ಪಕ್ಷದಲ್ಲಿಯೇ ಇರಲಿ, ಎದುರು ಪಕ್ಷದಲ್ಲಿಯೇ ಇರಲಿ, ರಚನಾತ್ಮಕ ಸಲಹೆಗಳನ್ನು ಮಾಡಿ, ಸರಕಾರದಲ್ಲಿರುವ ಅಲ್ಪಸ್ವಲ್ಪ ದೋಷವನ್ನು ದೂಷಿಸಬೇಕಾದುದು ಎಲ್ಲರ ಕರ್ತವ್ಯ. ಟೀಕೆ ಮಾಡುವಾಗ ಈ ಅಂಶವನ್ನು ಗಮನವಲ್ಲಿಡಬೇಕಾದುದು ಅಗತ್ಯ ಆದರೆ ಈಗ ತಾನೆ ಮಾತನಾಡಿದ ಶ್ರೀ ಶ್ಯಾಮ ಸುಂದರ್ ಅವರು ಮಾತನಾಡುತ್ತಾ ಹಿಂದುಳಿದ ವರ್ಗದವರ ಬಗ್ಗೆ ಅನುಸೂಚಿತ ಪಂಗಡಗಳ ಬಗ್ಗೆ ಬಹಳ ಅನ್ಯಾಯವಾಗಿದೆ, ಅವರಿಗೆ ನ್ಯಾಯವಾಗಿ ದೊರೆಯಬೇಕಾದ ಸೌಲಭ್ಯ ದೊರೆಯುತ್ತಿಲ್ಲ ಎಂದು ಕಟುವಾಗಿ ಟೀಕೆ ಮಾಡಿದರು. ಅವರ ಟೀಕೆಯಲ್ಲಿ ಅಷ್ಟು ಸತ್ಯಾಂಶ ವಿಲ್ಲ. ಕಳೆದ 13 ವರ್ಷಗಳಲ್ಲಿ ಸ್ವಾತಂತ್ರ್ಯ ಬಂದಮೇಲೆ ಹಿಂದುಳಿವ ಜನಾಂಗದ ಅಭಿವೃದ್ಧಿಯ ಬಗ್ಗೆ ಕಾಂಗ್ರೆಸ್ ಸರಕಾರ ಅನೇಕ ಕೆಲಸಕಾರ್ಯಗಳನ್ನೂ ಮಾಡಿದೆ. ಏನೂ ಮಾಡಿಲ್ಲ ಎಂದು ಹೇಳುವುದು ಸರಿಯಲ್ಲ.

ನಮಗೆ ಸ್ವಾತಂತ್ರ್ಯ ಬಂದು ಹದಿಮೂರು ವರ್ಷಗಳಾದುವು. ಸ್ವಾತಂತ್ರ ಬಂದಮೇಲೆ ಮತ್ತು ಸ್ವಾತಂತ್ರ್ಯ ಬರುವುದಕ್ಕೆ ಮುಂಚೆಯೂ ಸಹ ಕಾಂಗ್ರೆಸ್ ಸಂಸ್ಥೆ ಹಿಂದುಳಿದಿರತಕ್ಕ ಕೋಮಿನವರಿಗೆ, ಅದರಲ್ಲಿಯೂ ಅನುಸೂಚಿತ ಪಂಗಡದ ಜನಗಳಿಗೆ ಸಮಾಜದಲ್ಲಿ ಸ್ಥಾನಮಾನ ವನ್ನು ದೊರಕಿಸಿಕೊಡಬೇಕು ಎನ್ನುವುದನ್ನು ಮುಖ್ಯ ಧ್ಯೇಯವಾಗಿಟ್ಟುಕೊಂಡು ಕೆಲಸಮಾಡಿ ಕೊಂಡು ಬಂದಿದೆ. ಹಳ್ಳಿಗಳಲ್ಲಿರುವ ಈ ಜನ ಸಮಾಜದಲ್ಲಿ ಇತರರ ಜೊತೆಯಲ್ಲಿ ಸೇರುವಂಥ ಪರಿಸ್ಥಿತಿ ಬಂದಿದೆ. ನಾವು ಧೈರ್ಯವಾಗಿ ಅವರೊಡನೊಡಗೂಡಿ ಕೆಲಸಮಾಡಬೇಕು ಎನ್ನುವ ಮನಸ್ಸುಂಟಾಗಿರುವುದು ದೊಡ್ಡದು ಎಂದು ಭಾವಿಸುತ್ತೇನೆ. ನಮ್ಮಲ್ಲಿ ಈ ಜನರನ್ನು ದೂರ ದಲ್ಲಿ ನೋಡಿದರೂ ಮೈಲಿಗೆ ಆಯಿತು ಎಂದು ಸ್ನಾನ ಮಾಡುವಂಥ ಪದ್ಧತಿ ಇದ್ದುದು ಹೋಗಿ, ಜೊತೆಯಲ್ಲಿ ಕುಳಿತು ನಾವೆಲ್ಲರೂ ಒಟ್ಟಿಗೆ ಕೆಲಸಮಾಡುವಂಥ ಭಾಗ್ಯವಾದರೂ ಉಂಟಾಗಿದೆಯಲ್ಲ ಎಂದು ಸಂತೋಷಪಡಬೇಕು. ಅವರ ವಿಚಾರದಲ್ಲಿ ಮಾಡಬೇಕಾದ ಕೆಲಸ ಇನ್ನೂ ಬಹಳವಿದೆ. ಆದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಅವರ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದಕ್ಕೆ, ಅವರ ಬಡತನ ವನ್ನು ಹೋಗಲಾಡಿಸುವುದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾದ್ದು ಬಹಳ ವಿದೆ. ನಿನ್ನೆಯ ದಿನ ಶ್ರೀಮಾನ್ ದೇವರಾಜ ಅರಸ್‌ರವರು ಹೇಳಿದಹಾಗೆ ಅವರಿಗೆ ಸುಮ್ಮನೆ ಜಮೀನು ಕೊಟ್ಟರೆ ಸಾಕಾಗುವುದಿಲ್ಲ, ಅವರು ಒಂದುಕಡೆ ನೆಲಸುವಹಾಗೆ ಮಾಡಿ, ಅವರ ಜೀವನಕ್ಕೆ ಸಂಪಾದನೆಯ ಮಾರ್ಗವನ್ನು ಕಲ್ಪಿಸಿಕೊಡಬೇಕು. ಆ ರೀತಿಯ ಕೆಲಸಕಾರ್ಯ ಗಳನ್ನು ಮಾಡಿದರೆ ಮಾತ್ರ ಆ ಜನ ಅಭಿವೃದ್ಧಿಗೆ ಬರುವುದಕ್ಕೆ ಸಾಧ್ಯ. ಜಮೀನನ್ನು ಮಾತ್ರ ಕೊಟ್ಟರೆ, ಅದರ ವ್ಯವಸಾಯಕ್ಕೆ ಬೇಕಾದ ಸಲಕರಣೆಗಳನ್ನೊದಗಿಸಿಕೊಳ್ಳಲು ಸಾಲಮಾಡಿ, ಆ ಸಾಲವನ್ನು ತೀರಿಸಲು ಜಮೀನನ್ನು ಮಾರಬೇಕಾಗುತ್ತದೆ. ಅವರು ನಿಜವಾಗಿಯೂ ಭೂಮಿ ಯನ್ನು ನಂಬಿಕೊಂಡು ಜೀವನ ಮಾಡುವುದಕ್ಕೆ ಮಾರ್ಗಮಾಡಬೇಕಾದರೆ ಅವರಿಗೆ ಎತ್ತು, ಗಾಡಿ ಮತ್ತು ಇತರ ಸೌಲಭ್ಯಗಳನ್ನು ಕೊಟ್ಟು ಅವರು ನೆಲೆಗೊಳ್ಳುವಂತೆ ಮಾಡಬೇಕು. ಸಾವಿರ ಜನಗಳಿಗೆ ಬರೀ ಜಮೀನನ್ನು ಕೊಡುವುದಕ್ಕೆ ಬದಲಾಗಿ ಎಲ್ಲ ಸೌಕರ್ಯಗಳನ್ನೂ ಕಲ್ಪಿಸಿ ನೂರು ಜನ ನೆಲೆಗೊಳ್ಳುವಂತೆ ಮಾಡಲಿ. ಆ ಕೆಲಸವನ್ನು ನಾನು ಒಪ್ಪುತ್ತೇನೆ. ಶ್ರೀಮಾನ್ ಶಾಮಸುಂದರ್ ಅವರು ಹೇಳಿದಹಾಗೆ ಸಂಪೂರ್ಣವಾಗಿ ಏನನ್ನೂ ಮಾಡಿಲ್ಲ, ಅವರಿಗೆ ಬಹಳ ತೊಂದರೆಯಾಗಿದೆ ಎನ್ನುವುದನ್ನು ನಾನು ಒಪ್ಪಲಾರೆ.

ಮುಖ್ಯವಾಗಿ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ನನ್ನ ಮನಸ್ಸಿನಲ್ಲಿದೆ. ಮೈಸೂರು ದೇಶದಲ್ಲಿ ಶೇಕಡ 75 ರಷ್ಟು ಜನ ವ್ಯವಸಾಯವನ್ನು ನಂಬಿಕೊಂಡಿದ್ದಾರೆ. ಇವರ ಅಭಿವೃದ್ಧಿಯಾಗದೆ ದೇಶದ ಅಭಿವೃದ್ಧಿಯಾಗುವುದಿಲ್ಲವೆನ್ನುವುದನ್ನು ಮನಗಾಣಬೇಕು. ಸರ್ಕಾರ ದವರು ಮೂರನೆಯ ಯೋಜನೆಯಲ್ಲಿ ಒದಗಿಸಬೇಕೆಂದಿರುವ 250 ಕೋಟಿ ರೂಪಾಯಿಗಳಲ್ಲಿ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಅರ್ಧಭಾಗ ಹಳ್ಳಿಗಳಿಗೆ ಖರ್ಚಾಗುತ್ತದೆಂಬುದನ್ನು ನಾವು ಒಪ್ಪಿಕೊಳ್ಳಲೇಬೇಕು. ವ್ಯವಸಾಯಾಭಿವೃದ್ಧಿಗೆ, ನೀರಾವರಿ ಯೋಜನೆಗಳಿಗೆ, ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ, social welfare activities, ಇವೆಲ್ಲಕ್ಕೂ ಸೇರಿ ಸುಮಾರು ಅರ್ಧಕ್ಕಿಂತ ಹೆಚ್ಚು ಭಾಗ ಹಣ ಹಳ್ಳಿಗಾಡಿನಲ್ಲಿ ಖರ್ಚಾಗುತ್ತದೆ. ಆದರೂ ವ್ಯವಸಾಯ ಇಲಾಖೆಯಲ್ಲಿ ನಡೆಯತಕ್ಕ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ವ್ಯವಸಾಯ ಸಂಬಂಧದಲ್ಲಿ ಆಗಬೇಕಾಗಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಶ್ರೀಮಾನ್ ದೇವರಾಜ ಅರಸ್ ನವರು ನಿನ್ನೆಯ ದಿನ ಸಲಹೆ ಮಾಡಿದರು. ಅವರು ಬಿಟ್ಟಿರುವ ಒಂದೆರಡು ಅಂಶಗಳನ್ನು ಮಾತ್ರ ನಾನು ಸೂಚಿಸುವುದಕ್ಕೆ ಇಷ್ಟಪಡುತ್ತೇನೆ.

ವ್ಯವಸಾಯದ ಇಲಾಖೆಯಲ್ಲಿ ಬಹುಭಾಗ ವ್ಯವಸಾಯದ ಅಭಿವೃದ್ಧಿಗೆ ಬೇಕಾದುದು ಸಂಶೋಧನೆಯ ಇಲಾಖೆ ಎನ್ನುವುದನ್ನು ನಾವು ಮರೆಯಬಾರದು. ನಮ್ಮ ಮೈಸೂರು ದೇಶದಲ್ಲಿ ಸಂಶೋಧನೆಯ ಶಾಖೆಯನ್ನು ಕಡೆಗಣ್ಣಿನಿಂದ ನೋಡಿರತಕ್ಕ ಅಂಶವನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಸಂಶೋಧನೆಯ ಇಲಾಖೆಯಲ್ಲಿ Agricultural Chemist, Economic Botamist, Government Entomologist, plant Pothologist ಎಂದು ಬೇರೆ ಬೇರೆ ಸೆಕ್ಷನ್‌ಗಳಲ್ಲಿ ಕೆಲಸಮಾಡುವ ಮುಖ್ಯಾಧಿಕಾರಿಗಳಿದ್ದಾರೆ. ಅವರನ್ನು techinical section ಎಂದು ಬೇರೆ ಮಾಡಿ Extenion ಎಂದು ಬೇರೆಮಾಡಿ ಅವರವರಿಗೆ ಕೆಲಸಮಾಡುವುದರಲ್ಲಿ ಭಿನ್ನಾಭಿಪ್ರಾಯ ಬರುವ ಹಾಗೆ ಮಾಡಿದ್ದಾರೆ. ಆದರೆ 1-1-1957 ರಲ್ಲಿ ಇದ್ದಂಥ scales of pay ಮತ್ತು 1-1-61 ರಲ್ಲಿ ಪುನರ್ವಿಮರ್ಶೆ ಮಾಡಿರುವ seales of pay ತೆಗೆದುಕೊಂಡರೆ ಸಂಶೋಧನಾ ಶಾಖೆಯ ಅಧಿಕಾರಿಗಳಿಗೂ ಮತ್ತು ಡೆಪ್ಯುಟಿ ಡೈರೆಕ್ಟರವರಿಗೂ ಬಹಳ ವ್ಯತ್ಯಾಸ ಮಾಡಿದ್ದಾರೆ. ಸಂಶೋಧನಾ ಶಾಖೆಯವರಿಗೆ 1-1,57 ರಲ್ಲಿ 550–820 ಸ್ಕೇಲು ಇತ್ತು, ಡೆಪ್ಯುಟಿ ಡೈರೆಕ್ಟರಿಗೆ 550–860 ಇತ್ತು. ಇದನ್ನು ಪುನರ್ವಿಮರ್ಶೆ ಮಾಡುವುದರಲ್ಲಿ ಸಂಶೋಧನಾ ಶಾಖೆಯವರಿಗೆ 400–900 ಸ್ಕೇಲನ್ನು ಕೊಟ್ಟು ಡೆಪ್ಯುಟಿ ಡೈರೆಕ್ಟರಿಗೆ 600–1000 ಸ್ಕೇಲನ್ನು ಗೊತ್ತು ಮಾಡಿದ್ದಾರೆ. Seicntific section ನಲ್ಲಿರುವ ಅಧಿಕಾರಿಗಳಿಗೆ state jurisdiction ಇದೆ. Extension section ನಲ್ಲಿರುವ ಅಧಿಕಾರಿಗಳು, ಇಲಾಖಾ ಮುಖ್ಯಾಧಿಕಾರಿಗಳಿಂದ ಹಿಡಿದು ವ್ಯವಸಾಯದ ಇನ್ಸ್‌ಪೆಕ್ಟರವರೆಗೂ ಸಂಶೋಧನಾ ಶಾಖೆಯಲ್ಲಿ ಏನೇನು ಪ್ರಯೋಗಗಳನ್ನು ಮಾಡಿರುತ್ತಾರೆ ಅದರಂತೆ ಅವಲಂಬಿಸಿ ಬಾರಿಗೆ ತರತಕ್ಕದ್ದು ಮಾತ್ರ ಅವರ ಕರ್ತವ್ಯ. ಡೆಪ್ಯುಟಿ ಡೈರೆಕ್ಟರಿಗೆ State jurisdiction ಕೂಡ ಇಲ್ಲ. ಐವತ್ತೇಳನೆಯ ಇಸವಿಯಲ್ಲಿ ಒಬ್ಬ ಡೆಪ್ಯುಟಿ ಡೈರೆಕ್ಟರಿದ್ದಾಗ ಮಾತ್ರ ಅವರಿಗೆ state jurisdiction ಇತ್ತು. ಈಗ ಮೂರು–ನಾಲ್ಕು ಡಿಸ್ಟ್ರಿಕ್ಟ್‌ಗಳಿಗೆ ಒಬ್ಬೊಬ್ಬ ಡೆಪ್ಯುಟಿ ಡೈರೆಕ್ಟರಾಗಿದ್ದಾರೆ. ಇಂಥ ಸಂದರ್ಭದಲ್ಲಿ ಸಂಶೋಧನಾ ಶಾಖೆಯನ್ನು ಇಷ್ಟರಮಟ್ಟಿಗೆ ಕಡೆಗಣ್ಣಿನಿಂದ ಕಂಡಿರುವುದು ವ್ಯವಸಾಯದ ಇಲಾಖೆಯ ಅಭಿವೃದ್ಧಿಗೆ ಕಂಟಕವಾಗಿದೆಯೆಂದು ನಾನು ಧಾರಾಳವಾಗಿ ಹೇಳಬಹುದು.

(Sri L. S. Venkaji Rao in the Chair)

ಮೂರನೆಯ ಯೋಜನೆಯಲ್ಲಿ ಯಾವ ಉದ್ಯಮವನ್ನು ತೆಗೆದುಕೊಂಡರೂ ಸಂಶೋಧನೆಗೆ ಹೆಚ್ಚುಗಮನ ಕೊಟ್ಟಿದ್ದಾರೆ. ಹಾಗಿದ್ದರೂ ಕೂಡ ಸರ್ಕಾರ ಏತಕ್ಕೋಸ್ಕರ ಈ ರೀತಿ ಮಾಡಿದರೆನ್ನುವುದು ನನಗೆ ಅರ್ಥವಾಗುವುದಿಲ್ಲ. ಒಂದು ಪಕ್ಷ Extension ಎಂದು ಬೇರೆ ಮಾಡಿ ಕೆಲವು ಅಧಿಕಾರಿಗಳಿಗೆ ಪ್ರಮೋಷನ್ ಕೊಡುವ ಉದ್ದೇಶವಿದ್ದರೆ ಅದು ತಪ್ಪು ಎಂದು ಭಾವಿಸುತ್ತೇನೆ. ಆ ರೀತಿ ಮಾಡಬಾರದಾಗಿತ್ತು. Extension ನಲ್ಲೇ ಇರಲಿ, Scientific section ನಲ್ಲೇ ಇರಲಿ, ಯಾರು ಯಾರು ಕೆಲಸವನ್ನು ಎಷ್ಟರಮಟ್ಟಿಗೆ ಮಾಡಿದ್ದಾರೆ, ಅದರಿಂದ ದೇಶಕ್ಕೆ ಮತ್ತು ವ್ಯವಸಾಯಗಾರರಿಗೆ ಏನಾದರೂ ಪ್ರಯೋಜನವಾಗುತ್ತದೆಯೋ ಹೇಗೆ ಎನ್ನುವುದನ್ನು ಗಮನದಲ್ಲಿಟ್ಟು ಸಂಬಳ-ಸಾರಿಗೆಗಳ ಪುನರ್ವಿಮರ್ಶೆ ಮಾಡಬೇಕಾಗಿತ್ತು. ಕೆಲವು ವ್ಯಕ್ತಿಗಳನ್ನು

ಗಮನದಲ್ಲಿಟ್ಟುಕೊಂಡು ಮಾಡಿರುವುದು ತಪ್ಪು. ನಾನು ಸರ್ಕಾರದವರಿಗೆ ಸೂಚನೆ ಕೊಡುವುದು ಈಗಲಾದರೂ Sceienfic section ಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟು ಅವರು ಹೆಚ್ಚು ಉತ್ಸಾಹದಿಂದ ಕೆಲಸಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಬೇಕು ಎಂದು ನಾನು ಸಲಹೆ ಮಾಡುತ್ತೇನೆ. ನಾನು ಇದನ್ನು ಸರ್ಕಾರದ ಗಮನಕ್ಕೆ ತರುವುದರ ಉದ್ದೇಶವಾದರೂ ವ್ಯವಸಾಯಗಾರರ ಅಭಿವೃದ್ಧಿ seientific section ನಲ್ಲಿ ಕೆಲಸಮಾಡುವವರ ಮೇಲೆ ಅವಲಂಬಿಸಿದೆ. ಅನೇಕ ವೇಳೆ ಬೆಳೆಗಳಿಗೆ ಬರತಕ್ಕ ರೋಗರುಜಿನಗಳನ್ನು ತಡೆಗಟ್ಟುವುದ, ಕ್ರಿಮಿ ಕೀಟಗಳ ಹಾವಳಿಯನ್ನು ತಪ್ಪಿಸುವುದು ಬಹಳ ಅಗತ್ಯವಾಗಿದೆ. ಆದರಿಂದ ನಮ್ಮ ದೇಶದ ವ್ಯವಸಾಯ ಉತ್ಪನ್ನದಲ್ಲಿ ಶೇಕಡ 15 ರಿಂದ 20 ರವರೆಗೂ ನಷ್ಟವಾಗುತ್ತದೆಯೆಂದು ತಜ್ಞರು ಒಪ್ಪಿಕೊಂಡಿದ್ದಾರೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಪಾಯಿಂಟ್ ಆಫ್ ಆರ್ಡರ್ ಸ್ವಾಮಿ ? ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಹೇಳುತ್ತಿದ್ದಾರೆ, ಅವರು ಹೇಳುವುದನ್ನು ಯಾರೂ ಗುರುತು ಹಾಕಿಕೊಳ್ಳುತ್ತಿಲ್ಲ ಮಂತ್ರಿಗಳು ಈ ಸಭೆಯಲ್ಲಿರುವುದೇ ಅಭಾವವಾಗಿದೆ. ಅಧ್ಯಕ್ಷರು ಮಂತ್ರಿಗಳಿಗೆ ಈ ಬಗ್ಗೆ ಸೂಚನೆ ಕೊಡಬೇಕು.

Mr. CHAERMAN.—The point of order does not arise. ಇಲ್ಲಿರುವ ಮಂತ್ರಿಗಳು ಎಲ್ಲವನ್ನೂ ಗುರುತುಹಾಕಿಕೊಳ್ಳುತ್ತಾರೆ. ಕೆಲವು ಮಂತ್ರಿಗಳು ಮೆಲ್ಕನೆಗೆ ಹೋಗಬೇಕಾಗಿರುವುದರಿಂದ ಇಲ್ಲಿ ಕೆಲವರು ಮಾತ್ರ ಇದ್ದಾರೆ.

Sri M. C. NARASIMHAN.—Yesterday, the Finance Minieter had given a ruling and the Finance Minister had definitely agreed to collect all the Ministers. This reminds me of the British Parliament where when India was to be discussed before 1957, there would be a think house.. Budget discussions should not degenerate into such a state of affair.

Mr. CHAIRMAN.—There are more than half a dozen Ministers present.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ರೀಸರ್ಚ್ ಸೆಕ್ಷನ್ನಿನಲ್ಲಿ ರೋಗರುಜಿನಗಳನ್ನು ತಡೆಗಟ್ಟಲು ತಕ್ಕ ಕಾರ್ಯಕ್ರಮಗಳನನ್ನು ತಗೆದುಕೊಳ್ಳಬೇಕು. ಹತ್ತಿ ವಿಷಯದಲ್ಲಿ ಹಾಗೂ ಇತರ ಅನೇಕ ಮುಖ್ಯ ಬೆಳೆಗಳು ಎಂದರೆ ಭತ್ತ, ರಾಗಿ, ಇವೇ ಮುಂತಾದ ಬೆಳೆಗಳಿಗೆ ಆಗಿಂದಾಗ್ಗೆ ತೊಂದರೆ ರೈತನಿಗೆ ಬರುತ್ತಿರುತ್ತದೆ. ಇದನ್ನು ತಡೆಗಟ್ಟಲು ರೈತನಿಗೆ ತಕ್ಕ ಸಹಾಯ ಮಾಡಲು ಸಾಕಷ್ಟು ಗಮನವನ್ನು ಈಕಡೆ ಕೊಟ್ಟಿಲ್ಲ ಎಂದು ಹೇಳುತ್ತೇನೆ.

ಇನ್ನು Agricultural Implements ಎಂದರೆ, ವ್ಯವಸಾಯದ ಉಪಕರಣಗಳನ್ನು ಮಾಡುವ ವಿಷಯದಲ್ಲಿ, ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಹೊಸದಾದ ವ್ಯವಸಾಯದ ಉಪಕರಣಗಳನ್ನುಮಾಡಿ ರೈತನಿಗೆ ಎಲ್ಲಾ ಅನುಕೂಲಗಳನ್ನೂ ಕಲ್ಪಿಸಿಕೊಡಬೇಕು ಎಂದು ಇತ್ತು. ಹೊಸದಾಗಿ ಕಂಡುಹಿಡಿಯತಕ್ಕ ಉಪಕರಣಗಳು ರೈತನಿಗೆ ಸುಲಭವಾಗಿ ಸಿಗುವಂತೆ ಏರ್ಪಾಡು ಮಾಡಬೇಕು. ಹೊಸದಾಗಿ ವ್ಯವಸಾಯ ಮಾಡುವವನಿಗೆ ಪ್ರೋತ್ಸಾಹ ಕೊಡುವ ವ್ಯವಸ್ಥೆಯನ್ನು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಿಲ್ಲ. ಮೈಸೂರಿನಲ್ಲಿ, ಹಾಸನದಲ್ಲಿ ಒಂದು ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಇದೆ ಮತ್ತು ಉಳಿದ ಕಡೆ ಅಲ್ಪ ಸ್ವಲ್ಪ ಖಾಸಗೀ ಉದ್ಯಮಗಳೂ ನಡೆಯುತ್ತಿವೆ. ಸರಕಾರ ಈ ಕಡೆಗೆ ಗಮನ ಕೊಟ್ಟಿಲ್ಲ. ಎಂದು ವಿಷಾದದಿಂದ ಹೇಳಬೇಕಾಗಿದೆ. ವ್ಯವಸಾಯದ ಉಪಕರಣಗಳನ್ನು ಮಾಡುವಾಗ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಮಾಡುವುದರಿಂದ ಕಾರ್ಯಸಾಧನೆಯಾಗುವುದಿಲ್ಲ ಎಂದು ನನ್ನ ಅಭಿಪ್ರಾಯ. ವ್ಯವಸಾಯ ಉಪಕರಣ

(ಶ್ರೀ ಎಚ್. ಹುಚ್ಚಮಾಸ್ತಿಗೌಡ)

ಗಳನ್ನು ಸಹಕಾರ ತತ್ವದ ಮೇಲೆ ಸಹಕಾರ ಸಂಘಗಳ ಮೂಲಕ ಅಥವಾ ಖಾಸಗಿ ಉದ್ಯಮಗಳಿಗೆ ಜವಾಬುದಾರಿಯನ್ನು ಕೊಟ್ಟು ಅವರಿಗೆ ಹೆಚ್ಚು ಪ್ರೋತ್ಸಾಹವನ್ನು ಕೊಡುವುದು ಅಗತ್ಯ. ದೊಡ್ಡ ದೊಡ್ಡ ಕಾರ್ಖಾನೆಗಳಿಂದ ಕೆಲಸವಾಗುತ್ತದೆ ಎಂದರೆ ಅದು ಸಫಲವಾಗುವುದಿಲ್ಲ ಎಂದು ನನ್ನ ಅಭಿಪ್ರಾಯ. ಉದಾಹರಣೆಯಾಗಿ ಹೇಳುವಾಗ ಹಾಸನದ ಇಂಪ್ಲಿಮೆಂಟು ಫ್ಯಾಕ್ಟರಿಯಲ್ಲಿ ಮಾಡಿದ ಒಂದು ಕಬ್ಬಿಣದ ನೇಗಿಲಿಗೆ 40 ರೂಪಾಯಿಗಳಾದರೆ, ಖಾಸಗಿಯಾಗಿ ಆಗಲೀ, ಸಹಕಾರ ಸಂಘದ ಮೂಲಕವಾಗಲೀ ತಯಾರಾಗಿರತಕ್ಕ ಒಂದು ಕಬ್ಬಿಣದ ನೇಗಿಲಿಗೆ 27-00 ರೂಪಾಯಿಗಳ ಬೆಲೆ ಇದೆ. ಇಷ್ಟು ದೊಡ್ಡ ವ್ಯತ್ಯಾಸವಿದೆ, ಇದನ್ನೇ ಇಟ್ಟುಕೊಂಡು ನೋಡಿದರೆ ವ್ಯವಸಾಯದ ಉಪಕರಣಗಳನ್ನು ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಮಾಡಿ ರೈತನಿಗೆ ಸುಲಭ ದರದಲ್ಲಿ ಒದಗಿಸುವುದಕ್ಕೆ ಆಗುವುದಿಲ್ಲ ಎಂದು ಮನಗಾಣಬಹುದು. ಇನ್ನು ಮುಂದೆ ಸಹಕಾರ ಸಂಘಗಳ ಮೂಲಕ ಒಂದೊಂದು ಡಿವಿಜನ್ನಿನಲ್ಲಿ ಆಗಲೀ ಒಂದು ಸಣ್ಣ ಸಣ್ಣ ಕೈಗಾರಿಕೆಗಳ ರೀತಿಯಲ್ಲಿ ಈ ಕೆಲಸಗಳನ್ನು ಮಾಡಲು ಸರಕಾರ ಕೈಗೊಳ್ಳಬೇಕು ಎಂದು ನಾನಿಲ್ಲಿ ಸಲಹೆ ಮಾಡುತ್ತೇನೆ.

ವ್ಯವಸಾಯದ ಜೊತೆಗೆ ಹಾಸುಹೊಕ್ಕಾಗಿ ಹೊಂದಿಕೊಂಡಿರುವ ಪಶುಸಂಪತ್ತಿನ ವಿಚಾರವಾಗಿ ಕೆಲವು ವಿಷಯಗಳನ್ನು ಈ ಸಭೆಯ ಮುಂದೆ ವಿನಂತಿ ಮಾಡಿಕೊಳ್ಳಬೇಕೆಂದು ನಾನು ಇಷ್ಟಪಡುತ್ತೇನೆ. ವ್ಯವಸಾಯಗಾರ ಸಾಮಾನ್ಯ ಬಡವನೇ ಆಗಲಿ, ದೊಡ್ಡವನೇ ಆಗಲಿ, ಪಶುಸಂಪತ್ತಿಲ್ಲದೆ ಅವನು ವ್ಯವಸಾಯ ಮಾಡುವುದಕ್ಕೆ ಸಾಧ್ಯವಿಲ್ಲ. ದೊಡ್ಡ ದೊಡ್ಡ ಪಂಪುಗಳು ಮತ್ತು ಇನ್ನಿತರ ಯಂತ್ರಗಳನ್ನಿಟ್ಟುಕೊಂಡು ಎಲ್ಲರೂ ವ್ಯವಸಾಯ ಮಾಡುವುದಕ್ಕೆ ಸಾಧ್ಯವಿಲ್ಲ. ಕೆಲವರಿಗೆ ಒಂದು ಕಡೆ ಹತ್ತು ಎಕರೆ ಇರಬಹುದು, ನಾಲ್ಕು ಎಕರೆ ಇರಬಹುದು, ಅಥವಾ ಎರಡೇ ಎಕರೆಗಳಷ್ಟು ಇರಬಹುದು. ಎಲ್ಲರೂ ಯಂತ್ರಗಳನ್ನಿಟ್ಟುಕೊಂಡು ವ್ಯವಸಾಯವನ್ನು ಮಾಡುವುದಕ್ಕಾಗುವುದಿಲ್ಲ. ದನಕರುಗಳನ್ನೇ ನಾವು ನಂಬಿಕೊಂಡಿರಬೇಕು. ಎಲ್ಲಿಯವರೆಗೆ ಹೋಲ್ಡಿಂಗ್ಸ್‌ಗಳನ್ನು ಒಂದು ಕಡೆ Consolidate ಆಗಿ ಸಹಕಾರಿ ವ್ಯವಸಾಯ ಪದ್ಧತಿ ಬರುವವರೆಗೆ ದನಗಳನ್ನಿಟ್ಟುಕೊಂಡೇ ಕೆಲಸ ಮಾಡಬೇಕು. ಜೊತೆಗೆ ನಮಗೆ ಬೇಕಾಗುವ ಹಾಲಿಗಾಗಿ ದನಗಳನ್ನಿಟ್ಟುಕೊಂಡು ಪಶುಸಂಪತ್ತನ್ನು ಹೆಚ್ಚು ಮಾಡಿಕೊಳ್ಳಬೇಕು. ಇದರ ಬಗ್ಗೆ ಹೇಳುವಾಗ ನಮ್ಮಲ್ಲಿ ಅನೇಕ ತರಹದ ತಳಿಗಳಿವೆ. ಅಮೃತಮಹಲ್, ಹಳ್ಳಿಕಾರ್, ಕೃಷ್ಣಾವ್ಯಾಲಿ ಬ್ರೀಡ್, ಮತ್ತು ಮಲೆನಾಡು ಗಿಡ್ಡ ಎಂದು ಇರುವ ಅನೇಕ ತರಹ ಜಾತಿಯ ದನಗಳು, ಬೆಂಗಳೂರು, ಮೈಸೂರು ಮತ್ತು ಇದರ ಸುತ್ತಮುತ್ತ ಇವೆ.

ಇಷ್ಟು ಜಾತಿಯ ದನಗಳು ನಮ್ಮ ಮೈಸೂರು ದೇಶದಲ್ಲಿಯೇ ಇವೆ. ತಳಿಗಳ ಅಭಿವೃದ್ಧಿಗೆ ಸರಕಾರ ಮಾಡುತ್ತಿರುವ ಕೆಲಸವಾದರೂ ಏನು ? ಅಮೃತ ಮಹಲ್ ಜಾತಿ ದನಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಅಜ್ಜಂಪುರದಲ್ಲಿ ಒಂದು cattle farm ನ್ನು ಮಾಡಿದ್ದಾರೆ. ಅದರಲ್ಲಿರುವ ದನಗಳ ತಳಿಗಳು ದಿನೇ ದಿನೇ ಕ್ಷೀಣದೆಸೆಗೆ ಬರುತ್ತಿದೆಯೆಂದು ನಾನು ಹೇಳುತ್ತೇನೆ. ಇದಕ್ಕೇನು ಕಾರಣ? ಈಗ್ಗೆ ಒಂದು ವರ್ಷಕ್ಕಿಂತಲೂ ಹಿಂದಿನಿಂದ ಪ್ರಸಿದ್ಧವಾದ ಈ ತಳಿಗಳು ಅಭಿವೃದ್ಧಿ ಮಾಡುವ ಕೆಲಸದಲ್ಲಿ ಸರಕಾರ ಸಾಕಷ್ಟು ಗಮನ ಕೊಟ್ಟಿಲ್ಲ. ಹಳ್ಳಿಕಾರ್ ಜಾತಿ ಎನ್ನುವುದು ಮೈಸೂರು ದೇಶದಲ್ಲಿರುವ ಉತ್ತಮ ಜಾತಿಯಲ್ಲಿ ಅತ್ಯುತ್ತಮವಾದ ಜಾತಿಯದು. ಇಲ್ಲಿಂದ ಎತ್ತುಗಳು ಧಾರವಾಡ, ಬಳ್ಳಾರಿ, ಮದರಾಸಿನ ಸೇಲಂ ಜಿಲ್ಲೆಗಳಿಗೆ, ದಕ್ಷಿಣಕನ್ನಡ ಮತ್ತು ಉತ್ತರಕನ್ನಡ ಜಿಲ್ಲೆಗಳಿಗೆ ಹೋಗುತ್ತಿವೆ. ಇಷ್ಟೊಂದು ಎತ್ತುಗಳನ್ನೂ ಒದಗಿಸಬೇಕಾದರೆ, ಸರಕಾರ ಏನು ಮಾಡುತ್ತಿದೆ ಎಂದು ಕೇಳಬೇಕಾಗಿದೆ. ರೈತನಿಗೆ ಬೇಕಾಗುವ ದನಗಳನ್ನು ಮತ್ತು ಹಳ್ಳಿಕಾರ ದನಗಳ ತಳಿಯನ್ನು ಅಭಿವೃದ್ಧಿ ಮಾಡಿ

ಉತ್ತಮವಾಗಿ ಮಾಡಲು ಮೇವನ್ನು ಒದಗಿಸುವುದು ಮುಖ್ಯವಾಗಿದೆ. ಈ ತಳಿಗಳನ್ನೂ ಅಭಿವೃದ್ಧಿ ಮಾಡುವ ಕೆಲಸದಲ್ಲಿ ರೈತನ ಜವಾಬ್ದಾರಿಯೂ ಇದೆ. ಹಾಗಿದ್ದರೂ ಅವನು ಮಾಡುತ್ತಿರುವ ಕೆಲಸ ಸಾಲದು. ನಾನು ಈಗಾಗಲೇ ಮೊದಲು ಹೇಳಿದ ನಾಲ್ಕೈದು ತರಹದ ತಳಿಗಳ ಅಭಿವೃದ್ಧಿಗಾಗಿ ಒಂದೊಂದು ಫಾರಂಗಳನ್ನಾಗಿ ಮಾಡಬೇಕೆಂದು ನನ್ನ ಸಲಹೆ.

ಇಲ್ಲಿ ಹಳ್ಳಿಕಾರ್ ರಾಸುಗಳು ಹೆಚ್ಚಾಗಬೇಕಾದರೆ ಪೆಡ್ರಿಗ್ರಿ ಬೇಸಿಸ್ ಮೇಲೆ ಹೆಚ್ಚು ಮಾಡಿ ದೇಶದ ಇತರ ಭಾಗಗಳಿಗೆ ಒದಗಿಸುವುದಕ್ಕೆ ಇಲ್ಲಿರುವ ತಳಿಗಳಲ್ಲಿ ದೋಷವಿದೆ ಎಂದು ಕಾಣುತ್ತದೆ. ಇದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಮೃತಮಹಲ್ ಕಾವಲಿನ ತಳಿಗಳನ್ನು ಕೃಷ್ಣಾವ್ಯಾಲಿ ಬ್ರೀಡ್ ತಳಿಗಳನ್ನು ಅಭಿವೃದ್ಧಿ ಮಾಡುವುದಕ್ಕಾಗಿ ಒಂದೊಂದು ಫಾರಮನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಸರಕಾರದವರು ಈಚೆಗೆ ಕೆಲವು ಕೃತಕವೀರ್ಯ ಕೇಂದ್ರಗಳನ್ನು ತೆರೆದಿದ್ದಾರೆ. ಇವು ಸಾಲದು. ಇಲ್ಲಿ ಅಭಿವೃದ್ಧಿ ಪಡಿಸುವುದಕ್ಕೆ ಹೋರಿಗಳು ಸಾಕಷ್ಟು ಸಂಖ್ಯೆಯಲ್ಲಿಲ್ಲ. ಇಂತಹ ಕೃತಿಕ ವೀರ್ಯದ ಕೇಂದ್ರಗಳನ್ನು ಇನ್ನೂ ಹೆಚ್ಚಾಗಿ ಸ್ಥಾಪನೆ ಮಾಡಬೇಕು. ಮತ್ತು ಈ ವಿಷಯಗಳನ್ನು ಹಳ್ಳಿಗಾಡಿನ ಜನಕ್ಕೆ ತಿಳುವಳಿಕೆ ಕೊಟ್ಟು ಸಹಾಯ ಮಾಡುವುದಕ್ಕೋಸ್ಕರ ವ್ಯಾನುಗಳನ್ನು ಒದಗಿಸಿ ಕೊಡದೇಹೋದರೆ ಈ ಕೆಲಸವಾಗುವುದಿಲ್ಲ. ಈ ದೃಷ್ಟಿಯಿಂದ ಸರಕಾರ ಮಾಡುತ್ತಿರುವ ಕೆಲಸ ಬಹಳ ಕಡಿಮೆ ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಇದರ ಹಾಗೇನೇ ಕುರಿಗಳನ್ನು, ಹಂದಿಗಳನ್ನು ಅಭಿವೃದ್ಧಿ ಮಾಡಲು ಮತ್ತು ಇದರ ಉತ್ತಮವಾದ ತಳಿಗಳನ್ನು ಒದಗಿಸುವುದಕ್ಕಾಗಲೀ ಈ ಕೆಲಸವನ್ನು ಇನ್ನೂ ಹೆಚ್ಚಾಗಿ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಈಗಾಗಲೇ 24 key village farms ಎಂದು ಇದ್ದರೂ ಕೂಡ ಅಲ್ಲಿ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ನಾನು ವಿಷಾದದಿಂದ ಇಲ್ಲಿ ಹೇಳಬೇಕಾಗಿದೆ. ಅಲ್ಲದೆ ಸರಕಾರದವರು ವ್ಯವಸಾಯಕ್ಕಾಗಿ ಪಂಚವಾರ್ಷಿಕ ಯೋಜನೆಯಲ್ಲಿ ಈ ಪಶುಸಂಪತ್ತನ್ನು ಅಭಿವೃದ್ಧಿ ಮಾಡುವುದಕ್ಕಾಗಿ ಮುಖ್ಯ ಸೂಚನೆಯೊಂದನ್ನು ಕೊಟ್ಟಿದ್ದಾರೆ. ಅದರಲ್ಲೇನು ಹೇಳಿದ್ದಾರೆಂದರೆ—

> "The main aim is to increase the quality and quantity of live-stock production by remedying the existing deficiencies like poor feeding, defective breeding prevalence of diseases, absence of profitable market for live stock products..... ..."

ಎಂದು ಇಲ್ಲಿ ಸ್ಪಷ್ಟವಾದ ಸೂಚನೆ ಇದೆ. ಆದರೆ Defective Breeding ತಪ್ಪಿಸುವುದಕ್ಕೆ ಸಾಕಾದಷ್ಟು ಪ್ರಯತ್ನ ನಡೆದಿಲ್ಲ ಎನ್ನುವುದನ್ನು ನನ್ನ ಅನುಭವದಿಂದ ನಾನು ತಿಳಿದುಕೊಂಡಿರುವುದನ್ನು ಈ ಸಭೆಯ ಮುಂದೆ ಇಟ್ಟಿದ್ದೇನೆ. ಇನ್ನು Defective feeding ಎಂದರೆ ದನಗಳಿಗೆ ಅಗತ್ಯವಾಗಿ ಬೇಕಾಗಿರತಕ್ಕ ಮೇವಿನ ವಿಷಯದಲ್ಲಿ ಸರಕಾರ ಕೈಗೊಂಡಿರುವ ಕಾರ್ಯಕ್ರಮ ಸಾಲದು.

4-30 P.M.

ಇನ್ನು ಕೀ-ವಿಲೇಜ್ ಫಾರಂಗಳಲ್ಲಿ a fodder development organisation has been set up for planning, supervision and control of measures for the improvement of feed and fodder resources in Key Village areas ಎಂದು ಹೇಳಿದ್ದಾರೆ. ಅಲ್ಲಿ ನಡೆಯುವ ವಿದ್ಯಮಾನಗಳನ್ನು ನೋಡಿದರೆ ಒಂದು ಚದುರಗಜದಲ್ಲಿಯೂ ಕೂಡ ಹುಲ್ಲು ಬೆಳೆದಿಲ್ಲ. ನಾನಾ ಜಾತಿಯ ಹುಲ್ಲನ್ನು ಬೆಳೆಸುತ್ತಿದ್ದೇವೆ ಎಂದು ಯಾರಾದರೂ ಬಂದು ನೋಡುವವರಿಗೆ ಆ ರೀತಿ ಹೇಳಿ ತೋರಿಸುತ್ತಾರೆ. ಇದು ಏನೇನೂ ಸಾಲದು.

(ಶ್ರೀ ಎಸ್. ಹುಚ್ಚಮಾಸ್ತಿಗೌಡ)

ಎಕ್ಸ್‌ಪೆರಿಮೆಂಟಲ್ ಫಾರಮ್ಸ್, ಡೆಮಾನ್‌ಸ್ಟ್ರೇಟಿವ್ ಫಾರಮ್ಸ್ ಎಂದು ನಾನಾ ಜಾತಿಯ ಹುಲ್ಲನ್ನು ಬೆಳೆಸಿ ದನಗಳನ್ನು ಸಾಕಬೇಕು. ಅದಕ್ಕೋಸ್ಕರ ಸರ್ಕಾರದವರು ರೈತರಿಗೆ ಗ್ರಾಂಟಿನ ರೂಪದಲ್ಲಿ ಹಣ ಸಹಾಯಮಾಡಿ ಅವರಿಗೆ ಈ ಬಗ್ಗೆ ಪರಿಹಾರ ಕೊಡಬೇಕು.

ಮೂರನೆಯದಾಗಿ, ಪಶುಗಳ ರೋಗ, ರುಜಿನಗಳನ್ನು ತಡೆಗಟ್ಟುವುದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮ ಸರಿಯಾಗಿಲ್ಲ. ಅದಕ್ಕಾಗಿ ಸರ್ಕಾರದವರು ಹೊಸದಾಗಿ ಆಸ್ಪತ್ರೆಗಳನ್ನು ತೆಗೆಯುವುದು ಅಗತ್ಯವಿಲ್ಲ. ತೀರ ತೊಂದರೆಗಳಿರುವ ಕಡೆ ತೆಗೆದರೆ ಒಳ್ಳೆಯದು. ಈಗ ಹೆಚ್ಚು ಔಷಧಿಗಳನ್ನು ಒದಗಿಸಬೇಕಾದುದು ಅವಶ್ಯಕವಿದೆ. ಏಕೆಂದರೆ ಭಾರತ ದೇಶದಲ್ಲಿ ಎಮ್ಮೆ ಕುರಿ, ದನಗಳಿಗೆ ಲಿವರ್ ಕ್ಯಾರಲ್‌ರೋಗ ಇರುವುದು ಈಚೀಚೆಗೆ ಜಾಸ್ತಿಯಾಗುತ್ತಿದೆ. ಇದರಿಂದ ಗ್ರಾಮಗಳಲ್ಲಿ ಒಂದು ಎಮ್ಮೆಯೂ ಉಳಿಯುವುದಿಲ್ಲ, ಕೆಲವು ಕಡೆ ಗ್ರಾಮಗಳಲ್ಲಿ ಅದಕ್ಕೆ ತಕ್ಕ ಔಷಧಿ ದೊರೆಯುವುದು ಕಷ್ಟ. ಆದ್ದರಿಂದ ದನ, ಎಮ್ಮೆ ಮುಂತಾದ ಸಾಧು ಪ್ರಾಣಿಗಳು ಸಾಯದ ಹಾಗೆ ವ್ಯವಸ್ಥೆ ಮಾಡಬೇಕು. ರೈತರಿಗೆ ಇದೇ ದೊಡ್ಡ ಆಸ್ತಿ. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ನಾನು ಎಷ್ಟೋಸಾರಿ ಕೆಲವು ಪ್ರದೇಶಗಳ ಈ ವಿಷಯವನ್ನು ತಿಳಿಸಿದ್ದೇನೆ. ಆದರೂ ಕೂಡ ಅವರಿಗೆ ಹೆಚ್ಚು ಸಿಬ್ಬಂದಿಯನ್ನು ಇನ್ನೂ ಒದಗಿಸಕ್ಕಾಗಲಿಲ್ಲ. ಔಷಧಿಗಳೇನೋ ಇವೆ. ಆದರೆ ಸಿಬ್ಬಂದಿ ಸಾಲದು. ಆದ್ದರಿಂದ ಸರ್ಕಾರದವರು ಇನ್ನು ಮುಂದಾದರೂ ಹೆಚ್ಚಿನ ಸಿಬ್ಬಂದಿಗಳ ಮೂಲಕ ಔಷಧಿಗಳನ್ನು ಗ್ರಾಮಗಳಲ್ಲಿ ಒದಗಿಸಿ ದನ, ಎಮ್ಮೆಗಳು ವಿಶೇಷವಾಗಿ ಈ ರೋಗದಿಂದ ಸಾಯುತ್ತಾ ಇರುವುದನ್ನು ತಪ್ಪಿಸಬೇಕೆಂದು ಸರ್ಕಾರದವರನ್ನು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

Sri KADIDAL MANJAPPA.—Is it a contagious disease ?

ಶ್ರೀ ಎಸ್. ಹುಚ್ಚಮಾಸ್ತಿ ಗೌಡ.—ಈ ಕಾಯಿಲೆ ದನಗಳು ಹುಲ್ಲು ಮೇಯುವ ಪ್ರದೇಶದಲ್ಲಿ ಬರುತ್ತದೆ. ಬಸವನಹುಳು ಹೊಟ್ಟೆಯಲ್ಲಿ ಬೆಳೆದು ಸೊಳ್ಳೆಯಿಂದ ಯಾವ ರೀತಿ ಫೈಲೋಸೇಸ್ ಕಾಯಿಲೆ ಉಂಟಾಗುತ್ತದೋ ಆ ರೀತಿ ದನಗಳ ಈಲಿಯಲ್ಲಿ ಅಂತಹ ಹುಳು ಸೇರಿ ತಿಂದು ಹಾಕುತ್ತದೆ. ಇಂಥಾದ್ದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಸಮಸ್ತ ಪ್ರಯತ್ನಗಳನ್ನೂ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಪಶುಸಂಪತ್ತು ಅಭಿವೃದ್ಧಿಯ ಬಗ್ಗೆ ಹೇಳುವುದಾದರೆ, ಇಲ್ಲ ಪ್ಯೂರ್ ಬ್ರೀಡ್ಸನ್ನು ಮೇಂಟೇನ್ ಮಾಡುವುದು ಒಳ್ಳೆಯದು. ಹಳ್ಳಿಗಾಡಿನಲ್ಲಿ ಅಂತಹುಗಳ ಮೇಲೆ ಕ್ರಾಸ್ ಬ್ರೀಡ್ ಮಾಡಿದರೆ ಉಪಯೋಗವಾಗುತ್ತದೆ. ಈ ರೀತಿ ಕ್ರಾಸ್ ಬ್ರೀಡ್ ಮಾಡುವುದರಿಂದಲೇ ಹೆಚ್ಚು ಉತ್ಪತ್ತಿ ಆಗುತ್ತದೆಂದು ಅನೇಕ ಪ್ರಯೋಗಗಳನ್ನು ಬಂಗಾಳ, ಅರಿಯಾನ ಮುಂತಾದ ಪ್ರದೇಶಗಳಲ್ಲಿ ಮಾಡುತ್ತಿರುವುದು ಅದು ಬಹಳ ಹೆಚ್ಚಾಗಿದೆ. ಬಂಜಾರ್ ಕ್ರಾಸ್ ಬ್ರೀಡ್ ಮಾಡಿ ಎಷ್ಟರಮಟ್ಟಿಗೆ ಪ್ರಯೋಗಗಳನ್ನು ನಡೆಸುತ್ತಾರೆ. ಆದ್ದರಿಂದ ಪ್ಯೂರ್ ಬ್ರೀಡ್ಸ್ ಮೇಂಟೇನ್ ಮಾಡುವುದರಿಂದ ಕ್ರಾಸ್ ಬ್ರೀಡ್ಸ್‌ಗೆ ಹೆಚ್ಚಿನ ಪ್ರಯೋಜನ ಉಂಟಾಗುತ್ತದೆಂಬುದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು. ಆರೀತಿ ಮಾಡಿದ್ದರೆ ಪಶುಸಂಪತ್ತನ್ನು ನಾವು ಹೆಚ್ಚಿಸುವುದಕ್ಕಾಗುವುದಿಲ್ಲ. ಈ ಕೆಲಸವನ್ನು ಸರ್ಕಾರ ಬಡರೈತನ ಮೇಲೆ ಹೊರಿಸುವುದರಿಂದ ಏನೂ ಪ್ರಯೋಜನವಾಗಲಾರದು ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಆದ್ದರಿಂದ ಸರ್ಕಾರದವರು ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಪ್ರಯೋಗಗಳನ್ನು ಖಂಡಿತವಾಗಿ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಗೋಸಂಪತ್ತನ್ನು ಅಭಿವೃದ್ಧಿ ಪಡಿಸಬೇಕು ಎಂದು ಹೇಳಿದಿರಿ. ಮೇಯುವುದಕ್ಕೇ ಭೂಮಿಇಲ್ಲದೇ ಇರುವಾಗ ಅನೇಕ ಜಮೀನುಗಳನ್ನು ವ್ಯವಸಾಯಕ್ಕೋಸ್ಕರ ಕೊಟ್ಟಿದ್ದಾರಲ್ಲಾ ! What is your suggestion ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ನನ್ನ ಸ್ನೇಹಿತರು ನನ್ನ ಅಭಿಪ್ರಾಯಗಳಿಗೆ ಸರಿಯಾಗಿ ಕಿವಿಗೊಡಲಿಲ್ಲವೆಂದು ನಾನು ವ್ಯಸನದಿಂದ ಹೇಳಬೇಕಾಗಿದೆ. ಹಳ್ಳಿಗಳಲ್ಲಿರತಕ್ಕ ಗೋಮಾಳವನ್ನು ನೋಡುವವರಿಗೆ ಇದರಿಂದ ಯಾವ ರೀತಿಯಲ್ಲೂ ಪ್ರಯೋಜನವಾಗುವುದಿಲ್ಲ ವೆಂಬುದು ಸ್ಪಷ್ಟವಾದ ವಿಷಯ. ಹಿಂದೆ 100 ರಾಸುಗಳಿಗೆ 30 ಎಕರೆ ಗೋಮಾಳ ಇರ ಬೇಕೆಂದು ಇತ್ತು. ಈಚೆಗೆ ವ್ಯವಸಾಯ ಮಾಡತಕ್ಕವರಿಗೆ ಗೋಮಾಳಕ್ಕೆಂದು ಕೆಲವು ಜಮೀನುಗಳನ್ನು ಕೊಡುತ್ತಾರೆ. ಇದರಿಂದ ಸರ್ಕಾರ ನಷ್ಟವಾಗುತ್ತದೆಂದು ಭಾವಿಸುವು ದಕ್ಕೆ ಅವಕಾಶವೇ ಇಲ್ಲ. ಗೋಮಾಳವಿಲ್ಲದೆ ನಮಗೆ ರಾಸುಗಳನ್ನು ಸಾಕುವುದಕ್ಕಾಗುವು ದಿಲ್ಲ. ಇದರಿಂದ ರೈತರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಈಚೆಗೆ ಜನಸಂಖ್ಯೆ ಜಾಸ್ತಿ ಯಾಗುತ್ತಿರುವುದರಿಂದ ಜನಗಳಿಗೆ ಹೆಚ್ಚು ಹೆಚ್ಚಾಗಿ ಜಮೀನುಗಳನ್ನು ಒದಗಿಸುವುದು ಅಗತ್ಯವಿದೆ. ರಾಸುಗಳನ್ನು ಸಾಕಬೇಕಾದರೆ ನಾನಾ ಜಾತಿಯ ಹುಲ್ಲನ್ನು ಬೆಳೆದು ಅವುಗಳನ್ನು ಸಾಕಬೇಕು. ಗೋಮಾಳಕ್ಕಾಗಿ ಅನೇಕ ಕಾಡುಗಳಲ್ಲೂ ನಾನಾ ತರಹ ಹುಲ್ಲನ್ನು ಬೆಳೆಯುವುದಕ್ಕೆ ಅವಕಾಶವಿದೆ. ಇನ್ನು ಹೆಚ್ಚಿಗೆ ಈ ವಿಷಯದ ಮೇಲೆ ಮಾತ ನಾಡಲು ಹೋಗುವುದಿಲ್ಲ.

ಇನ್ನು ಲೋಕೋಪಯೋಗಿ ಶಾಖೆಯ ವಿಚಾರವಾಗಿ ಸ್ವಲ್ಪ ಮಾತನಾಡುತ್ತೇನೆ. ಈ ಶಾಖೆಯಲ್ಲಿ ಕೋಟ್ಯಾಂತರ ರೂಪಾಯಿಗಳ ಕೆಲಸ ನಡೆಯುತ್ತಿದೆ. ಸರ್ಕಾರದವರು ಈ ವಿಷಯದಲ್ಲಿ ಬಹು ಹೆಚ್ಚಿನ ಗಮನವನ್ನು ಕೊಡಬೇಕು. ನಮ್ಮಲ್ಲಿ ಅನೇಕ ನದಿ ಗಳಿವೆ. ಕಾವೇರಿ ವ್ಯಾಲಿ, ಕೃಷ್ಣಾವ್ಯಾಲಿ, ಅದಕ್ಕೆ ಸಂಬಂಧಪಟ್ಟ ಉಪನದಿಗಳ ವ್ಯಾಲಿ ಇದೆ. ಯಾವ್ಯಾವ ನದಿಗಳ ಪಾತ್ರದಲ್ಲಿ ಎಷ್ಟೆಷ್ಟು ನೀರನ್ನು ತಡೆಗಟ್ಟಿ ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದಾರೆ, ಇನ್ನು ಎಷ್ಟು ಭಾಗ ಉಳಿದಿದೆ ಎಂಬುದನ್ನು ಮೊದಲು ಕಂಡು ಹಿಡಿಯಬೇಕು. ಅಲ್ಲದೆ ಪ್ರತಿಯೊಂದು ವ್ಯಾಲಿಯನ್ನು ಸರ್ವೆಮಾಡಿ ಕೆಲಸ ಪ್ರಾರಂಭ ಮಾಡು ವುದು ಅನುಕೂಲ. ಅದನ್ನು ಬಿಟ್ಟು ಇರತಕ್ಕ ಕೆರೆಯನ್ನು ಕೆಡಿಸಿ ಅದಕ್ಕೆ ಕುಂದಕ ಮಾಡಿ ಇನ್ನೊಂದು ಕಡೆ ಕೆರೆ ಕಟ್ಟಿಸುತ್ತೇನೆಂದು ಹೇಳುವುದು ಯಾವ ನ್ಯಾಯ ?

Sri C. M. ARUMUGHAM.—Is there no Master Plan in the P. W. D. the Minister announced some years ago that he would prepare a Master Plan. Where is the Master Plan ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಮಾನ್ಯ ಸ್ನೇಹಿತರು ಆ ಬಗ್ಗೆ ಎಷ್ಟು ಆತುರ ವಾಗಿದ್ದರೂ ಅಷ್ಟೇ ಆತುರವಾಗಿ ಈ ಕೆಲಸಗಳು ಚೆನ್ನಾಗಿ ಜಾಗ್ರತೆಯಾಗಿ ನೆರವೇರಲಿ ಎಂದು ನಾನೂ ಇದ್ದೇನೆ. ಸರ್ಕಾರದವರು ಪ್ರತಿಯೊಂದು ಸ್ಕೀಮನ್ನು ಮಾಸ್ಟರ್ ಪ್ಲಾನಾಗಿ ಮಾಡುತ್ತಿದ್ದಾರೆಂದು ನಾನು ಊಹೆಮಾಡುತ್ತೇನೆ. ನಿಜವಾಗಿ ಸರ್ಕಾರದವರು ವ್ಯಾಲಿವೈಜ್ ಸರ್ವೆ ಮಾಡದಿದ್ದರೆ, ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರದವರು ಈ ವಿಷಯದಲ್ಲಿ ನಿಧಾನಮಾಡದೆ ತಕ್ಕ ಕ್ರಮವನ್ನು ಈ ಕೂಡಲೆ ತೆಗೆದು ಕೊಳ್ಳಬೇಕೆಂದು ತಮ್ಮ ಪರವಾಗಿಯೂ, ನನ್ನ ಪರವಾಗಿಯೂ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಸಣ್ಣ ಕೆರೆಗಳ ಜೀರ್ಣೋದ್ಧಾರದ ಕೆಲಸಗಳನ್ನೂ ರೆವಿನ್ಯೂ ಇಲಾಖೆ ಕೆಲಸವನ್ನೂ, ಪಿ. ಡಬ್ಲ್ಯು. ಡಿ. ಕೆಲವನ್ನು ತೆಗೆದುಕೊಂಡಿವೆ. ಹೀಗಾಗಿ ಕೆರೆಗಳ ಜೀರ್ಣೋದ್ಧಾರದ ಕೆಲಸ ಚೆನ್ನಾಗಿ ಆಗದೇಹೋಗಿದೆ. ರೆವಿನ್ಯೂ ಇಲಾಖೆಯಲ್ಲಿ ನಾನು ಕಣ್ಣಾರ ನೋಡಿದ್ದೇನೆ. ರೈತರು ತಾವು ಮಾಡುವ ಕೆಲಸವನ್ನು ಮಾಡದೆ ಎಷ್ಟೋ ಕೆರೆಗಳು ಒಡೆದುಹೋಗಿವೆ. ಯಾರ

(ಶ್ರೀ ಎಸ್. ಹುಚ್ಚಮಾಸ್ತಿಗೌಡ)

ವಶದಲ್ಲಿ ಅವು ಇದ್ದರೂ ಕೆರೆಗಳು ಏನಾದರೂ ಒಡೆದರೆ ದೇಶಕ್ಕೆ ಖಂಡಿತವಾಗಿ ನಷ್ಟವಾಗುತ್ತದೆಂಬುದನ್ನು ಯಾರೂ ಮರೆಯಬಾರದು. ಆದ್ದರಿಂದ ಎಲ್ಲಾ ಕೆರೆಗಳ ಮೇಲ್ವಿಚಾರಣೆಯನ್ನೂ ಪಿ. ಡಬ್ಲ್ಯು. ಡಿ ಯವರೇ ತೆಗೆದುಕೊಳ್ಳಬೇಕು. ಈಚೆಗೆ ಈ ಕಾರ್ಯವನ್ನು ಬೆಟರ್‌ಮೆಂಟ್ ಲೆವಿ ಬಿಲ್ ಪಾಸಾದ ಮೇಲೆ ತೆಗೆದುಕೊಳ್ಳುತ್ತೇವೆಂದು ಸರ್ಕಾರದವರು ಹೇಳುತ್ತಾರೆ. ಅದೂ ಒಳ್ಳೆಯದು. ಒಟ್ಟಿನಲ್ಲಿ ಈ ಕಾರ್ಯವನ್ನು ಸ್ಥಳೀಯ ಸಂಸ್ಥೆಗಳಿಗೆ ವಹಿಸುವುದು ಸರಿಯಲ್ಲವೆಂದು ನಾನು ಹೇಳುತ್ತೇನೆ.

ಇನ್ನು ತಾಲ್ಲೂಕ್ ಬೋರ್ಡ್‌ಗಳನ್ನು ರಚನೆ ಮಾಡಿದ್ದೀರಿ. ಮೈನರ್ ಇರ್ರಿಗೇಷನ್ ಅವರಿಗೆ ವಹಿಸಿಕೊಡಬೇಕೆಂಬ ಅಭಿಪ್ರಾಯ ಸರ್ಕಾರಕ್ಕಿದೆ. ತಮ್ಮನ್ನು ನಾನು ಅತಿ ವಿನಯದಿಂದ ಅಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡುತ್ತೇನೆ. ಆ ಕೆಲಸ ಮಾತ್ರ ಮಾಡಬೇಡಿ. ರೆವಿನ್ಯೂ ಆಡಳಿತದಲ್ಲಿದ್ದು ಈಗಾಗಲೇ ಎಷ್ಟೋ ಕೆರೆಗಳು ಒಡೆದುಹೋಗಿ ಈ ಸ್ಥಿತಿಗೆ ಬಂದಿರುವಾಗ, ಈ ಮ್ಯಾನೇಜ್‌ಮೆಂಟ್‌ನ್ನು ಅವರ ಆಡಳಿತಕ್ಕೆ ವಹಿಸುವುದು ಸರಿಯಲ್ಲ. ಏಕೆಂದರೆ ಸಮರ್ಪಕವಾದ ಕೆಲಸ ಅಲ್ಲಿನ ಅಧಿಕಾರಿಗಳಿಂದ ಆಗಲಲ್ಲ. ಹೊಸದಾಗಿ ಚುನಾವಣೆ ಮಾಡಿದ ಮೇಲೆ ಈ ತಾಲ್ಲೂಕ್ ಬೋರ್ಡಿನವರು ಸಾಧ್ಯವಾದ ಮಟ್ಟಿಗೆ ನಡೆಸುತ್ತೇವೆಂದು ಹೇಳುವುದು ಬಹಳ ಅನುಮಾನದ ಸಂಗತಿಯಾಗಿದೆ. ಇವರು ಒಬ್ಬರಿಗೊಬ್ಬರು ವ್ಯಾಜ್ಯಮಾಡುವುದಕ್ಕೆ ಹೊಸ ಪ್ರಯೋಗಗಳನ್ನು ಇಂತಹ ವಿಷಯದಲ್ಲಿ ಈಗಲೇ ಅವರಿಗೆ ವಹಿಸಿಕೊಡಬಾರದು ಎಂಬುದಾಗಿ ನಾನು ಸೂಚನೆಮಾಡುತ್ತೇನೆ. ದೇಶದ ಸಂಪತ್ತನ್ನು ಹೋಗಲಾಡಿಸತಕ್ಕ ವ್ಯವಸ್ಥೆಯನ್ನು ಮಾಡಬಾರದು. ದೇಶಾಭಿವೃದ್ಧಿಯಾಗತಕ್ಕ ಇಂತಹ ದೊಡ್ಡ ದೊಡ್ಡ ಕೆಲಸಗಳನ್ನು ಪಿ. ಡಬ್ಲ್ಯೂ. ಡಿ ಯವರೇ ಇಟ್ಟುಕೊಂಡು ಎಲ್ಲಾ ಕೆರೆಗಳ ಜೀರ್ಣೋದ್ಧಾರ ಕೆಲಸವನ್ನೂ ಸಹ ಅವರೇ ನೋಡಿಕೊಳ್ಳಬೇಕೆಂದು ನಾನು ಸಲಹೆಮಾಡುತ್ತೇನೆ. ಪಿ. ಡಬ್ಲ್ಯೂ. ಡಿ. ಯವರಿಗೇನೇ ಪ್ರಾಥಮಿಕ ಸ್ಕೂಲು ರಿಪೇರಿ, ಮುಂತಾದ ಕೆಲಸಗಳನ್ನು ವಹಿಸಬೇಕು. ಸ್ಥಳೀಯ ಸಂಸ್ಥೆಗಳಿಗೆ ವಹಿಸಬಾರದು. ಏಕೆಂದರೆ ಇವರು ಹೋಗಿ ಮೊದಲು ಅಂದಾಜು ಮಾಡುವುದು. ವಿದ್ಯಾ ಇಲಾಖೆಯವರು ಕೌಂಟರ್ ಸೈನ್‌ಮಾಡುವುದು, ಹೀಗಾಗಿ ಕಾರ್ಯಗಳು ವಿಪರೀತ ನಿಧಾನವಾಗುತ್ತವೆ. ಆದ್ದರಿಂದ ಸಾಮಾನ್ಯವಾಗಿ ಒಂದು ಸ್ಕೂಲ್ ರಿಪೇರಿಯಾಗಬೇಕಾದರೆ ವಿದ್ಯಾ ಇಲಾಖೆಯನ್ನು ಯಾವುದಕ್ಕೂ ನಿರೀಕ್ಷಣೆಮಾಡದೆ ಅದನ್ನು ಪಿ. ಡಬ್ಲ್ಯೂ. ಡಿ. ಯವರಿಗೇನೇ ವಹಿಸಬೇಕು.

ಸ್ಕೂಲುಗಳ ರಿಪೇರಿ ಕೆಲಸವನ್ನು ಸಂಪೂರ್ಣವಾಗಿ ಪಿ.ಡಬ್ಲ್ಯು.ಡಿ. ಯವರಿಗೇ ವಹಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಕೆರೆ ಮತ್ತು ನೀರಾವರಿ ಕಾಂಗಾರಿ ಕೆಲಸಗಳ ಸಂಪೂರ್ಣ ಜವಾಬ್ದಾರಿಯನ್ನು ಅವರಿಗೆ ಕೊಟ್ಟಿರುವಂತೆ ಕೊಟ್ಟರೆ ಪಿ.ಡಬ್ಲ್ಯು.ಡಿ. ಯವರು, ಅವರು ಮಾಡತಕ್ಕಂಥ ಅಂದಾಜುಗಳಲ್ಲಿ ನಂಬಿಕೆ ಇಟ್ಟುಕೊಂಡು ಕೆಲಸ ಮಾಡುತ್ತಾರೆ. ವಿದ್ಯಾ ಇಲಾಖೆ ಅಧಿಕಾರಿಗಳಿಂದ ಕೌಂಟರ್ ಸಿಗ್ನೇಚರ್ ನಿರೀಕ್ಷೆ ಮಾಡುವುದನ್ನು ನಿಲ್ಲಿಸಿ, ಸಂಪೂರ್ಣ ಜವಾಬ್ದಾರಿಯನ್ನು ಪಿ.ಡಬ್ಲ್ಯು.ಡಿ.ಗೆ ಕೊಟ್ಟು ಅವರ ಮುಖಾಂತರವೇ ಕೆಲಸ ಮಾಡಿಸಬೇಕು.

ವಿದ್ಯಾಭ್ಯಾಸದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ಪ್ರೈಮರಿ ಎಜುಕೇಷನ್ನಿನ ಜವಾಬ್ದಾರಿ ಸಂಪೂರ್ಣವಾಗಿ ಸರ್ಕಾರಕ್ಕೆ ಸೇರಿದ್ದು. ಆರರಿಂದ 11 ವರ್ಷದವರೆಗೆ ಮಕ್ಕಳಿಗೆ ಕಡ್ಡಾಯವಾಗಿ ವಿದ್ಯಾಭ್ಯಾಸ ಮಾಡಿಸುವಂಥ ಕೆಲಸ ರಾಜ್ಯಾಂಗದತ್ತವಾಗಿ ಸರ್ಕಾರದ ಜವಾಬ್ದಾರಿ. ಈ ಕೆಲಸವನ್ನು ತಾಲ್ಲೂಕು ಬೋರ್ಡುಗಳಿಗೆ ಅಥವ ಬೊಂಬಾಯಿ ಅಧಿಪತ್ಯದಲ್ಲಿರುವಂತೆ ಲೋಕಲ್ ಬೋರ್ಡುಗಳಿಗೆ ಬಿಡುವುದು

ಹೊತ್ತಿಲ್ಲ. ಈ ವಿದ್ಯಾಭ್ಯಾಸದ ವಿಷಯದಲ್ಲಿ ನಾವು ರಾಜಕೀಯವನ್ನು ಪ್ರದರ್ಶಿಸುವುದಕ್ಕೆ ಪ್ರಯತ್ನ ಮಾಡಬಾರದು. ರಾಜಕೀಯ ಬಂದರೆ ಇವತ್ತು ಒಂದು ಕಡೆ ಕಾಂಗ್ರೆಸ್ ಪಾರ್ಟಿ ಅಧಿಕಾರದಲ್ಲಿರಬಹುದು, ಇನ್ನೊಂದು ಕಡೆ ಪಿ.ಎಸ್.ಪಿ. ಇರಬಹುದು ಅಥವ ಕಮ್ಯೂನಿಸ್ಟ್ ಪಾರ್ಟಿ ಇರಬಹುದು. ಅವರವರ ರಾಜಕೀಯ ದೃಷ್ಟಿಯಿಂದ ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಬಹುದು ಎನ್ನುವ ಶಂಕೆ ನನಗಿದೆ. ಆದ್ದರಿಂದ ಇದನ್ನು ಯಾರಿಗೂ ವಹಿಸಬಾರದು

ಆಡಳಿತದ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಸರ್ಕಾರದ ಆಡಳಿತ ಸ್ವಲ್ಪಮಟ್ಟಿಗೆ ಸಡಿಲವಾಗಿದೆ ಎನ್ನುವುದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾವು ಹೇಳಿದ್ದೂ ಅದೇ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನೀವು ಹೇಳತಕ್ಕಂಥ ವಾದ ಬೇರೆ. ರೆವಿನ್ಯೂ ಇಲಾಖೆಯೇ ಆಗಲಿ, ಪಿ.ಡಬ್ಲ್ಯು.ಡಿ. ಇಲಾಖೆಯೇ ಆಗಲಿ, ಪೋಲೀಸು ಇಲಾಖೆಯೇ ಆಗಲಿ, ಈ 3–4 ಇಲಾಖೆಗಳಲ್ಲಿ ಆಡಳಿತ ಸ್ವಲ್ಪ ಸಡಿಲವಾಗಿದೆ. ಇದಕ್ಕೆ ಕಾರಣವನ್ನು ನನ್ನ ಮೇಲೆ, ನನ್ನ ದೇಶವನ್ನು ಹಾಕಿಕೊಳ್ಳುತ್ತಿದ್ದೇನೆ; ನಮ್ಮ ನಮ್ಮ ವ್ಯತ್ಯಾಸಗಳು ಇದಕ್ಕೆ ಕಾರಣ ಎಂದು ನನ್ನ ಭಾವನೆ. ಈ ವ್ಯತ್ಯಾಸ ಪೂರ್ಣವಾಗಿ ಹೋಗಿದೆ ಎನ್ನುವ ನಂಬಿಕೆ ನನಗೆ ಇದೆ. ಆದರೂ ಅಪನಂಬಿಕೆ ಇಟ್ಟುಕೊಂಡು ನಮ್ಮಲ್ಲಿ ವ್ಯತ್ಯಾಸ ತರುವುದಕ್ಕೆ ನೀವು ಪ್ರಯತ್ನ ಮಾಡಬಾರದು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಇದುವರೆಗೆ ನಮ್ಮ ಮಾನ್ಯ ಸದಸ್ಯರು ಹೇಳಿದರು: ನಮ್ಮ ನಮ್ಮ ವ್ಯತ್ಯಾಸದಿಂದ ಅನೇಕ ಇಲಾಖೆಗಳು ಕೆಲಸ ಮಾಡಲಿಲ್ಲವೆಂದು. ಇವರು ಒಂದಾಗದೆ ದೇಶಕ್ಕೆ ಏತಕ್ಕೆ ಅನ್ಯಾಯ ಮಾಡಿದರು? ಒಂದಾಗಿದ್ದಿದ್ದರೆ ಒಳ್ಳೆಯದು ಮಾಡುತ್ತಿದ್ದಿರಿ ಎಂದು ತಮ್ಮ ಅಭಿಪ್ರಾಯವೇನು? ಇದುವರೆಗೆ ಒಂದಾಗುವತನಕ ಅನ್ಯಾಯ ಮಾಡಿದ್ದು ನಾವು ನೊ-ಕಾನ್‌ಫಿಡೆನ್ಸ್ ಮೋಷನ್ನಿನಲ್ಲಿ ಹೇಳಿದ್ದನ್ನು ಒಪ್ಪಿಕೊಂಡ ಹಾಗಾಯಿತು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ವಿರೋಧ ಪಕ್ಷದ ನಾಯಕರು ನಾಲ್ಕು ವರ್ಷದಿಂದ ಹೇಗೆ ನಡೆದುಕೊಂಡು ಬಂದಿದ್ದಾರೆಂಬುದು ನಮಗೆ ಗೊತ್ತಿದೆ. ಯಾವ ಸಂದರ್ಭದಲ್ಲಿ ಹೇಗೆ ನಡೆದುಕೊಂಡಿದ್ದಾರೆ, ಈಗ ಹೇಗೆ ಭಾಷಣ ಮಾಡಿದ್ದಾರೆ ಎನ್ನುವುದು ನಮಗೆ ತಕ್ಕಮಟ್ಟಿಗೆ ಗೊತ್ತಿದೆ. ಸರ್ಕಾರದ ಆಡಳಿತ ಹೇಗೆ ನಡೆಯಬೇಕು ಎನ್ನುವ ಬಗ್ಗೆ ಉಪದೇಶ ಅಗತ್ಯವಿಲ್ಲ.

ಶ್ರೀ ಎಚ್. ಜಿ. ನರಸಿಂಹೇಗೌಡ.—I rise to a point of order. ಹುಚ್ಚಮಾಸ್ತಿಗೌಡರು ಆರಿಸಿ ಬಂದಿರತಕ್ಕಂಥ ವಿರೋಧ ಪಕ್ಷದ ಮೆಂಬರುಗಳ ಅಭಿಪ್ರಾಯ ತೆಗೆದುಕೊಳ್ಳದೇನೇ ನಮಗೆ ಅಧಿಕಾರ ನಡೆಸುವ ಅಧಿಕಾರವಿದೆಯೆಂದು ಹೇಳಿದರು. ಅದನ್ನು ವಾಪಸ್ಸು ತೆಗೆದು ಕೊಳ್ಳಬೇಕು. 208 ಸದಸ್ಯರಲ್ಲಿ ಪ್ರತಿಯೊಬ್ಬರಿಗೂ ಸಲಹೆ ಕೊಡುವ ಹಕ್ಕಿದೆ. ರೂಲಿಂಗ್ ಕೊಡಬೇಕು.

Mr. CHAIRMAN.—There is no point of order.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ವಿರೋಧ ಪಕ್ಷದವರು ರಚನಾತ್ಮಕವಾದ ಟೀಕೆಗಳನ್ನು ಮಾಡಬೇಕೆಂದು ಮೊದಲೇ ಹೇಳಿದೆ. ವಿರೋಧಪಕ್ಷದ ನಾಯಕರು ನಮಗೆ ಉಪದೇಶ ಮಾಡುವುದಕ್ಕೆ ಹೊರಟರೆ ಅದಕ್ಕೆ ಎಷ್ಟರಮಟ್ಟಿನ ಮಹತ್ವ ಕೊಡಬೇಕೆನ್ನುವುದು ಗೊತ್ತಿದೆ. ನೀವು ಉಪದೇಶಕೊಡುವ ಅಗತ್ಯವಿಲ್ಲವೆಂದು ಹೇಳುತ್ತೇನೆ.

ಆಡಳಿತದಲ್ಲಿ ಅನೇಕ ಅಧಿಕಾರಿಗಳು—ಆಲ್ಲೊಬ್ಬರು ಇಲ್ಲೊಬ್ಬರು—ರಾಜಕಾರಣಿಗಳ ಜೊತೆಯಲ್ಲಿ ರಾಜಕೀಯ ನಡೆಸುವುದಕ್ಕೆ ಹೋದುದು ಅನುಭವಕ್ಕೆ ಬಂದಿದೆ. ಅದು ನಿಲ್ಲುವ ಹಾಗೆ ಮಾಡಿ ಭದ್ರವಾದ ಆಡಳಿತ ನಡೆಸಲು ಮಂತ್ರಿಗಳು ಕೆಲಸ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಂಡು, ಅಧ್ಯಕ್ಷರು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸುತ್ತೇನೆ.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ವಿರೋಧಪಕ್ಷದ ನಾಯಕರು ನಾಲ್ಕು ವರ್ಷ ನಡೆದು ಕೊಂಡಿರತಕ್ಕಂಥ ವಿಷಯವಾಗಿ ಹೇಗೆ ಹೇಗೆ ಹೇಳಿಬಿಟ್ಟು, ಅವರ ಮೇಲೆ ಒಂದು ರೀತಿಯ ಪರಿಣಾಮ, ಸಂದೇಹವಾಗುವ ರೀತಿಯಲ್ಲಿ ಶ್ರೀ ಮಾಸ್ತಿಗೌಡರು ಹೇಳಿರುವುದನ್ನು ತಾವು ಸ್ವಲ್ಪ ನೋಡಿಕೊಳ್ಳಬೇಕೆಂದು ವಿನಯವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸಭಾಪತಿಯವರು.—ವಿರೋಧ ಪಕ್ಷದ ನಾಯಕರು ಇಲ್ಲಿಯೇ ಕುಳಿತುಕೊಂಡಿದ್ದಾರೆ.

†ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ) ಸ್ವಾಮಿ, ನೀವು ಮಂಡಿಸಿರುವ ಬಜೆಟ್ ನಮ್ಮ ಕೈಗೆ ಸಿಕ್ಕಿದಾಗ ನಿಜವಾಗಲೂ ಅದರ ಗಾತ್ರ ಮತ್ತು ಅನೇಕ ಹೊಸ ಪುಸ್ತಕಗಳನ್ನು ಕೊಟ್ಟಿರುವುದನ್ನು ನೋಡಿ, ಇದು ಏನೋ ಒಂದು ಮಹತ್ವದ ಬಜೆಟ್ಟು, ಸರ್ಕಾರ ರಾಜ್ಯದ ಮುಂದಿನ ಭವಿಷ್ಯವನ್ನು ಆಶಾದಾಯಕವಾಗಿ ರೂಪಿಸಲು ಇಟ್ಟಿರತಕ್ಕಂಥ ಬಜೆಟ್ಟು ಎಂದು ಅಂಶಿಸಿದ್ದೆ. ನಮ್ಮ ಅರ್ಥಿಕ ಮಂತ್ರಿಗಳು ಭಾಷಣ ಮಾಡುವಾಗ ನಮ್ಮ ರಾಜ್ಯದ ಭವಿಷ್ಯ ಈ ಬಜೆಟ್ಟಿನಿಂದ ಒಂದು ರೀತಿಯಲ್ಲಿ ಅಭಿವೃದ್ಧಿ ಹೊಂದುತ್ತದೆ ಎಂದು ತಿಳಿದುಕೊಂಡಿದ್ದೆ. ಆದರೆ ಈ ಬಜೆಟ್ಟನ್ನು ನೋಡುತ್ತಾ ನೋಡುತ್ತಾ, ಬರೀ ಟೊಳ್ಳಾಗಿ ಕಾಣುತ್ತಾ ಇದೆ. ಇದರಿಂದ ಒಂದು ಥಡಿಯ ವೇಸ್ಟ್ ಪೇಪರ್ ಸಿಗುವುದಕ್ಕೆ ಉಪಯೋಗಿಸ ಬಹುದೇ ಎನಿಸುತ್ತದೆ.

6.31 ಕೋಟಿ ರೂಪಾಯಿ ಚಿಲ್ಲರೆ ಖೋತಾ ಬಜೆಟ್ಟನ್ನು ಮಂಡಿಸಿದಾಗ, ಇದರೊಳಗೆ ಆದಾಯ-ಖರ್ಚನ್ನು ಲೆಕ್ಕ ಹಾಕುವಾಗ ಒಂದು ಅರಿಥಮಿಟಿಕಲ್ ಕ್ಯಾಲುಕ್ಲೇಷನ್ನಿನಲ್ಲಿ, ಒಂದು ಮ್ಯಾಥಮ್ಯಾಟಿಕಲ್ ಪ್ರಿಸಿಷನ್ ಆದರೂ ಇದೆಯೇ ಎಂದು ನೋಡಿದರೆ, ಅದೂ ಕೂಡ ಇಲ್ಲವೆಂದು ಬಹಳ ದುಃಖದಿಂದ ಹೇಳಬೇಕಾಗಿದೆ. ರೋಡ್ ಟ್ರಾನ್ಸ್‌ಪೋರ್ಟಿನಲ್ಲಿ ಕೇವಲ 25 ಲಕ್ಷ ರೂಪಾಯಿ ಆದಾಯ ಕಾಣುತ್ತಿತ್ತು; ಹೋದ ವರ್ಷಕ್ಕಿಂತ 45 ಲಕ್ಷ ರೂಪಾಯಿ ಕಡಿಮೆ ಬರುತ್ತದೆಂದು ಹೇಳಿದ್ದಾರೆ. ಒಟ್ಟು ಎಲ್ಲಾ ಅಂಕಿ ಅಂಶ ನೋಡಿದರೆ 70 ಲಕ್ಷ ರೂಪಾಯಿ ಆದಾಯ ಬರುತ್ತದೆ. ಅಪ್ಪರ್ ಹೌಸ್‌ನಲ್ಲಿ ಈ ತಪ್ಪನ್ನು ತೋರಿಸಿದ ಮೇಲೆ, ಟೋಟಲಿನಲ್ಲಿ 100 ಲಕ್ಷ ರೂಪಾಯಿ ತಪ್ಪು ಮಾಡಿದ್ದೇವೆ ಎಂದು ಒಪ್ಪಿಕೊಂಡು ಒಂದು ಎರ್ರ್ಯಾಟ ಹೊರಡಿಸಿದರು. ಅಧ್ಯಕ್ಷರೇ ಹೇಳಲಿ: 100 ಲಕ್ಷ ರೂಪಾಯಿ ಟೋಟಲ್ ರೆವಿನ್ಯೂ ಸೈಡಿನಲ್ಲಿ ವ್ಯತ್ಯಾಸವಾಗುವ ಪಕ್ಷದಲ್ಲಿ, 100 ಲಕ್ಷ ರೂಪಾಯಿ ಖೋತಾದಲ್ಲಿ ಸೇರಿಸಿತು ಅಲ್ಲವೇ? ಎರ್ರ್ಯಾಟದಲ್ಲಿ, ಇದರಿಂದ ಬಾಕಿ ಅಂಕಿ ಅಂಶಗಳು ಬದಲಾಗುವುದಿಲ್ಲ, ಇದು ಸರಿಯಾಗಿ ಇದೆ, 40 ಲಕ್ಷ ರೂಪಾಯಿ ನ್ಯಾಯವಾಗಿ ಬರುವ ಆದಾಯವನ್ನು ಬಿಟ್ಟು ತಪ್ಪಾಗಿತ್ತು ಎಂದು ಹೇಳಿದರು 100 ಲಕ್ಷ ರೂಪಾಯಿ ಟೋಟಲಿನಲ್ಲಿ ಕಮ್ಮಿ ಮಾಡಿದ್ದರಿಂದ, ಲುಕ್ಸಾನಿನಲ್ಲಿ ಜಾಸ್ತಿ ತೋರಿಸಿದಂತಾಗಲಿಲ್ಲವೇ? ಇಷ್ಟೊಂದು ಸಿಬ್ಬಂದಿ, ಸೆಕ್ರೆಟೇರಿಯಟ್, ಇಬ್ಬರು ಫೈನಾನ್ಸ್ ಮಿನಿಸ್ಟರುಗಳನ್ನು ಇಟ್ಟುಕೊಂಡು, ನೀವು ಇಂಥ ಅವಹೇಳನ ಬಜೆಟ್ಟನ್ನು ನಮ್ಮ ಮುಂದೆ ಇಟ್ಟಿರುವುದಕ್ಕಿಂತ ಅವಮಾನಕರವಾದ ಸಂಗತಿ ಇಲ್ಲ.

ಯಾವ ದೇಶದಲ್ಲೂ ಬಜೆಟ್ಟಿನ ಇಷ್ಟು ವ್ಯತ್ಯಾಸವಿರಲಾರದು. ಆದರೆ ಅವರೆಲ್ಲ ಆದಾಯ ಮತ್ತು ಖರ್ಚುಗಳಲ್ಲಿ ಸ್ವಲ್ಪ ಕಡಮೆ ತೋರಿಸಿದರೂ ತೋರಿಸಬಹುದು. ಆದರೆ ಹೀಗೆ ಹೆಚ್ಚು ಕಡಮೆ ಮಾತ್ರ ಇರುವುದಿಲ್ಲ. ಆದುದರಿಂದ ಗುಣಿಸುವುದು, ಕೂಡುವುದರಲ್ಲೇ ವ್ಯತ್ಯಾಸ ವಿರುವಾಗ 431 ಲಕ್ಷ, 531 ಲಕ್ಷ, 631 ಲಕ್ಷ ಖೋತಾ ಆಗಿದೆ ಎಂತ ಹೇಳುತ್ತಿರುವುದರಲ್ಲಿ ಅರ್ಥವಿಲ್ಲ ಎಂದು ಹೇಳುತ್ತೇನೆ. ಆದರೆ ಈ ಹಿಂದೆಯೇ ಮಾತನಾಡಿದಂಥ ಕಾಂಗ್ರೆಸ್ ಪಾರ್ಟಿಯ ಸದಸ್ಯರಾದ ಶ್ರೀ ದೇವರಾಜ ಅರಸ್ ಮತ್ತು ಶ್ರೀ ಹುಚ್ಚಮಾಸ್ತಿಗೌಡರು ವಿರೋಧಪಕ್ಷದ ಸದಸ್ಯರು ಅವರಿಗೆ ಬೇಕಾದಂಥ ಕೆಲವು ವಿಷಯಗಳನ್ನು ಮಾತ್ರ ತೆಗೆದುಕೊಳ್ಳುತ್ತಾರೆ. ನಮಗೆ ಅನುಕೂಲವೆಂದು ಕಂಡುಬಂದಾಗ್ಯೂ ಕೆಲವು ಬಾಬುಗಳನ್ನು ಹಾಗೇ ಕೈಬಿಟ್ಟು ಆಡಳಿತಪಕ್ಷವನ್ನು ಟೀಕೆಮಾಡುತ್ತಿದ್ದೇವೆ ಎಂತ ಹೇಳಿದರು. ಅವರು ಇನ್ನೂ ಮುಂದೆ ಹೋಗಿ ಏನು ಹೇಳಿರುತ್ತಾ

(ಶ್ರೀ ಸಿ. ಕೆ. ರಾಜಯ್ಯ ಸೆಟ್ಟಿ)

ಸಮೃದ್ಧಿಗಳೂ ಇರುತ್ತವೆಂದು ಹೇಳುತ್ತಿದ್ದರು. ಆದರೆ ಈ ದಿವಸ ಆ "ರಾಜಾ ಕಾಲಸ್ಯ ಕಾರಣಂ" ಎಂದು ಹೇಳತಕ್ಕ ಕಾಲ ಹೋಗಿ "ಪ್ರಜಾ ಕಾಲಸ್ಯ ಕಾರಣಂ" ಎಂದು ಹೇಳುವ ಕಾಲ ಈಗ ಬಂದಿದೆ. ಆದರೆ ಈ ಕಾಲ ಪೂರಾ ದುಃಖಕರವಾದ ಕಾಲವಾಗಿದೆ. ನ್ಯಾಯವಾಗಿ ಈ ದಿವಸ ದೇಶದಲ್ಲಿರತಕ್ಕ ಪ್ರತಿಯೊಬ್ಬ ವ್ಯಕ್ತಿಗೂ ಅನುಕೂಲ-ಸೌಕರ್ಯಗಳು ಲಭಿಸಬೇಕಾದ್ದು ಯುಕ್ತವಾಗಿದ್ದರೂ ಕಾಲ ಹಾಗೆ ಇಲ್ಲ. ಈ ದಿವಸ ಈ ಅನುಕೂಲತೆಗಳೆಲ್ಲ ಕೆಲವು ಕಾಂಗ್ರೆಸ್ ಮುಖಂಡರುಗಳಿಗೆ ಮನಾಫಲ ಆಗಿರುತ್ತದೆ. ಇದೇ ಕಾಂಗ್ರೆಸ್ಸಿನವರು ಈ ದಿವಸ ದೇಶಕ್ಕೆ ಮಾಡುತ್ತಿರುವ ಸೇವೆ ಮತ್ತು ಉಪಕಾರ! ಈ ವಿಚಾರದಲ್ಲಿ ಒಂದಲ್ಲ-ಎರಡಲ್ಲ, ನೂರಾರು ಉದಾಹರಣೆಗಳನ್ನು ಕೊಡಬಲ್ಲೆ. ಆದರೆ ಈಗ ಸಭೆಯ ಗಮನವನ್ನು ಸೆಳೆಯಲು ಒಂದೆರಡು ವಿಷಯಗಳನ್ನು ತಿಳಿಸಲಿಚ್ಛಿಸುತ್ತೇನೆ. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಒಂದು ಕೋ-ಆಪರೇಟಿವ್ ಫಾರಂ ಇದೆ, ಅದಕ್ಕೆ ಎಂಟು ಜನ ಮೆಂಬರುಗಳಿದ್ದಾರೆ. ಆ ಎಂಟು ಜನ ಮೆಂಬರುಗಳು ಯಾರ್‍ಯಾರೆಂದರೆ ಅಣ್ಣ, ತಮ್ಮ, ಭಾವ, ಭಾಮೈದುನ ಮತ್ತು ಆ ಅಣ್ಣ, ತಮ್ಮ, ಭಾವ, ಭಾಮೈದುನನ ನಾಲ್ಕು ಜನ ಹೆಂಡತಿಯರು ಹೀಗೆ ಎಂಟು ಜನ ಸದಸ್ಯರಿರುತ್ತಾರೆ. ಈ ಸಂಘದವರು ಸರ್ಕಾರದಿಂದ ಸಾಲವಾಗಿ ಹಣವನ್ನು ಬೇರೆ ಪಡೆದು ಅಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಇವರಿಗೆ ಅಲ್ಲಿ ನೂರಾರು ಎಕ್ರೆ ಜಮೀನನ್ನು ಬೇರೆ ಕೊಟ್ಟಿದ್ದಾರೆ. ಅಲ್ಲಿದ್ದ ಕಾಡೆಲ್ಲ ಹಾಳಾಗಿ ಹೋಗಿದೆ. ಮತ್ತೆ ಇದೇ ಸಂಸ್ಥೆಯವರಿಗೆ ಜಮೀನು ಆ ಬಾಬಿಗಾಗಿ 12 ಸಾವಿರ ರೂಪಾಯಿಗಳ ಸಾಲವನ್ನೂ ಕೊಟ್ಟಿದ್ದಾರೆ. ಆದರೆ ಈ ದಿವಸ ಅಲ್ಲಿ ಆ ಫಾರವೂ ಇಲ್ಲ, ಆ ಸದಸ್ಯರೂ ಇಲ್ಲ.

ಹೀಗೆ ಅರಸೀಕೆರೆಯಲ್ಲಿ ಕಾಯರ್ ಇಂಡಸ್ಟ್ರಿ ನಡೆಸುತ್ತಿದ್ದ ಒಬ್ಬ ಸಾಹುಕಾರ ಇದ್ದ. ಆತನಿಗೆ ಆ ಕೈಗಾರಿಕೆ ಸೇರಿತ್ತು, ಆತ 15-20 ಸಾವಿರ ರೂಪಾಯಿಗಳ ಸಾಲ ತೆಗೆದುಕೊಂಡಿದ್ದನು.

ಶ್ರೀ ಡಿ. ದೇವರಾಜ ಅರಸ್.—ತಾವು ಆ ಕೋ ಆಪರೇಟೀವ್ ಫಾರ್ಮಿಂಗ್ ಹೇಳಿದ್ದು ಯಾವ ಜಾಗದಲ್ಲಿದೆ ?

ಶ್ರೀ ಸಿ. ಕೆ. ರಾಜಯ್ಯ ಸೆಟ್ಟಿ.—ಆಗಲೇ ಹೇಳಿದ್ದೇನೆ. ಹಾಗೆ ಸಾಲ ತೆಗೆದುಕೊಂಡ ನಂತರ ಆತ ಹಣವನ್ನು ವಾಪಸ್ಸು ಕೊಡಲೂ ಆಗಲಿಲ್ಲ. ಅದಕ್ಕಾಗಿ ಆತನ ಮೇಲೆ ದಾವಾ-ಡಿಕ್ರಿ ಎಲ್ಲಾ ಆಯಿತು. ಈಗ ಆ ಇಂಡಸ್ಟ್ರಿಯೂ ನಿಂತುಹೋಗಿದೆ. ಆತ ಈ ಇಂಡಸ್ಟ್ರಿಯನ್ನು ಯಾರಿಗಾದರೂ ಮಾರಾಟ ಮಾಡಿಸಿಬಿಡಿ, ನಾನು ಮಾರಿಬಿಡುತ್ತೇನೆ, 10-12 ಸಾವಿರಕ್ಕೆ ಯಾರಿಗಾದರೂ ಕೊಟ್ಟುಬಿಡುತ್ತೇನೆ ಎಂತ ಹೇಳುತ್ತಿದ್ದ. ಆ ವೇಳೆಗೆ ಸರಿಯಾಗಿ ಅಲ್ಲಿ ಕೆಲವು ರಾಜಕಾರಣಿಗಳು ಒಂದು ಸೊಸೈಟಿಯನ್ನು ಪ್ರಾರಂಭಮಾಡಿದರು. ಅನಂತರ ಆ ರಾಜಕಾರಣಿಗಳು ಆ ಕಾಯರ್ ಇಂಡಸ್ಟ್ರಿಯನ್ನು ಸರ್ಕಾರ ಕೊಂಡುಕೊಳ್ಳಬೇಕು, ಅದನ್ನು ನಾವು ಈ ಸೊಸೈಟಿ ಮೂಲಕ ನಡೆಸುತ್ತೇವೆಂತ ಒಂದು ತೀರ್ಮಾನ ಮಾಡಿದರು. ಅವರು 41 ಸಾವಿರ ರೂಪಾಯಿಗಳನ್ನು ಸರ್ಕಾರದಿಂದ ಪಡೆಯಲು ಡೆಪುಟೇಷನ್ ಹೊದರು, ಆ ಹಣವನ್ನು ಪಡೆದರು. ಆದರೆ ಆ ಹಣದಲ್ಲಿ 32 ಸಾವಿರ ರೂಪಾಯಿಗಳನ್ನು ಮಾತ್ರ Working Capital ಎಂತ ಇನ್‌ವೆಸ್ಟ್‌ಮಾಡಿ ಆ ಮನುಷ್ಯನಿಗೆ 9 ಸಾವಿರ ಉಳಿಯುವಂತೆ ಮಾಡಿದರು. ಆದರೆ ಆತನಿಗೆ 21 ಸಾವಿರ ರೂಪಾಯಿಗಳು ಬೇಕಾಗಿತ್ತು. ಅದಕ್ಕಾಗಿ ಮತ್ತೆ ಆ Working Capital ನ್ನು 12½ ಸಾವಿರಕ್ಕೆ ಇಳಿಸಿದರು. ಮತ್ತೆ ಆ ಇಂಡಸ್ಟ್ರಿಯನ್ನು 50 ಸಾವಿರಕ್ಕೆ ಮಾರಾಟಮಾಡಿದರು. ಆಗ ಇವರಿಗೆ ಇನ್ನೂ ಒಂಬತ್ತು ಸಾವಿರ ಉಳಿಯಿತು. ಆ ಒಂಬತ್ತು ಸಾವಿರರೂಪಾಯಿಗಳನ್ನು ಈ ರಾಜಕಾರಣಿಗಳು ಹಂಚಿಕೊಂಡರು. ಕಾಂಗ್ರೆಸ್ ಸರ್ಕಾರ ಹೀಗೆಲ್ಲ ಅವರ ಪಾರ್ಟಿ ಜನರಿಗೆ ಉದ್ಧಾರ ಮಾಡುತ್ತಿದ್ದಾರೆ. ಇದೇ ರೀತಿ ಆ ಚಿಕ್ಕನಾಯ್ಕನ ಹಳ್ಳಿಯಲ್ಲೂ ಈ ಪಾರ್ಟಿಗೆ ಸೇರಿದ ಜನರು ಕೆಲವರಿದ್ದಾರೆ. ಯಾರಾದರೂ ನೀವು ಏನು ಕೆಲಸದಲ್ಲಿದ್ದೀರಿ ಎಂತ ಅವರನ್ನು ಕೇಳಿದರೆ ಕೆಲವರು

ರೆಂದರೆ ವಿರೋಧಪಕ್ಷದ ಸದಸ್ಯರು ಬಡ್ಜೆಟ್‌ಪುಸ್ತಕವನ್ನು ತೆಗೆದು ಓದಿದ್ದರೆ ತಾನೆ ಅವರಿಗೆ ಈ ದೇಶಾಭ್ಯುದಯ ಬಾಬುಗಳು ಅವರ ಕಣ್ಣಿಗೆ ಬೀಳುತ್ತಿದ್ದುದು, ಹಾಗೆ ಪುಸ್ತಕವನ್ನು ತೆರೆಯದೇ ಇರುವುದರಿಂದಲೇ ನಾವು ಈ ದಿವಸ ಬಡ್ಜೆಟ್ಟಿನಲ್ಲಿರತಕ್ಕ ಅನುಕೂಲವಾದ ವಿಚಾರ ಗಳನ್ನೆಲ್ಲಾ ಕೈಬಿಡುತ್ತಿದ್ದೇವೆಂದು ಹೇಳಿದರು. ಹಾಗೆ ಆಡಳಿತ ಪಕ್ಷದವರು ಬಡ್ಜೆಟ್‌ಪುಸ್ತಕವನ್ನು ತೆಗೆದು ಓದಿದ್ದಪಕ್ಷಕ್ಕೆ ಏತಕ್ಕೆ ಅವರು ಈ ಲೋಪದೋಷಗಳನ್ನೆಲ್ಲ ಹೇಳಬಾರದಾಗಿತ್ತು ! ಈ ಒಂದು ಅಂಶವೇಸಾಕು ಯಾವ ಪಕ್ಷದವರು ಬಡ್ಜೆಟ್ಟನ್ನು ಓದಿದ್ದಾರೆ, ಯಾವ ಪಕ್ಷದವರು ಓದಿಲ್ಲ ಎಂಬುದನ್ನು ಎತ್ತಿ ತೋರಿಸುತ್ತದೆ. ಒಟ್ಟಿನಲ್ಲಿ ಆಡಳಿತ ಪಕ್ಷದವರ ವರ್ತನೆ ಹೇಗಿದೆಯೆಂದರೆ "ಮಾರಿ ಕಣ್ಣು ಹೋತನ ಮೇಲೆ" ಎಂದು ಹೇಳಿದ ಹಾಗಿದೆ. ಕಾರಣ ವಿರೋಧಪಕ್ಷದವರ ಸಂಖ್ಯೆ ಕಡಮೆ ಇದೆ, ಆಡಳಿತಪಕ್ಷದವರ ಸಂಖ್ಯೆ ಜಾಸ್ತಿ ಇದೆ. ಈ ದಿವಸ ನಮ್ಮ ಸರ್ಕಾರದವರು ನಿಜವಾಗಿಯೂ ಕೇಂದ್ರ ಸರ್ಕಾರದಿಂದ ಬರತಕ್ಕ ಸಬ್‌ಸಿಡಿ ಹಣವೇನಿದೆ ಅದನ್ನಿನ್ನೂ ಜಾಸ್ತಿ ಕೇಳಬೇಕಾಗಿದೆ. ನಮ್ಮ ಸರ್ಕಾರದವರು ನಮ್ಮ ರಾಜ್ಯದ ಪ್ರಜೆಗಳಿಗೆ ಹೆಚ್ಚಿನ ಅನುಕೂಲತೆ ಗಳನ್ನು ಕಲ್ಪಿಸಲು ಸತತವಾಗಿ ಶ್ರಮಿಸುತ್ತಿದ್ದೇವೆಂತ ನಮ್ಮ ಮಂತ್ರಿಗಳು ಬಾಯಿನಲ್ಲಿ ಉದ್ದುದ್ದವಾದ ಭಾಷಣಗಳನ್ನು ಮಾಡಿದ್ದೂ ಮಾಡಿದ್ದೇ. ಹಾಗೆ ಇವರಿಗೆ ನಮ್ಮ ಜನರ ಯೋಗಕ್ಷೇಮದ ವಿಚಾರದಲ್ಲಿ-ನಮ್ಮ ದೇಶಾಭಿವೃದ್ಧಿ ವಿಚಾರದಲ್ಲಿ, ಅಷ್ಟು ಅಭಿಮಾನವಿದ್ದಿದ್ದರೆ ಇವರು ನಮಗೆ ಕೇಂದ್ರದಿಂದ ಬರುತ್ತಿದ್ದ ಹಣವನ್ನೆಲ್ಲ ಏಕೆ ಸರಿಯಾಗಿ ಖರ್ಚುಮಾಡಲಿಲ್ಲ ಎಂದು ಕೇಳುತ್ತೇನೆ ? ಇದಕ್ಕೆ ಸರ್ಕಾರದವರೇನು ಉತ್ತರ ಹೇಳುತ್ತಾರೆ ? ಈ ಹಿಂದೆ ಕೇಂದ್ರ ಸರ್ಕಾರ ದವರು ನಮ್ಮ ರಾಜ್ಯಕ್ಕೆ 181 ಲಕ್ಷ ರೂಪಾಯಿಗಳನ್ನು ವಿದ್ಯಾಭಿವೃದ್ಧಿಗಾಗಿ ಸಬ್‌ವೆನ್ಷನ್ ಕೊಟ್ಟಿ ದ್ದಾರೆ. ಆದರೆ ಈ ವರ್ಷ ಏತಕ್ಕೆ ನಮ್ಮ ಸರ್ಕಾರ ಅಷ್ಟೇ ಹಣವನ್ನು ಈ ಬಾಬಿನಲ್ಲಿ ಪಡೆದು ಕೊಳ್ಳಲಿಲ್ಲ ? ಇದಕ್ಕೆ ಸರ್ಕಾರದವರೇನು ಹೇಳುತ್ತಾರೆಂದರೆ ಇವರು ಕೇಂದ್ರಸರ್ಕಾರದವರು ಸೂಚಿಸಿದ್ದ ಕೆಲವು ಏರ್ಪಾಡುಗಳನ್ನು ಮಾಡಲಿಲ್ಲವಾದ್ದರಿಂದ ಈ ಸಾರ್ತಿ ಅಷ್ಟು ಹಣ ಬರಲಿಲ್ಲ ಎಂತ ಹೇಳಿದ್ದಾರೆ.

ಶ್ರೀ ಟಿ. ಸುಬ್ರಹ್ಮಣ್ಯಂ.—ಆ ಹಣ, ಆ ಗ್ರಾಂಟ್, ಲ್ಯಾಪ್ಸಾಗುವುದಿಲ್ಲ.

ಶ್ರೀ ಸಿ. ಕೆ. ರಾಜಯ್ಯ ಸೆಟ್ಟಿ.—ಐದು ವರ್ಷಗಳಿಗೊಮ್ಮೆ ಮಾಡೇ ಮಾಡುತ್ತಾರೆ. ಹೀಗೇ ಈ ಸ್ಲಂ-ಕ್ಲಿಯರೆನ್ಸ್‌ಗಾಗಿ 81 ಲಕ್ಷ ರೂಪಾಯಿಗಳ ಗ್ರಾಂಟು ಕೇಂದ್ರ ಸರ್ಕಾರದಿಂದ ಬರುತ್ತಿತ್ತು, ಈ ಹಣವನ್ನು ಸಹ ನಮ್ಮ ಸರ್ಕಾರ ಖರ್ಚುಮಾಡಲು ಅತ್ಯಗತ್ಯವಾದ ಮಾರ್ಗ ಗಳಿದ್ದರೂ ಮಾಡಲಿಲ್ಲ. ಇದರಿಂದ ಈ ವರ್ಷ ಈ ಗ್ರಾಂಟೇ ನಮಗೆ ಕೇಂದ್ರದಿಂದ ಬರಲಿಲ್ಲ. ಹೀಗೆ ಯಾವ ಬಾಬನ್ನು ತೆಗೆದುಕೊಂಡರೂ ಇವರು ಅಲ್ಲಿಂದ ಬರತಕ್ಕ ಗ್ರಾಂಟನ್ನು ವಿನಿಯೋಗ ಮಾಡುವುದಕ್ಕೆ ಅಶಕ್ತರಾಗಿರುವಾಗ ಇವರು ಕೇಂದ್ರದಿಂದ ನಮಗೆ ಹೆಚ್ಚು ಹಣ ಕೊಡಿ ಎಂತ ಕೇಳುವುದಕ್ಕೆ ಇವರಿಗೆ ಮುಖವಾದರೂ ಎಲ್ಲಿದೆ ? ಇವರು ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರದಿಂದ ಹೆಚ್ಚಿನ ಹಣ ಪಡೆಯುತ್ತಿದ್ದೇವೆಂದು ಹೇಳಿಕೊಳ್ಳುತ್ತಿದ್ದಾರಲ್ಲ! ಹಾಗಿದ್ದರೆ ಇವರು ಆ ಸಿರಿಕಲ್‌ಚರಲ್ ಬಾಬಿನಲ್ಲಿ ಅವರು ಕೊಟ್ಟಿದ್ದ ಗ್ರಾಂಟಿನಲ್ಲೇ ಏತಕ್ಕೆ ಒಂದೂವರೆ ಕೋಟಿ ರೂಪಾಯಿಗಳನ್ನು ಖರ್ಚುಮಾಡದೆ ಹಾಗೇ ಲ್ಯಾಪ್ಸಾಗುವುದಕ್ಕೆ ಬಿಟ್ಟರು ? ಸ್ವಾಮಿ, ನಾವು ಹೀಗೆ ಯಾವುದನ್ನೇ ತೆಗೆದುಕೊಳ್ಳಲಿ, ನಮಗೆ ಯಾವ ಬಾಬಿನಲ್ಲಿ ಕೇಂದ್ರದಿಂದ ನಾವೆಷ್ಟು ಹಣ ಪಡೆಯಬೇಕೋ, ಎಷ್ಟನ್ನು ಪಡೆಯಲು ನಮಗೆ ಅವಕಾಶವಿದೆಯೋ ಅಷ್ಟನ್ನು ನಾವು ಈ ದಿವಸ ಪಡೆಯುತ್ತಿಲ್ಲ. ಇದು ನಿಜವಾಗಿಯೂ ನಮ್ಮ ಮೈಸೂರು ದೇಶದ ದುರಾದೃಷ್ಟವೆಂದು ನಾನಾದರೂ ಹೇಳಲೇಬೇಕು. ಪೂರ್ವಕಾಲದಲ್ಲಿ ರಾಜಮಹಾರಾಜರ ಆಡಳಿತವಿದ್ದಾಗ "ರಾಜಾ ಕಾಲಸ್ಯ ಕಾರಣಂ" ಎಂತ ಹೇಳುತ್ತಿದ್ದರು, ಆದರೆ ಆಗಿನ ಕಾಲದಲ್ಲಿ ರಾಜ್ಯದ ಆಡಳಿತ ಮತ್ತು ರಾಜ ಇವರಿಬ್ಬರೂ ಸರಿಯಾಗಿದ್ದರೆ ಅಂಥ ರಾಜ್ಯದಲ್ಲಿ ಎಲ್ಲವೂ ಸರಿಯಾಗಿರುತ್ತೆ, ಎಲ್ಲ

I am the husband of my wife ಎಂತ ಹೇಳುತ್ತಾರೆ, ಇನ್ನು ಕೆಲವರಿಗೆ ನೀವೇನು ಕೆಲಸದಲ್ಲಿದ್ದೀರಿ ಎಂದರೆ I am the President of Mandal Congress ಎಂದು ಹೇಳಿಕೊಳ್ಳುತ್ತಿದ್ದಾರೆ. ಇನ್ನು ಕೆಲವರಿಗೆ ನೀವೇನು ಕೆಲಸದಲ್ಲಿದ್ದೀರಿ ಎಂತ ಕೇಳಿದರೆ I am the Hon : Secretary of some Co-operative Society ಎಂತ ಹೇಳಿಕೊಳ್ಳುತ್ತಿದ್ದಾರೆ. ಅಂತೂ ಒಟ್ಟಿನಲ್ಲಿ ಈ ಗುಂಪಿನ ಜನಗಳು ಯಾರಿದ್ದಾರೋ ಅವರಿಗೊಬ್ಬರಿಗೂ ಯಾವ ಸ್ವಂತ ಉದ್ಯೋಗವೂ ಇರುವುದಿಲ್ಲ. Full politicians *plus* Social Congress workers !

ಇನ್ನೊಂದು ಕಡೆ ಇದೇ ರೀತಿ ಇನ್ನೊಬ್ಬ ಕಾಂಗ್ರೆಸ್ ಪಾರ್ಟಿಯಲ್ಲಿರತಕ್ಕ ಮನುಷ್ಯನಿಗೆ ಮೂರೂವರೆ ಸಾವಿರ ರೂಪಾಯಿಗಳ ಬೆಲೆಯಾಗತಕ್ಕ ಲ್ಯಾಂಡನ್ನು ಒಂದು ಇಂಜಿನಿಯರಿಂಗ್ ಕೈಗಾರಿಕೆಗಾಗಿ R. I. C. S. ಮೂಲಕ ಸರ್ಕಾರದವರು ತೆಗೆದುಕೊಂಡು ಅತನಿಗೆ ಕೊಟ್ಟರು. ಆದರೆ ಕೆಲವೇ ದಿನಗಳಲ್ಲಿ ಆತನ ಮನೆ ಹರಾಜಿಗೆ ಬಂತು. ಅಂಥ ಒಬ್ಬ ದೊಡ್ಡ ಕೈಗಾರಸ್ಥನಿಗೆ ಸರ್ಕಾರದವರು ಈಗ ಮತ್ತೆ ರಾಜಾಜಿನಗರದಲ್ಲಿ 13-14 ಸಾವಿರ ರೂಪಾಯಿಗಳ ಬೆಲೆಬಾಳತಕ್ಕ ಸೈಟೊಂದನ್ನು ಕನ್ಸೆಷನ್ ರೇಟಿನಲ್ಲಿ ಕೊಡಿಸಿದ್ದಾರೆ, ರೆಡ್‌ಕ್ರಾಸ್ ಸೊಸೈಟಿಯವರು ಗಣಿ ಪ್ರದೇಶದಲ್ಲಿರತಕ್ಕ ಬಡ ಮಕ್ಕಳಿಗೆ ಹಾಲಿನಪುಡಿಯನ್ನು ಹಂಚಬೇಕೆಂದು ಇಲ್ಲಿ ಒಂದು ಕೇಂದ್ರವನ್ನು ತೆರೆಯಲಾಯಿತು. ಆ ಕೇಂದ್ರಕ್ಕೆ ಆ ರೆಡ್‌ಕ್ರಾಸ್ ಸೊಸೈಟಿಯವರು 11,082 ಪೌಂಡು ಹಾಲಿನ ಪುಡಿಯನ್ನು ಕಳುಹಿಸಿಕೊಟ್ಟರು. ಆ ಪೈಕಿ ಕೇವಲ ಮೂರು ಸಾವಿರ ಪೌಂಡು ಹಾಲಿನ ಪುಡಿಯನ್ನು ಅಲ್ಲಲ್ಲೇ ಕೆಲವು ಮಕ್ಕಳಿಗೆ ಹಂಚಿ ಇನ್ನುಳಿದ ಪುಡಿಯನ್ನು ಮಾರಿ ಬಂದ ಹಣವನ್ನು ಆ 13 ಸಾವಿರದ ಸೈಟಿಗೆ ಕೊಟ್ಟರು, ಆ ಹಣ ಅಲ್ಲಿಗೆ ಜಮಾ ಆಯಿತು. ಸರ್ಕಾರದವರು ಯಾವ ಒಬ್ಬ ಮನುಷ್ಯನಿಗಾಗಲಿ ಏನಾದರೂ ಒಂದು ಸಹಾಯ ನೀಡಬೇಕಾಗಿದ್ದರೆ-ಆತನ ಅರ್ಹತೆ ಏನು, ಆತನ ಅಂತಸ್ತೇನು, ಎಂಬುದನ್ನೆಲ್ಲಾ ವಿಮರ್ಶೆಮಾಡಿ ನೋಡಬೇಡವೆ ? ಸರ್ಕಾರದವರಿಗೆ ಅವರ ಪಕ್ಷದ ಜನಗಳಾದರೆ ಆಯಿತು, ಅವರಿಗೆ ಯಾವ ಅರ್ಹತೆಯಿಲ್ಲದಿದ್ದರೂ ಸರ್ಕಾರ ಅಂಥವರಿಗೆ ಎಲ್ಲ ಸೌಕರ್ಯಗಳನ್ನೂ ನೀಡುತ್ತದೆ.

5-00 P.M.

ಅಮೇರಿಕಾ ದೇಶದಲ್ಲಿರುವ ಹಾಗೆ ನಮ್ಮ ದೇಶದಲ್ಲಿ ಪರಿಸ್ಥಿತಿ ಇಲ್ಲ. ಅಲ್ಲಿಯ ಪದ್ಧತಿಯನ್ನು ನಮ್ಮ ದೇಶದಲ್ಲಿ ಏಕೆ ಅನುಸರಿಸಬಾರದು ! ಆ ಬುದ್ಧಿ ನಮ್ಮ ಮಂತ್ರಿಗಳಿಗೆ ಏಕೆ ಬಂದಿಲ್ಲ ಎಂದು ಕೇಳುತ್ತೇನೆ. ಇನ್ನು ಇನ್ನೊಂದು ವಿಚಾರ ಹೇಳಬೇಕಾಗಿದೆ. ಚಿಕ್ಕನಾಯಕನಹಳ್ಳಿಯಲ್ಲಿ 1947ನೇ ಇಸವಿಯಲ್ಲಿ ಒಂದು ಜಮೀನು ಅಕ್ವೈರ್ ಮಾಡಲಾಯಿತು. ಮುಂದೆ ಈ ಜಮೀನು ಅಕ್ವೈರ್ ಮಾಡುವ ವಿಷಯದಲ್ಲಿ ಮಂತ್ರಿಗಳು ಪ್ರವೇಶ ಮಾಡಿ ತಡೆಹಿಡಿದಿದ್ದಾರೆ. ಪ್ರಜೆಗಳ ಹಿತಕ್ಕಿಂತ ಇವರಿಗೆ ಅಧಿಕಾರದ ದರ್ಪ ಹೆಚ್ಚಾಗಿದೆ. ಆ ನಂತರ ಅಕ್ವೈರ್ ಮಾಡಬಾರದು ಎಂದು ಆರ್ಡರ್ ಬಂದಿದೆ. ಈ ವಿಷಯ ಮಂತ್ರಿಗಳಿಗೆ ತಿಳಿಸಬೇಕೆಂದಿದ್ದೆ. ತಿಪಟೂರಿನಿಂದ ಬೆಂಗಳೂರಿಗೆ ಮುಖ್ಯಮಂತ್ರಿಗಳು ನಾನು ಮತ್ತು ಅವರ ಕಾರಿನಲ್ಲಿಯೇ ಬರುತ್ತಿದ್ದೆವು. ಅವನ ಜಮೀನು ಅಕ್ವೈರ್ ಮಾಡುವುದು ಒಳ್ಳೆಯದಲ್ಲ ಎಂದು ಅಗ್ಗ ಮಂತ್ರಿಗಳು ನನಗೆ ಹೇಳಿದರು. ಈ ಮಾತು ಸುಳ್ಳು ಎಂದು ಅವರು ಹೇಳಲಿ, ನಾನು ರಾಜಿನಾಮೆ ಕೊಡುವುದಕ್ಕೆ ತಯಾರಾಗಿದ್ದೇನೆ. ಇದು ಸತ್ಯವಾದರೆ ಅವರು ರಾಜಿನಾಮೆ ಕೊಡಬೇಕಾಗುತ್ತದೆ.

ಶ್ರೀ ಟಿ. ಸುಬ್ರಹ್ಮಣ್ಯ.—ಸ್ವಾಮಿ,

Sri C. K RAJAIAH SHETTY.—I do not yield.

Sri T. SUBRAMANYA.—It is not a fact. He is uttering a lie.

Sri C. K. RAJAIAH SHETTY.—I am telling the truth.

Mr. CHAIRMAN.—When an Hon'ble Member throws a challenge, he must give an opportunity to the other side to meet the challenge.

ಶ್ರೀ ಟಿ. ಸುಬ್ರಹ್ಮಣ್ಯ.—ಅಂದು ನಾನು ಚೀಫ್ ಮಿನಿಷ್ಟರು ಮತ್ತು ಅವರು—ಹೀಗೆ ಮೂರು ಜನ ಕಾರಿನಲ್ಲಿ ಬರುತ್ತಿದ್ದೆವು. ಅಂದಿನ ಮೀಟಿಂಗಿಗೆ ಅವರೇ ಪ್ರೆಸಿಡೆಂಟರಾಗಿದ್ದರೆಂದು ಕಾಣುತ್ತದೆ. ಯಾವುದೇ ಒಂದು ಸೋಷಿಯಲ್ ಗ್ಯಾದರಿಂಗಿಗೆ ಹೋಗಿದ್ದಾಗ್ಗೆ ಇವರು ಬಂದದ್ದು ನನಗೆ ಜ್ಞಾಪಕವಿಲ್ಲ. ಈ ವಿಚಾರದಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿ ಈ ಅಸೆಂಬ್ಲಿಯಲ್ಲಿ ಅಪಪ್ರಚಾರ ಮಾಡಲು ಪ್ರಯತ್ನ ಮಾಡಿದ್ದಾರೆ. ನಾನು ಹೇಳಿದ್ದು ಇಷ್ಟೇ. I am interested in the man. I know him for a long time. ಅವರು ಸತ್ಯವಾದದ್ದನ್ನು ಹೇಳದೆ ಸುಳ್ಳು ಹೇಳಿ ಪುನಃಪುನಃ ಅಪಪ್ರಚಾರ ಮಾಡಲು ಪ್ರಯತ್ನ ಪಡುತ್ತಿದ್ದಾರೆ ಅವರು ಹೇಳುವುದು ಅಸತ್ಯವಾಗಿದೆ.

Sri C. K. RAJAIAH SHETTY.—You have admitted 'I know him from a long time'.

Sri T. SUBRAMANYA.—I am interested in the man even to-day. That is not what he said. You please have it read. He must accept the challenge. I have only said 'I am interested in the man'. That is why I put the interpellation in the Legislature, not now, but in 1949. This gentleman being a Member of the Legislative Assembly utters a lie.

Sri C. K. RAJAIAH SHETTY.—He has said that he is interested in the man. Being an young man, I can remember it better.

Sri T. SUBRAMANYA.—He says he is young and that I am old.

ಸತ್ಯವಾದದನ್ನು ಹೇಳದೆ ಸುಳ್ಳು ಹೇಳುವುದಕ್ಕೆ ಅವರ ನಾಲಗೆ ಒಣಗಿ ಹೋಗುತ್ತಿದೆ. ನಾಲಗೆ ನಡುಗುತ್ತಿದೆ.

Sri C. J. MUCKANNAPPA.—How can the Chair tolerate such things, Sir?

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಅವರು ನನಗೆ ಹೇಳಿದ್ದನ್ನು ನಾನು ಈಗ ಹೇಳಿದೆ.

Mr. CHAIRMAN.—The Chair cannot enlighten or interfere in this unless it is a point of order. Sri Rajaiah Shetty will resume his speech.

Sri KADIDAL MANJAPPA.—May I submit that we can carry on the deliberations without bitterness ?

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಈ ಕೇಸ್‌ಗೋಸ್ಕರ $4\frac{1}{2}$ ಸಾವಿರ ರೂಪಾಯಿ ಖರ್ಚಾಗಿದೆ. ಐದು ಎಕರೆ ಜಮೀನಿನಲ್ಲಿ ಮನೆ ಕಟ್ಟಿಸಿಕೊಂಡು ಬಿಟ್ಟಿದ್ದಾರೆ. ನಾನು ತಪ್ಪು ಹೇಳುತ್ತಿಲ್ಲ. ಅವರಿಗೆ ಅಧಿಕಾರವಿದೆ. ಇಂಥ ಸಂದರ್ಭಗಳಲ್ಲಿ ಕರ್ತವ್ಯ ಲೋಪ ಮಾಡಿದ್ದಾರೆ ಎಂದು ಇಷ್ಟು ಹೇಳುತ್ತೇನೆ.

ಇನ್ನು ಅಂಕಿಅಂಶಗಳು ಬಹಳ ಪ್ರಗತಿದಾಯಕವಾಗಿವೆ ಎಂದು ಇವರು ಹೇಳಿದರು. ಏನು ಪ್ರಗತಿ ಆಗಿದೆ ? ಮೊದಲನೇ ಯೋಜನೆಯಲ್ಲಿ ನೂರು ಲಕ್ಷ ರೂಪಾಯಿ ಒಟ್ಟು ಆದಾಯ ಜಾಸ್ತಿಯಾಗುತ್ತದೆಂದು ಹೇಳಿದ್ದರು. ಅದು ಎಷ್ಟರ ಮಟ್ಟಿಗೆ ಆಗಿದೆ ಎಂಬುದು ಅರ್ಥವಾಗುವುದಿಲ್ಲ. 1962ನೇ ಡಿಸೆಂಬರದೊಳಗಾಗಿ ಶರಾವತಿ ಯೋಜನೆಯಿಂದ ಪವರ್ ಕೊಡುತ್ತೇವೆಂದು ಹೇಳಿದರು. ಈ ಶರಾವತಿ ಯೋಜನೆಗೆ 700 ಲಕ್ಷ ರೂಪಾಯಿ ಮಂಜೂರಾಗಿದೆ. ಒಟ್ಟು 38 ಲಕ್ಷ ರೂಪಾಯಿ ಖರ್ಚಾಗಿದೆ. ಈ ರೀತಿ ಕೆಲಸ ನಡೆದಿರುವುದು ನಿಜವಾಗಿಯೂ ಪ್ರಗತಿಯಲ್ಲ. ಇನ್ನು ಎರಡು ವರ್ಷಗಳಲ್ಲಿ ಯೋಜನೆ ಪೂರ್ತಿಯಾಗಬೇಕಾಗಿದೆ. ಈ ರೀತಿ ಪ್ರಗತಿ ಆಗುವುದಾದರೆ 1962ನೆ ಡಿಸೆಂಬರದೊಳಗಾಗಿ ಪವರ್ ಪೂರೈಸುತ್ತಾರೆ ಎಂಬುದಕ್ಕೆ ಎಷ್ಟರ ಮಟ್ಟಿಗೆ ನಂಬಿಕೆ ಇಟ್ಟು

ಕೊಳ್ಳಬಹುದು ಎಂಬುದನ್ನು ಅವರು ಹೇಳಬೇಕು. 700 ಲಕ್ಷ ರೂಪಾಯಿಗಳನ್ನೊದಗಿಸಿದ್ದಾರೆ. ಇದು ಏನು ಪ್ರಗತಿ ಎನ್ನುವುದು ಅರ್ಥವಾಗುವುದಿಲ್ಲ.

ಸ್ವಾಮಿ, ಮೊನ್ನೆತಾನೇ ಮಂತ್ರಿಗಳ ಸಂಖ್ಯೆ 16 ರಿಂದ 20ಕ್ಕೆ ಏರಿತು. ಎರಡನೆಯ ಯೋಜನೆಯ ಕೊನೆಯ ವರ್ಷದಲ್ಲಿ tempo ಜಾಸ್ತಿ ಮಾಡಿದ್ದೇವೆ, ಆಡಳಿತದ ಗಾತ್ರ ಜಾಸ್ತಿಯಾಗಿದೆ, ಮೂರನೆಯ ಯೋಜನೆಯಲ್ಲಿ ಹಣ ಜಾಸ್ತಿ ಖರ್ಚು ಮಾಡಬೇಕಾಗಿದೆ, ಅದಕ್ಕೋಸ್ಕರ ಮಂತ್ರಿಗಳನ್ನು ಜಾಸ್ತಿ ಮಾಡಿದ್ದೇವೆಂದು ಹೇಳಿದರು. ಅಂಕಿಅಂಶಗಳನ್ನು ನೋಡಿದರೆ ಎರಡನೆಯ ಯೋಜನೆಯ ಕೊನೆಯ ವರ್ಷದಲ್ಲಿ 47-48 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಮೂರನೆಯ ಯೋಜನೆಯ ಮೊದಲ ವರ್ಷದಲ್ಲಿ 36 ಕೋಟಿ ಖರ್ಚು ಮಾಡುತ್ತೇವೆಂದು ಹೇಳುತ್ತಾರೆ. Tempo ಏಕದಂ ಇಳಿಸಬಹುದು ಎನ್ನುವುದು ಇದರ ಅರ್ಥವೇ? ಮುಂದಿನ ಐದು ವರ್ಷಗಳಲ್ಲಿ 250 ಕೋಟಿ ಖರ್ಚು ಮಾಡಬೇಕೆಂದು ಹೇಳುವಾಗ ಈಗ ಕೇವಲ 40 ಕೋಟಿ ಖರ್ಚು ಮಾಡಿ ಒಂದೇ ಸಲ ಜನತೆಯ ಮೇಲೆ ತೆರಿಗೆ ಏರಿಸಬೇಕು ಎನ್ನುವುದು ಸರ್ಕಾರದ ಇಚ್ಛೆಯೇ. ಏಕೆಂದರೆ 43 ಕೋಟಿ ರೂಪಾಯಿಗಳನ್ನು ತೆರಿಗೆ ರೂಪದಲ್ಲಿ ಪಡೆಯಬೇಕೆಂದು ಸರ್ಕಾರ ಅಭಿಪ್ರಾಯಪಟ್ಟಿತು. ಈ 43 ಕೋಟಿ ರೂಪಾಯಿಗಳಲ್ಲಿ ಎರಡೂವರೆ ಕೋಟಿಯಷ್ಟು ಈ ವರ್ಷ ತೆರಿಗೆಗಳನ್ನು ಹಾಕಿ ಉಳಿದ 41½ ಕೋಟಿಯನ್ನು ಮೂರು ನಾಲ್ಕು ವರ್ಷಗಳಲ್ಲಿ ಹಾಕಬೇಕೆಂಬ ಮನಸ್ಸು ಸರ್ಕಾರಕ್ಕೆ ಇದೆ. ಇದನ್ನು ನೋಡಿದ್ದರೆ ಬಡ್ಜೆಟ್ಟನ್ನು ಯಾವ ಒಂದು ಉದ್ದೇಶದಿಂದ ತಯಾರು ಮಾಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಒಂದು ಗಾದೆ ಹೇಳುವ ಹಾಗೆ ಮನಸ್ಯೇಕಂ, ವಚಸ್ಯೇಕಂ, ಕರ್ಮಣ್ಯೇಕಂ ಎಂದರೆ ಮನಸ್ಸಿನಲ್ಲಿರುವುದು ಒಂದು, ಬಾಯಲ್ಲಿ ಹೇಳುವುದೇ ಒಂದು, ಕೃತಿಯಲ್ಲಿ ಮಾಡುವುದು ಮತ್ತೊಂದು ಎನ್ನುವಂತಾಗಿದೆ ಎಂಬುದಾಗಿ ನಾವು ಧಾರಾಳವಾಗಿ ಹೇಳಬಹುದಾಗಿದೆ.

Sri D. DEVARAJ URS.—Sir, the Hon'ble Member seems to have wrongly quoted. With regard to the Hydro-Electric Works, it is not five lakhs, it is 750 lakhs.

Sri C. K RAJAIAH SHETTY.–Even assuming that it is 750 lakhs, you have to spend 29 crores and out of that you have provided for 750 lakhs this year. You have promised power by the end of December 1962.

ಶರಾವತಿ ಯೋಜನೆಯಿಂದ ಪವರ್ ಕೊಡುತ್ತೇವೆಂದು ಅನೇಕ ಸಾರಿ ಹೇಳಿದ್ದಾರೆ, ಮತ್ತೆ ಒಪ್ಪಿಕೊಂಡೂ ಇದ್ದಾರೆ. ಮೊನ್ನೆ ಒಂದು ಇಂಟರ್‌ಪೆಲೇಷನ್‌ಗೆ ಉತ್ತರ ಕೊಡುವಾಗ ಕೂಡ ಹೇಳಿದರು. 29 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಜಾಗದಲ್ಲಿ...

Sri D. DEVARAJ URS.—The Hon'ble Member knows that so far, about 13 crores have been spent already and this year, there is a provision of 7½ crores. That means about 21 crores is already spent. The balance will be spent during the next year.

Sri C. K. RAJAIAH SHETTY.—The balance will be nearly 18 crores. Within the next nine months in the next year, do you believe that you will be able to spend that much?

ಶ್ರೀ ಬಿ. ಡಿ. ಜತ್ತಿ—ಈ ಕೆಲಸವನ್ನು outside the plan ತೆಗೆದುಕೊಳ್ಳುವ ಏರ್ಪಾಟು ಮಾಡಿದೆ. ಅದನ್ನು ಬಡ್ಜೆಟ್ಟಿನಲ್ಲಿ ಹೇಳುವುದಕ್ಕಾಗುವುದಿಲ್ಲ. ಹಣ ಸಿಕ್ಕುವುದಿಲ್ಲವೆನ್ನುವುದು ಸರಿಯಲ್ಲ.

(*Interruptions*).

What the Hon'ble Member says is correct. The idea is to make use of other sources to finance that project. But it is not mentioned in the Finance Minister's speech.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಸ್ವಾಮಿ, ನಿಜವಾಗಿಯೂ ನೋಡಿದರೆ ಸರ್ಕಾರ ಆದಾಯಕ್ಕೆ ಅನೇಕ ಬಾಬುಗಳನ್ನು ಬಿಟ್ಟಿದೆ. ನಾನಾದರೂ ಸರ್ಕಾರಕ್ಕೆ ಕೆಲವು ವಿಷಯಗಳನ್ನು ತಿಳಿಸಬೇಕೆಂದಿದ್ದೇನೆ. ಸರ್ಕಾರ ಜನತೆಯ ಮೇಲೆ ಜಾಸ್ತಿ ತೆರಿಗೆಗಳನ್ನು ಹೇರಬೇಕಾದ್ದಿಲ್ಲ. ಈ ದೇಶದ ಸಾಧನ-ಸಂಪತ್ತುಗಳನ್ನು ಸರ್ಕಾರ tap ಮಾಡಿದ ಪಕ್ಷದಲ್ಲಿ ಜನತೆಯ ಮೇಲೆ ತೆರಿಗೆಗಳನ್ನು ಹೇರದೆ ಆಡಳಿತವನ್ನು ನಡೆಸಬಹುದು.

ನಮ್ಮ ಸರ್ಕಾರದವರು ಹೊಸ ಕೈಗಾರಿಕೆಗಳು ಸ್ಥಾಪಿತವಾಗಲಿ ಎಂದು ಅನೇಕರಿಗೆ ಅನೇಕ ರೀತಿಯ ರಿಯಾಯಿತಿಗಳನ್ನು ಕೊಟ್ಟಿದ್ದಾರೆ. ಇವರಲ್ಲಿ ಬಹಳ ಜನ ಮೈಸೂರಿನವರಲ್ಲ, ಹೊರಗಿನವರು. ಹೊರಗಿನವರಿಗೆ ಅವಕಾಶ ಕೊಡಬಾರದೆಂದು ಹೇಳುವುದಿಲ್ಲ. ಬಂಡವಾಳ ಹಾಕುವುದಕ್ಕೆ ನಮ್ಮ ದೇಶದ ಜನರಿಂದ ಅಷ್ಟಾಗಿ ಸಾಧ್ಯವಿಲ್ಲವಾದ್ದರಿಂದ ಹೊರಗಿನವರು ಬಂದರೆ ಅವರಿಗೆ ಉತ್ತೇಜನ ಕೊಡಬೇಕು. ಇವರು ಏನು ಮಾಡುತ್ತಾರೆಂದರೆ ತಮ್ಮ ಕಾರ್ಖಾನೆಗಳನ್ನು ಮೈಸೂರಿನಲ್ಲಿಯೇ ಸ್ಥಾಪನೆ ಮಾಡಿ, ಮುಖ್ಯ ಕಛೇರಿಗಳನ್ನು ಬೊಂಬಾಯಿ, ಕಲ್ಕತ್ತ ಇಂಥ ಕಡೆ ಮಾಡಿಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಇವೊತ್ತಿನ ದಿವಸ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್ ತೆಗೆದುಕೊಂಡರೆ ಅವರು ವರ್ಷಕ್ಕೆ ಆರು ಕೋಟಿ ರೂಪಾಯಿಗಳ ಬೆಲೆಬಾಳುವ ಕಾಗದವನ್ನು ನಮ್ಮ ರಾಜ್ಯದಲ್ಲಿ ಉತ್ಪತ್ತಿ ಮಾಡಿ ಬೊಂಬಾಯಿನಲ್ಲಿ ಮಾರಾಟ ಮಾಡುತ್ತಿದ್ದಾರೆ. ಈ ಆರು ಕೋಟಿ ರೂಪಾಯಿಗಳ ವಹಿವಾಟಿಗೆ ಎಷ್ಟು ಮಾರಾಟ ತೆರಿಗೆ ಆಗುತ್ತದೆ ಎನ್ನುವುದನ್ನು ಸರ್ಕಾರದವರೇ ಲೆಕ್ಕ ಹಾಕಿದರೆ ಇದರಿಂದ ಸರ್ಕಾರಕ್ಕೆ ದ್ರೋಹವಾಗುತ್ತಿದ್ದಾರೆಂದು ಒಪ್ಪಿಕೊಳ್ಳಬೇಕಾಗುತ್ತದೆ. 25 ಲಕ್ಷ ರೂಪಾಯಿ ಬಂಡವಾಳ ಹಾಕಿರುವ ಭದ್ರಾವತಿ ಕಾಗದದ ಕಾರ್ಖಾನೆಯಿಂದ ಪ್ರತಿ ವರ್ಷ ಎಂಟು ಲಕ್ಷ ರೂಪಾಯಿ ನಮಗೆ ಮಾರಾಟ ತೆರಿಗೆಯಿಂದ ಬರುತ್ತಿದೆ, ಸುಮಾರು 15 ಲಕ್ಷ ರೂಪಾಯಿ ಸೆಂಟ್ರಲ್ ಎಕ್ಸೈಸ್ ಬರುತ್ತದೆ. ಇದರ ಮೂರರಷ್ಟು ಪ್ರಮಾಣವಿರುವ ಕಾರ್ಖಾನೆಯಲ್ಲಿ ಉತ್ಪತ್ತಿಗಾಗಿ ಮಾರಾಟವಾಗುವ ವಸ್ತುಗಳನ್ನು ಬೊಂಬಾಯಿನಲ್ಲಿ ಮಾರಾಟ ಮಾಡುತ್ತಿರುವುದರಿಂದ ನಮ್ಮ ಸರ್ಕಾರಕ್ಕೆ ಸೇಲ್ಸ್ ಟ್ಯಾಕ್ಸ್ ರೂಪದಲ್ಲಿ ಸುಮಾರು 15-20 ಲಕ್ಷ ರೂಪಾಯಿನಷ್ಟು ಒಂದು ಕಾರ್ಖಾನೆಯಿಂದ ನಷ್ಟವಾಗುತ್ತಿದೆ. ಮಂಡ್ಯದಲ್ಲಿ ಕಾಗದದ ಕಾರ್ಖಾನೆ ಸ್ಥಾಪನೆ ಮಾಡಲು ಬೊಂಬಾಯಿನವರಿಗೊಬ್ಬರಿಗೆ ಏಜನ್ಸಿ ಕೊಡಬೇಕು ಎಂದು ಇದ್ದಾರೆ. ಕಡಮೆ ದರದಲ್ಲಿ ಬಿದಿರು ಕೊಟ್ಟು ಕಡಮೆ ದರದಲ್ಲಿ ಅವನಿಗೆ ಬೇಕಾದಷ್ಟು ವಿದ್ಯುಚ್ಛಕ್ತಿಯನ್ನು ಕೊಟ್ಟು, ರಿಯಾಯಿತಿ ದರದಲ್ಲಿ ಜಮೀನನ್ನು ಕೊಟ್ಟು, ಹೊರಗಿನವರಿಗಾದರೂ ಕೂಡ ಕೈಗಾರಿಕೆಗೆ ಉತ್ತೇಜನ ಕೊಡಬೇಕು ಎಂಬ ಅಭಿಮಾನದಿಂದ ಸರ್ಕಾರ ಸಹಾಯ ಮಾಡುತ್ತಿರುವಾಗ, ಸರ್ಕಾರ ಈ ಒಂದಂಶವನ್ನು ಏಕೆ ಗಮನಿಸಲಿಲ್ಲವೆಂದು ಕೇಳುತ್ತೇನೆ. ಇದರಿಂದ ಸರ್ಕಾರಕ್ಕೆ ನುಕ್ಸಾನಾಗುತ್ತಿದೆ. ನಮ್ಮ ರಾಜ್ಯದಲ್ಲಿ ಕೈಗೊಳ್ಳಲು ಇಂಥ ಅನೇಕ ಕಾರ್ಖಾನೆಗಳನ್ನು ಸ್ಥಾಪಿಸಲು ಅವಕಾಶವಿದೆ. ಸರ್ಕಾರ ಯಾವುದೇ ರಿಯಾಯಿತಿಗಳನ್ನು ಕೊಟ್ಟಾಗ್ಗೂ ಅಗ್ರಿಮೆಂಟ್ ಮಾಡಿಕೊಳ್ಳುವಾಗ ಮಾರಾಟದ ಆಫೀಸ್ ಎಲ್ಲಿರಬೇಕು, ಮತ್ತು ಎಲ್ಲಿಯೇ ಪದಾರ್ಥಗಳು ತಯಾರಾಗಲಿ, ಇಂಥ ಕೇಂದ್ರದಿಂದಲೇ ಹೊರಡಬೇಕು, ಅಲ್ಲಿಂದಲೇ ಮಾರಾಟವಾಗಬೇಕು ಎನ್ನುವ ಒಂದು ನಿಯಮವನ್ನು ಸರ್ಕಾರ ಹಾಕಿದ ಪಕ್ಷದಲ್ಲಿ ಒಂದು ಕೋಟಿ ರೂಪಾಯಿ ಆದಾಯ ಜಾಸ್ತಿ ಬರುತ್ತದೆ.

ಇನ್ನೊಂದೇನೆಂದರೆ ನಮ್ಮ ದೇಶದಲ್ಲಿ ಅಪಾರ ಖನಿಜಸಂಪತ್ತಿದೆ. ಇವೊತ್ತು ಸರ್ಕಾರ ಮ್ಯಾಂಗನೀಸ್ ಮತ್ತು ಕಬ್ಬಿಣ ಇವೆರಡಕ್ಕೂ ಮಾತ್ರ ಹೆಚ್ಚು ಗಮನ ಕೊಟ್ಟು Board of Mineral Development ಮೂಲಕ exploit ಮಾಡುತ್ತಿದ್ದಾರೆ. ಇಂದು ದೇಶದಲ್ಲಿ ಏನು ಆವಶ್ಯಕತೆಯಿದೆ, ನಮ್ಮ ದೇಶದಲ್ಲಿ ಏನು ಖನಿಜಸಂಪತ್ತಿದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನ ಮಾಡಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಪೈರು ಪಚ್ಚೆ ಹಾಳಾಗುತ್ತಿರುವುದನ್ನು ತಡೆಗಟ್ಟಲು 20 ಕೋಟಿ ರೂಪಾಯಿ ಬೆಲೆಯ insecticide

ತಯಾರಿಸುವುದಕ್ಕಾಗಿ ಪ್ರತಿ ವರ್ಷ ಮೂರು ಕೋಟಿ ರೂಪಾಯಿಗಳ ಬಳಪದ ಕಲ್ಲಿನ ಪುಡಿ (steotyte powder) ಬೇಕಾಗುತ್ತದೆಂದು ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನವರು ಕೇಳಿದರು. ನಮ್ಮ ಸರ್ಕಾರದವರು ಏನಾದರೂ ಸರ್ವೆ ಮಾಡಿ ನಮ್ಮಲ್ಲಿ ಈ ಕಚ್ಚಾ ಪದಾರ್ಥ ಸಿಕ್ಕುತ್ತದೆಂದು ತಿಳಿದುಕೊಂಡಿದ್ದರೆ, ಕೇಂದ್ರದವರು ಈ insecticide ತಯಾರು ಮಾಡಿದ ಪಕ್ಷದಲ್ಲಿ ನಾವು ಮೂರು ಕೋಟಿ ರೂಪಾಯಿ ಬಳಪದ ಕಲ್ಲಿನ ಪುಡಿಯನ್ನು ಒದಗಿಸುತ್ತೇವೆಂದು ಹೇಳಬಹುದಾಗಿತ್ತು.

ಇವಲ್ಲದೆ ನಮ್ಮ ದೇಶದಲ್ಲಿ ಸುಣ್ಣ ಹೇರಳವಾಗಿ ಸಿಕ್ಕುತ್ತದೆ. ಇದರಲ್ಲಿ paper quality, sugar quality, flex quality, chemical quality ಎಂದು ನಾಲ್ಕಾರು ತರಹ ಇದೆ ಇವೊತ್ತಿನ ದಿವಸ ನಮ್ಮ ಸಂಸ್ಥಾನಕ್ಕೆ ಹತ್ತು ಸಾವಿರ ಟನ್ ಸುಣ್ಣ ದ್ರೋಣಾಚಲಂ ಮತ್ತು ಇತರ ಕಡೆಗಳಿಂದ ಬರುತ್ತಿದೆ. ನಮ್ಮ ದೇಶದಲ್ಲಿಯೇ ಈ ಸಂಪತ್ತು ಇದ್ದಾಗ್ಯೂ ಎಷ್ಟು ಸಿಕ್ಕುತ್ತದೆ, ಯಾವ ಪ್ರಮಾಣದಲ್ಲಿ ಸಿಕ್ಕುತ್ತದೆ, ಯಾವ quality ಸಿಕ್ಕುತ್ತದೆ, ಅದನ್ನು ಯಾವ ರೀತಿ ಉಪಯೋಗಿಸಿಕೊಳ್ಳಬೇಕು ಎನ್ನುವುದನ್ನು ವಿಮರ್ಶೆ ಮಾಡುವುದಕ್ಕೂ ಸರ್ಕಾರ ಪ್ರಯತ್ನಪಟ್ಟಿಲ್ಲ.

ನಮ್ಮ ದೇಶಕ್ಕೆ ಇವೊತ್ತಿನ ದಿವಸ ವಿಪರೀತವಾಗಿ ನಮ್ಮ ದೇಶದಲ್ಲಿರುವ ಕೈಗಾರಿಕೆಗಳಾದ H.A.L. ಮತ್ತು H. M. T. ಕೈಗಾರಿಕೆಗಳಿಗೆ ಬೇಕಾಗುವ Dalnite and Graphite ಗಳು ಇಲ್ಲಿಯೇ ಸಿಗುತ್ತದೆ. ನಿಜವಾಗಿಯೂ ಇದನ್ನು ಸರ್ವೇಮಾಡಿ, ಪ್ಲಾನಿಂಗ್ ಸೆಕ್ಷನ್ನಿನವರು ಯೋಜನೆ ತಯಾರುಮಾಡಿ ಪೂರ್ಣವಾದ ವಿವರಗಳನ್ನು ಪಡೆದರೆ ನಮ್ಮ ದೇಶವನ್ನು ಅಭಿವೃದ್ಧಿ ಮಾಡಿದ ಪಕ್ಷದಲ್ಲಿ ನಮ್ಮ ದೇಶಕ್ಕೆ ಇನ್ನೂ ಎರಡು-ಮೂರು ಕೋಟಿಯಷ್ಟು ಬೆಲೆಯ ಪದಾರ್ಥಗಳನ್ನು ಪಡೆಯಬಹುದು.

ಉಳಿಕೆಯ ವಿಚಾರಗಳನ್ನು ನಾನು ಡಿಮ್ಯಾಂಡುಗಳನ್ನು ವಿಚಾರಮಾಡುವಾಗ ಹೇಳುತ್ತೇನೆ,

†ಶ್ರೀ ಜಿ. ಶಿವಪ್ಪ (ಚಿತ್ರದುರ್ಗ).—ಮಾನ್ಯಅಧ್ಯಕ್ಷರೇ, ಶ್ರೀಮಾನ್ ಮರಿಯಪ್ಪನವರು ನಮ್ಮ ಮುಂದೆ ಇಟ್ಟಿರುವ ಆದಾಯ ವ್ಯಯದ ಪಟ್ಟಿಯನ್ನು ಸ್ವಾಗತಿಸುತ್ತ ನಾನು ಇಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಎರಡು ಮೂರು ದಿವಸಗಳಿಂದ ಈ ವಿಷಯದಲ್ಲಿ ಚರ್ಚೆಮಾಡಿದ ನಮ್ಮ ವಿರೋಧಪಕ್ಷದ ನಾಯಕರುಗಳು ಮತ್ತು ಇನ್ನಿತರರೂ ದೊಡ್ಡದಾಗಿ ಟೀಕೆ ಮಾಡಿದ್ದಾರೆ. ಟೀಕೆ ಮಾಡುವುದು ತಪ್ಪೇನಿಲ್ಲ. ಡೆಮಾಕ್ರಟಿಕ್ ಕಂಟ್ರಿಯಲ್ಲಿ ಎಲ್ಲೆಲ್ಲಿ ವಿರೋಧಪಕ್ಷಗಳು ಇವೆಯೋ ಅಲ್ಲೆಲ್ಲಾ ಟೀಕೆ ಮಾಡುವುದು ಸ್ವಾಭಾವಿಕ. ಮಾಡತಕ್ಕ ಸನ್ನಿವೇಶಗಳಿಗಾಗಿ ಅವರು ಹೆಚ್ಚಾಗಿ ಅಮೆರಿಕಾ, ಇಂಗ್ಲೆಂಡು ಇವುಗಳನ್ನು ಉದಾಹರಣೆಯಾಗಿ ಕೊಡುತ್ತಿದ್ದಾರೆ. ಅಲ್ಲಿ ಟೀಕೆ ಮಾಡಿದರೆ ರೂಲಿಂಗ್ ಪಕ್ಷಕ್ಕೆ ರಚನಾತ್ಮಕವಾದ ಸಲಹೆಗಳನ್ನು ಕೊಡುವುದರಲ್ಲಿ ಕೆಲವಾದರೂ ನಿಜವಾದ ಅಂಶಗಳು ಇವೆ. ಆದರೆ ಇಲ್ಲಿ ಇವರು ಹೇಳುವುದು.

(Interruption in Marathi by Sri N. O. Samaji and Sri V. S. Patil).

ನಮ್ಮ ಪಾರ್ಟಿಯ ಸದಸ್ಯರುಗಳೂ ಟೀಕೆ ಮಾಡುತ್ತಾರೆ. ನಾನೂ ಕೂಡ ಟೀಕೆ ಮಾಡುತ್ತೇನೆ. ಅನೇಕ ಸಂದರ್ಭಗಳಲ್ಲಿ ನಾನೇ ಟೀಕೆಮಾಡುತ್ತೇನೆ. ಏಕೆಂದರೆ, ಸರಕಾರ ತಿಳಿದುಕೊಳ್ಳಬೇಕು ಎಂದು ನಾವು ಸಲಹೆ ಮಾಡಬೇಕಾಗಿದೆ. ತಮಗೂ (ಅಧ್ಯಕ್ಷರಿಗೆ) ಗೊತ್ತಿರುವ ಹಾಗೆ ಪ್ರತಿಯೊಂದು ಪ್ರಶ್ನೆಗೂ ಎರಡು ವಿಧವಾದ ಅರ್ಥಗಳಿರುತ್ತವೆ. ಹೀಗಿರುವಾಗ ನಮ್ಮ ವಿರೋಧಪಕ್ಷದ ಸದಸ್ಯರುಗಳು ಸತ್ಯವಿದ್ದರೂ ಅದನ್ನು ಅಸತ್ಯವೆಂದೇ ಎನ್ನುವರು. ಈ ಅಸೆಂಬ್ಲಿಯಲ್ಲಿ ನಡೆಯುವ ಚರ್ಚೆಗಳನ್ನು ನೋಡಿದರೆ, ವಾದಿ ಮತ್ತು ಪ್ರತಿವಾದಿಗಳಿಗೆ ನಡೆಯುತ್ತಿರುವ ವಾದದಂತೆ ಇದೆ. After all we are not lawyers. ನಿಜವಾದ

(ಶ್ರೀ ಜಿ. ಶಿವಪ್ಪ)

ಪರಿಸ್ಥಿತಿ ಏನು ಎನ್ನುವುದನ್ನು ತಿಳಿಸಬೇಕು. ವಿದ್ಯಾಇಲಾ ಯಲ್ಲಾಗಲೀ ಪಿ. ಡಬ್ಲ್ಯು.ಡಿ. ಅಥವಾ ಪೋಲೀಸು ಶಾಖೆಯಲ್ಲಾಗಲೀ, ನೀರಾವರಿ ಕೆಲಸಗಳನ್ನು ನ್ಯಾಯವಾಗಿ ಮಾಡುತ್ತಿದ್ದಾರೆ. ಎಷ್ಟು ಭಾರಿಭಾರಿಯಾದ ನೀರಾವರಿ ಯೋಜನೆಗಾಗಿ ನಮ್ಮ ಮೈಸೂರು ಸಂಸ್ಥಾನದಲ್ಲಿ ಎಷ್ಟು ಹಣ ಖರ್ಚಾಗಿದೆ ಎನ್ನುವುದನ್ನು 1947ನೇ ಇಸವಿಯಿಂದ ನೋಡಿದರೆ, ಆಗಿದ್ದ ಪರಿಸ್ಥಿತಿಗೂ ಈಗಿರತಕ್ಕ ಅಂಶವನ್ನು ಪರಿಶೀಲಿಸಿ ನೋಡಬೇಕು. ಎಲ್ಲಿ ನೋಡಿದರೂ ಕುಡಿಯುವ ಬಾವಿಗಳು ಎಲ್ಲಿ ನೋಡಿದರೂ ಕೆರೆಗಳೂ ಆಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರ ಊರಿನಲ್ಲೇ ಒಂದು ಬಾವಿ ಇಲ್ಲ (ನಗು).

ಶ್ರೀ ಜಿ. ಶಿವಪ್ಪ.—ಸಾಮಾನ್ಯ ಜನಕ್ಕೆ ಅನುಕೂಲವಾಗುವ ಹಾಗೆ ಬೇಕಾದಷ್ಟು ಹಣ ವನ್ನು ಈ ಬಡ್ಜೆಟ್ಟಿನಲ್ಲಿ ಒದಗಿಸಿದ್ದರೂ, ಹೀಗೆ ಹೇಳುತ್ತಿದ್ದಾರೆ. ಮಾನ್ಯ ಶ್ರೀ ಬಿ. ಕೆ. ಪುಟ್ಟರಾಮಯ್ಯನವರು ಹೋದ ವರ್ಷ ಸರ್‌ಪ್ಲಸ್ಸು ಬಡ್ಜೆಟ್ಟನ್ನು ಇಟ್ಟಾಗ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಮರಿಯಪ್ಪನವರು ಟ್ರಿಕ್ ಮಾಡಿದ್ದಾರೆಂದು ಹೇಳಿದರು. ಈ ವರ್ಷ ಡೆಫಿಸಿಟ್ಟು ಬಡ್ಜೆಟ್ಟನ್ನು ಇಟ್ಟರೆ, ತಿಳಿದು ಈ ರೀತಿ ಏಕೆ ಇಟ್ಟರು ಎಂದು ಹೇಳುತ್ತಾರೆ, ಬಡ್ಜೆಟ್ಟು ಏನು ಎನ್ನುವುದನ್ನು ಅವರು ಇನ್ನೂ ಚೆನ್ನಾಗಿ ತಿಳಿದು ಕೊಳ್ಳಬೇಕಾಗಿತ್ತು.

ಒಬ್ಬ ಒಂದು ಸಂಸಾರದಲ್ಲಿ ಯಜಮಾನನಾದವನು ಅವನ ಆದಾಯವೇನು ವ್ಯಯವೇನು ಎನ್ನುವುದನ್ನು ತೋರಿಸುವ ಪಟ್ಟಿಯನ್ನು ಮಾಡಿಕೊಂಡು ಆದಾಯಕ್ಕೆ ತಕ್ಕಂತೆ ಖರ್ಚು ಮಾಡ ಬೇಕೆಂದು ಮಾಡಿಕೊಂಡಿರುತ್ತಾನೆ. ಆದಾಯವೇನು ಖರ್ಚೇನು ಎನ್ನುವುದನ್ನು ನೋಡಿಕೊಂಡು ಅದರಂತೆ ಅವನು ಚೆನ್ನಾಗಿ ಕೆಲಸ ಮಾಡಿ ಸರಿಪಡಿಸುತ್ತಾನೆ. ಅದರಂತೆ ಇಲ್ಲಿರುವ ಬಡ್ಜೆಟ್ಟನ್ನು ಬರತಕ್ಕ ಉತ್ಪತ್ತಿಯು ಕಡಿಮೆಯಾಗಿದ್ದರೆ ಆದಾಯ ಕಡಿಮೆಯಾಗಿದ್ದರೆ ಅದನ್ನು ಸರಿದೂಗಿಸುವಂತೆ ಇಟ್ಟಿದ್ದಾರೆ. ಇದರಲ್ಲಿ ಅಂತಹ ದೊಡ್ಡ ಟ್ರಿಕ್ ಏನೂ ಇಲ್ಲ. ಇದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಅವರು ನಿಜವಾಗಿರುವುದನ್ನು ಬಿಟ್ಟು ಒಂದೇ ವಾದ ಹೇಳುತ್ತಿದ್ದಾರೆ. ನಾವೆಲ್ಲ ಒಂದುಗೂಡಿಬಿಟ್ಟವು ಎಂದರೆ, ಇವರದೇನು ಗಂಟು ಹೋಯಿತು? ನಾವು ಒಂದು ಗೂಡಿದರೆ ಇದರೇನು ಬಂಡವಾಳ ಹಾಕಬೇಕಾಗಿತ್ತೇ. ನಾವು ಒಂದು ಸಲ ಉಗ್ರವಾಗಿ ಕಾದಾಡುತ್ತೇವೆ. ಒಂದು ಸಲ ನಾವೆಲ್ಲರೂ ಒಂದು ಗೂಡುತ್ತೇವೆ. ಇದು ಕಾಂಗ್ರೆಸ್‌ನ ಚರಿತ್ರೆ ನಮ್ಮ ಕಾಂಗ್ರೆಸ್ಸಿನ ಸಂಸ್ಥೆ ಹುಟ್ಟಿದಾಗಿನಿಂದ ಭಿನ್ನಾಭಿಪ್ರಾಯಗಳು ಬಂದೇಬರುತ್ತಿದೆ. ಅವನ್ನೆಲ್ಲ ಚರ್ಚೆಮಾಡಿ ಸರಿಪಡಿಸಿಕೊಂಡು ಹೋಗುತ್ತಿರುತ್ತಾರೆ. ಇದನ್ನೆಲ್ಲಾ ಇಲ್ಲಿ ದೊಡ್ಡದಾಗಿ ಹೇಳುವುದು ಏಕೆ? ಇನ್ನೊಬ್ಬರ ಡೊಂಕನ್ನು ಹೇಳುವವರು ಮೊದಲು ತಮ್ಮ ಡೊಂಕನ್ನು ಸರಿಪಡಿಸಿಕೊಂಡು ಇನ್ನೊಬ್ಬರನ್ನು ತಿಳಿಯುವುದು ಬಹಳ ಒಳ್ಳೆಯದು. ಅವರು ಯಾವಾಗಲೂ ಅಮೇರಿಕಾ, ಇಂಗ್ಲೆಂಡು, ಈ ದೇಶಗಳು ಉದಾಹರಣೆ ಕೊಡುತ್ತಾರೆ.

(*Interruption*)

ಇನ್ನು ನಿಮ್ಮ ಪಾರ್ಟಿಯ ವಿಚಾರ ಸ್ವಲ್ಪ ಹೇಳುತ್ತೇನೆ. ಮೊದಲನೆ ವರ್ಷ ಶ್ರೀ ಕೆಂಚಪ್ಪ ನವರು ನಾಯಕರಾಗಿದ್ದರು, ಎರಡನೆಯ ಸಾರಿಗೆ ಶ್ರೀ ಶ್ರೀನಿವಾಸ ಶೆಟ್ಟರು ನಾಯಕರಾದರು ಮೂರನೆ ವರ್ಷ ಶ್ರೀ ಪುಟ್ಟರಾಮಯ್ಯನವರಾದರೂ ಇವರನ್ನೇನಾದರೂ ನಾವು ಕೇಳು ತ್ತಿದ್ದೇವೆಯೇ? ನೀವು ಏಕೆ ಹೀಗೆ ಮಾಡಿಕೊಂಡಿದ್ದೀರಿ ಎಂದು ನಾವು ಕೇಳಿಲ್ಲ.

ಒಬ್ಬರು ಸದಸ್ಯರು.—ಪೇಪರುಗಳಲ್ಲಿ ಬಂದಿದೆ.

ಶ್ರೀ ಜಿ. ಶಿವಪ್ಪ.—ಪೇಪರುಗಳಲ್ಲಿ ಸಾವಿರ ಬರೆಯಬಹುದು. ಯಾರೂ ಹೇಳಲಿಲ್ಲ. ಇವರಿಗೆ ಒಂದು ಸಂದರ್ಭ ಸಿಕ್ಕಿದೆ ನಾವು 150 ಜನ ಇದ್ದರೂ ವಿರೋಧ, ಪಕ್ಷದ ಜನ ಕಡಿಮೆ ಇದ್ದರೂ. ಅವರೇ ಒಂದು ಸಾರಿ ಸರಕಾರ ಮಾಡಿದರು ಎಂದು ಇಟ್ಟು ಕೊಳ್ಳೋಣ. ಅವರಲ್ಲಿರುವವರಲ್ಲಿ 18 ಜನರಾಗಲಿ, 16 ಜನರಾಗಲಿ, ಅಂದು ಮಂತ್ರಿಗಳಾಗಿ

ಬರುತ್ತಿರಲಿಲ್ಲವೇ ಎಂದು ನಾನೂ ಕೇಳುತ್ತೇನೆ. ಆಗಲೂ ಪೋರ್ಟ್‌ಫೋಲಿಯೋಗಳನ್ನು ಹಂಚಿಕೊಳ್ಳುವಾಗ ನಮ್ಮ ಶ್ರೀಮಾನ್ ಪುಟ್ಟರಾಮಯ್ಯನವರು ನನಗೆ ಬಹಳ ಕೆಲಸ ತುಂಬಾ ಇದೆ, ಎಲ್ಲ ನನಗೇಬೇಕು ಎನ್ನುತ್ತಾರೆ. (ನಗು) ಶ್ರೀಮಾನ್ ಪುಟ್ಟಣ್ಣನವರು ಪೋಲೀಸು ಶಾಖೆಯಲ್ಲಿ ಸೂಪರಿಂಟೆಂಡೆಂಟಾಗಿದ್ದೆ, ಆಮೇಲೆ ಜಮಾಬಂದಿ ಕೂಡ ಮಾಡಿದ್ದೆ ಎಂದು ಅವರಿಗೆ ರೆವಿನ್ಯೂ, ಗೃಹಶಾಖೆ ಮತ್ತು ಸ್ಟೇಟು ಎಕ್ಸೈಜ ಅವರು ನೋಡುತ್ತೇನೆಂದು ಹೇಳುತ್ತಾರೆ. ಇನ್ನೂ ನಮ್ಮ ಶ್ರೀ ಶ್ರೀನಿವಾಸ ಶೆಟ್ಟರು ಗಣಿ ಶಾಖೆ ಗೊತ್ತಿದೆ ಅದನ್ನು ನನಗೆ ಕೊಡಲಿ ಎನ್ನಬಹುದು. ನಮ್ಮ ಶ್ರೀಮಾನ್ ರಾಮಪ್ಪನವರು ಮತ್ತು ನಮ್ಮ ಶ್ರೀ ಮಾದಪ್ಪನವರು ಸಮ್ಮತಿ ಹೊಂದಿ ಏನಾದರೂ ಕೊಡಲಿ ಎಂದು ಹೇಳುತ್ತಾರೆ.

5–30 P.M.

ಶ್ರೀಮಾನ್ ರೇವಣ್ಣಸಿದ್ದಪ್ಪನವರು ನಾನು ಗ್ರಾಜುಯೇಟ್ ಆಗದಿದ್ದರೂ ಪರವಾಗಿಲ್ಲ ನಾನು ಅಗ್ರಿಕಲ್ಚರಲ್ ಮಿನಿಸ್ಟರ್ ಆಗುತ್ತೇನೆಂದು ಹೇಳುತ್ತಾರೆ. ಹೀಗಾಗಿ ಕೇವಲ ೬ ದಿನಗಳೂ ಸಹ ಆ ಸರ್ಕಾರವಿರುವುದಿಲ್ಲ. ಆಗ ಶ್ರೀ ಮುಕ್ಕಣ್ಣಪ್ಪನವರ ಗತಿ ದೇವರಿಗೇ ಗೊತ್ತಾಗಬೇಕು. ಶ್ರೀಮಾನ್ ಮುಕ್ಕಣ್ಣಪ್ಪನವರು ಓಡಿ ಬಂದು ಶಿವಪ್ಪಾ ದುಗ್ಗಪ್ಪಾ ನಾವು ಕೆಟ್ಟವಲ್ಲೋ ಎಂದು ಬಂದು ಹೇಳಬೇಕಾಗುತ್ತದೆ. ಅವರ ಗತಿ ಅಣ್ಣಮ್ಮನ ಗತಿಯಾಗುತ್ತದೆ. ಇಂತಹ ಪರಿಸ್ಥಿತಿ ಬರುತ್ತದೆ. ಆದ್ದರಿಂದ ವಿರೋಧಪಕ್ಷದವರು ಟೀಕೆ ಮಾಡುವುದಕ್ಕೂ ಒಂದು ಮಿತಿ ಬೇಕು. ನಾನು ಅವರು ಟೀಕೆ ಮಾಡಬಾರದು ಎಂದು ನಾನು ಹೇಳುವುದಿಲ್ಲ. ನನ್ನ ಮಿತ್ರರಾದ ಶ್ರೀಮಾನ್ ಕರುಂಬಯ್ಯನವರು ಟೀಕೆಗಳನ್ನು ಮಾಡಿದರೂ ಅದರಲ್ಲಿ ಶೇ. 50 ಭಾಗ ನಿಜವಾಗಿರುತ್ತದೆ. ಆ ರೀತಿ ಹೇಳುವುದನ್ನು ಬಿಟ್ಟು ಪ್ರತಿಯೊಂದಕ್ಕೂ ವಿರೋಧ ಮಾಡಿ ವಾದ ಮಾಡುವುದು ಸರಿಯಲ್ಲ. ನಾನು ಅನೇಕ ಸಾರಿ ದೇಶಸಂಚಾರ ಮಾಡಿದ್ದೇನೆ. ನಿಜವಾಗಿಯೂ ದೇಶ ಪ್ರಗತಿ ಪರವಾದ ಪಥದಲ್ಲಿ ಹೋಗುತ್ತಿದೆ. ಅದು ಒಂದು ನಮಗೆ ಹೆಮ್ಮೆಯಾಗಿದೆ. ರಾಜ್ಯಾಡಳಿತ ನಡೆಯುತ್ತಿರುವ ಕ್ರಮವನ್ನು ನೋಡಿದರೆ ನನಗೆ ಬಹಳ ಸಂತೋಷವಾಗುವ ರೀತಿಯಲ್ಲಿದೆ ಎಂದು ಹೇಳುವುದಕ್ಕೆ ನನಗೆ ಹೆಮ್ಮೆಯಾಗುತ್ತಿದೆ. ಆದರೆ ಕೇವಲ ಒಂದು ರೀತಿಯಲ್ಲಿ ಉತ್ಪ್ರೇಕ್ಷೆ ಮಾಡುವುದು ಅನಾವಶ್ಯಕ.

ಇನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ದೇಶದ ಪರಿಸ್ಥಿತಿ ಹಾಳಾಗಿಹೋಯಿತು. ಈ ವರ್ಷ ಖೋತಾ ಬಜೆಟ್ ಮಾಡಿದ್ದಾರೆ. ಹೋದ ವರ್ಷ ಮಾತ್ರ ಸರ್ಪ್ಲಸ್ ಬಜೆಟ್ಟನ್ನು ತೋರಿಸಿದರು ಎಂದು ಟೀಕೆ ಮಾಡಿದರು. ನಾನು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಮೆಂಬರನ್ನಾಗಿ ಅವಿಚ್ಛಿನ್ನವಾಗಿ 7–8 ವರ್ಷಗಳಿಂದಲೂ ಕೆಲಸ ಮಾಡಿದ್ದೇನೆ. ಯಾವ್ಯಾವ ಇಲಾಖೆಗಳು ಸರಿಯಾಗಿ ಕೆಲಸ ಮಾಡುತ್ತಿವೆ ಎಂಬುದನ್ನು ನಾನು ಚೆನ್ನಾಗಿ ಮನಗಂಡಿದ್ದೇನೆ. That is a good budgeting. ಶೇ. 10, ಶೇ. 20ರಂತೆ ವೇರಿಯೇಷನ್ ಇರಬಹುದು. ನಾನು ಆ ವಿಷಯದಲ್ಲಿ ಅನೇಕ ಸಾರಿ ವಾದ ಮಾಡಿದ್ದೇನೆ. ಅದೇ ದೃಷ್ಟಿಯಿಂದ ಕೇಂದ್ರ ಸರ್ಕಾರದವರು ಈ ಒಂದು ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು...Except a few ; of course there may be defects which are beyond their control. ಅದು ಹೇಗೆಂದರೆ ಕೆಲವು ಸಂದರ್ಭಗಳಲ್ಲಿ ಮೆಷಿನರಿಗಳು ಬರುವುದಿಲ್ಲ. ಟೆಕ್ನಿಕಲ್ ಜನಗಳು ಸಿಕ್ಕುವುದಿಲ್ಲ. ಅಂತಹ ಸಂದರ್ಭದಲ್ಲಿ ನಮ್ಮ ಸರ್ಕಾರದವರು ಎಷ್ಟೋ ಜನರನ್ನೊದಗಿಸಿಕೊಟ್ಟು ಕಾರ್ಯಗಳನ್ನು ಯಶಸ್ವಿಯಾಗಿ ಮಾಡಿರುವುದನ್ನು ನೋಡಿ ವಿರೋಧಪಕ್ಷದವರು ನಮಗೆ ಶಹಬಾಸ್‌ಗಿರಿ ಕೊಡುವುದಕ್ಕೆ ಬದಲು ಟೀಕೆ ಮಾಡುವುದಕ್ಕೆ ಹೋಗಿದ್ದಾರೆ. ದ್ವಿತೀಯ ಪಂಚವಾರ್ಷಿಕ ಯೋಜನೆಯ ಮಟ್ಟ ಇಲ್ಲಿಗೆ 140 ಕೋಟಿ ರೂಪಾಯಿಗಳಿಗೆ ಹೋಗುತ್ತಿದೆ ಎಂದು ಹೇಳಿದರೆ ಖಂಡಿತವಾಗಿ ನಾವು ಹೆಮ್ಮೆಪಡಬೇಕೇ ಇಲ್ಲವೇ ಎಂದು ನಾನು ಅವರನ್ನು ಕೇಳಬೇಕಾಗಿದೆ. ಸುಮಾರು 3–4 ವರ್ಷಗಳ ಮುಂಚೆ ಬಜೆಟ್ ಭಾಷಣದಲ್ಲಿ ಸರ್ವ ಡಿಪಾರ್ಟ್‌ಮೆಂಟಿನಲ್ಲಿ ಶೇ. 30 ಅಥವಾ ಶೇ. 40ರಷ್ಟು ಲ್ಯಾಪ್ಸ್ ಆಗುತ್ತಿದೆ ಎಂದು ಹೇಳಿದರು. ಆದರೆ ಈ ವರ್ಷ ಲ್ಯಾಪ್ಸ್ ಆಗುವುದಕ್ಕೆ ಅವಕಾಶವೇ ಇಲ್ಲದಂತೆ ಮಾಡಿದ್ದಾರೆ.

(ಶ್ರೀ ಜಿ. ಶಿವಪ್ಪ)

ಬಡ್ಜೆಟ್ಟಿನಲ್ಲಿ ಎಷ್ಟು ಹಣ ಪ್ರೊವೈಡ್ ಆಗಿರುತ್ತದೋ ಅಷ್ಟು ಹಣ ಪೂರ್ತಿ ಖರ್ಚಾದರೇನೇ ಅಷ್ಟು ಅನುಕೂಲಗಳು ಜನತೆಗೆ ಮುಟ್ಟುವಂತಾಗುತ್ತದೆ. ಒಂದು ವೇಳೆ ಆ ಹಣ ಲ್ಯಾಪ್ಸ್ ಆಗುತ್ತಿದ್ದರೆ, ಯಾವ ಅನುಕೂಲಗಳನ್ನು ಜನತೆಗೆ ಒದಗಿಸಬೇಕೆಂದು ಉದ್ದೇಶ ಮಾಡಿತ್ತೋ ಆ ಸೌಕರ್ಯಗಳನ್ನೊದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇಂಥಾದ್ದನ್ನೇ ಬಡ್ಜೆಟ್ಟಿನಲ್ಲಿ ಮೊದಲನೆಯದಾಗಿ ಪರಿಶೀಲಿಸಬೇಕಾದಂಥ ಮುಖ್ಯಾಂಶ. ಅಕೌಂಟೆಂಟ್ ಜನರಲ್ ಅವರು ಏನೊಂದು ಅಭಿಪ್ರಾಯವನ್ನು ಕೊಟ್ಟಿದ್ದರೋ ಅದರಂತೆ ಇವರು ಎಲ್ಲವನ್ನೂ ಇಂಪ್ಲಿಮೆಂಟ್ ಮಾಡಿದ್ದಾರೆಂದು ನಾನು ಇವತ್ತಿನ ದಿವಸ ಸಂತೋಷದಿಂದ ಹೇಳಬೇಕಾಗಿದೆ.

ಇನ್ನು ರಿಸೋರ್ಸಸ್ ಬಗ್ಗೆ ಅರ್ಥಿಕ ಸಚಿವರು ಎಷ್ಟು ಪ್ರಯತ್ನ ಮಾಡಿದ್ದಾರೆಂಬುದರ ಮೇಲೆ ಎಲ್ಲ ಇಲಾಖೆಗಳ ವಿಷಯವನ್ನು ಹೇಳುವುದು ಅನಾವಶ್ಯಕ. ಶೇ. 10, 15, 20ರಂತೆ ಸೇಲ್ಸ್ ಟ್ಯಾಕ್ಸ್, ಟ್ಯಾಕ್ಸ್ ಆನ್ ವೆಹಿಕಲ್ಸ್, ಇಂಟರ್ ಸ್ಟೇಟ್ ಟ್ಯಾಕ್ಸ್, ವಿದ್ಯುಚ್ಛಕ್ತಿ ತೆರಿಗೆ, ಇವುಗಳಲ್ಲಿ ಎಷ್ಟೋ ತೆರಿಗೆಗಳನ್ನು ಜಾಸ್ತಿ ಮಾಡಿದ್ದಾರೆ. ಇಷ್ಟು ತೆರಿಗೆಗಳನ್ನು ಜಾಸ್ತಿ ಮಾಡಿದ್ದರೂ ಅವನ್ನು ವಸೂಲು ಮಾಡುವುದಕ್ಕೆ ವಿಶೇಷವಾಗಿ ಶ್ರಮಪಡುತ್ತಿದ್ದಾರೆಂದು ನನ್ನ ಅಭಿಪ್ರಾಯ. ಇನ್ನು ಸ್ವಲ್ಪ ಶ್ರಮಪಟ್ಟರೆ ಸೇಲ್ಸ್ ಟ್ಯಾಕ್ಸ್ ಒಂದರ ದಲ್ಲೇ ರೆಸಿಟ್ಸ್ 10 ಕೋಟಿ ರೂಪಾಯಿಗಳನ್ನು ಪಡೆಯಬಹುದು. ಈ ಬಗ್ಗೆ ಸಂಶೋಧನೆ ಮಾಡುವವರಿಗೆ ಹೆಚ್ಚಿನ ಖರ್ಚು ಆಗಬಹುದು. ಆದರೂ ಬರುವ ವರ್ಷ ಈ ಬಾಬಿನಲ್ಲಿ ಇನ್ನೂ ಹೆಚ್ಚಿನ ಆದಾಯವನ್ನು ನಮ್ಮ ಸರ್ಕಾರದವರು ಪಡೆಯುತ್ತಾರೆಂದು ನಾನು ಅಭಿಪ್ರಾಯ ಪಡುತ್ತೇನೆ. ಎಕ್ಸ್‌ಪೆಂಡಿಚರ್ ಸೈಡಿನಲ್ಲಿ ಈಗ ಸುಮಾರು 14 ಕೋಟಿ ರೂಪಾಯಿಗಳನ್ನು ವಿದ್ಯಾಭ್ಯಾಸ ಖಾತೆಯೊಂದಕ್ಕೆ ನಾವು ಖರ್ಚು ಮಾಡುತ್ತಿದ್ದೇವೆ. ಇವನ್ನು ನೋಡಿದರೆ ಮೈಸೂರಿನ ಪ್ರತಿಯೊಬ್ಬ ಪ್ರಜೆಯೂ ಹೆಮ್ಮೆಪಡುವ ವಿಚಾರವಾಗಿದೆ. ನಮ್ಮದು ಡೆಮಾಕ್ರಾಟಿಕ್ ಕಂಟ್ರಿ ಹೈದರಾಬಾದ್‌ನಲ್ಲಿ ಕೇವಲ ಶೇ. 25ರಷ್ಟು ಈ ಬಾಬಿಗೆ ಕೊಟ್ಟಿದ್ದಾರೆ. ಆದ್ದರಿಂದಲೇ ನಮ್ಮಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ಪ್ರೈಮರಿ ಸ್ಕೂಲು ಇದೆ.

Sri C. J. MUCKANNAPPA.—He is giving a false information. Government have agreed to provide thousands of Primary Schools. Now he says that every village has got a Primary School. ಸರ್ಕಾರವನ್ನೇನೋ ತಬ್ಬಿಬ್ಬು ಮಾಡುತ್ತಾ ಇಲ್ಲ. ನನ್ನ ಮುಂದೆ ಆ ಮಾತನ್ನು ಹೇಳಬೇಡಿ. ಆಮೇಲೆ ಬೇಕಾದರೆ ಅವರಿಗೆ ಹೇಳಿ.

ಶ್ರೀ ಜಿ. ಶಿವಪ್ಪ.—ಪ್ರತಿಯೊಂದು ಹಳ್ಳಿಯಲ್ಲೂ ಪ್ರೈಮರಿ ಸ್ಕೂಲನ್ನು ಕೊಟ್ಟಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸುಳ್ಳು.

ಶ್ರೀ ಜಿ. ಶಿವಪ್ಪ.—ನಾವು ಬಿಲ್ಡಿಂಗಿಗೇ ಪೂರ್ತಿ ಹಣವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಅವರು ಸ್ವಲ್ಪ ಹಣ ಕೊಡಬೇಕು. ಅದಕ್ಕೋಸ್ಕರ ಕೆಲವು ತೆರಿಗೆಗಳನ್ನು ಹಾಕಿದರೂ ಅವರು ಒಪ್ಪುತ್ತಾರೆ. ಹೀಗೆಲ್ಲಾ ಮಾಡಿದರೆ ಇದೆಲ್ಲಾ ಎಲೆಕ್ಷನ್ ಸ್ಟಂಟ್ ಎಂದು ಹೇಳುತ್ತಾರೆ.

Sri G. VENKATAI GOWDA.—The Percentage of expenditure has come down.

Sri G. SIVAPPA.—If has not come down.

ಇನ್ನು ಅಗ್ರಿಕಲ್ಚರ್‌ಗಾಗಿ ನಮ್ಮ ಖರ್ಚು ಹಿಂದೆ ಇಂಟಿಗ್ರೇಷನ್ ಆದಾಗ್ಗೆ 113 ಕೋಟಿ ರೂಪಾಯಿಗಳು ಇತ್ತು. ಇವತ್ತಿನ ದಿವಸ ನಮ್ಮ ಎಕ್ಸ್‌ಪೆಂಡಿಚರ್ ಡಬ್ಬಲ್ ಆಗಿದೆ ಅಂದರೆ 226 ಕೋಟಿ ರೂಪಾಯಿಗಳಾಗಿವೆ. ಅನಿಮಲ್ ಹಸ್ಬೆಂಡರಿಗೆ 49 ಲಕ್ಷ ಹಿಂದೆ ಇದ್ದುದು ಈಗ 123 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಮೆಡಿಕಲ್ ಡಿಪಾರ್ಟ್‌ಮೆಂಟಿಗೆ

ಇಂಟಿಗ್ರೇಷನ್ ಆದಾಗ್ಗೆ 202ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೆವು. ಇವತ್ತಿನ ದಿವಸ 332 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅಷ್ಟೇ ಅಲ್ಲ ಈಗ ಒಂದು ಮಾಸ್ಟರ್ ಪ್ಲಾನ್ ಎಂದು ಮಾಡಿದ್ದಾರೆ. ಆ ಪ್ರಕಾರ 15 ಸಾವಿರ ಜನಸಂಖ್ಯೆ ಎಲ್ಲಿದೆಯೋ ಅಲ್ಲೊಂದು ಆಸ್ಪತ್ರೆಯನ್ನು ಕೊಡಬೇಕೆಂದು ಮಾಡಿದ್ದಾರೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಆ ಮಾಸ್ಟರ್ ಪ್ಲಾನ್ ಪ್ರಕಾರ ಈಗ ಎಷ್ಟು ಆಸ್ಪತ್ರೆಗಳಾಗಿವೆ ?

ಶ್ರೀ ಪಿ. ಶಿವಪ್ಪ.—ನೀವು ಕಣ್ಣುಮುಚ್ಚಿಕೊಂಡು ಕೂತಿದ್ದರೆ ನಿಮಗೆ ಹೇಗೆ ಗೊತ್ತಾಗುತ್ತದೆ. ನನಗೆ ಗೊತ್ತಿದೆ.

ಶ್ರೀಮಾನ್ ಸುಬ್ರಹ್ಮಣ್ಯ ಅವರು ಪ್ರಜಾರಾಜ್ಯವನ್ನು ಕಟ್ಟಬೇಕೆಂದು ಹೊರಟಿದ್ದಾರೆ. ಅದಕ್ಕಾಗಿ ಪಂಚಾಯಿತಿ ಮತ್ತು ತಾಲ್ಲೂಕ್ ಬೋರ್ಡ್‌ಗಳ ಚುನಾವಣೆಯನ್ನೂ ನಹ ಮಾಡಿ ಆ ಸಂಸ್ಥೆಗಳಿಗೆ ಬೇಕಾದ ಹಣವನ್ನು ಸಹ ಮಂಜೂರು ಮಾಡಿದ್ದಾರೆ.

ಇನ್ನೊಂದು ವಿಷಯ. ಕೊ-ಆಪರೇಟೀವ್ ಡಿಪಾರ್ಟ್‌ಮೆಂಟಿನಲ್ಲಿ ರಾಜಕೀಯ ಏಜೆಂಟುಗಳನ್ನು ಸೇರಿಸಿಕೊಂಡಿದ್ದಾರೆಂದು ಕೆಲವರು ಹೇಳಿದರು. ಸುಮಾರು 9-10 ವರ್ಷಗಳಿಂದ ನಾನು ಎಷ್ಟೋ ಕೊ-ಆಪರೇಟೀವ್ ಸೊಸೈಟಿಗಳ ಪ್ರೆಸಿಡೆಂಟ್‌ನಾಗಿ, ಡೈರೆಕ್ಟರ್ ಆಗಿ ಕೆಲಸ ಮಾಡಿದ್ದೇನೆ. ನಾಲ್ಕಾರು ಡಿಸ್ಟ್ರಿಕ್ಟ್ ಬ್ಯಾಂಕ್‌ಗಳ ಮಾರ್ಕೆಟಿಂಗ್ ಸೊಸೈಟಿಗಳನ್ನು ಇವತ್ತೂ ಕೂಡ ಆರ್ಗನೈಜ್ ಮಾಡುತ್ತಾ ಬಂದಿದ್ದೇನೆ. ನನಗೆ ಎಷ್ಟರಮಟ್ಟಿಗೆ ಕೊ-ಆಪರೇಟೀವ್ ಸೊಸೈಟಿಗಳಲ್ಲಿ ಕೆಲಸವಾಗುತ್ತದೆ ಎಂಬುದು ಗೊತ್ತಿದೆ. ಅಂಥಾದ್ದರಲ್ಲಿ ವಿರೋಧಪಕ್ಷದ ಸದಸ್ಯರು ಬಾಯಿಗೆ ಬಂದಹಾಗೆ ಸಿಕ್ಕಿದಹಾಗೆ ಮಾತನಾಡಿ ಈ ಸಭೆಯಲ್ಲಿ ಭಾಷಣ ಮಾಡುವುದು ಸರಿಯಲ್ಲ. ನಾವೆಲ್ಲರೂ ಸೊಸೈಟಿಗಳನ್ನು ಸಹಕರಿಸಿ ಜನತೆಗೆ ಒಳ್ಳೆಯದನ್ನು ಮಾಡುವುದಕ್ಕೆ ಪ್ರಯತ್ನಪಡಬೇಕು. ವಿರೋಧಪಕ್ಷದವರಾಗಲೀ ಅಥವಾ ಆಡಳಿತಪಕ್ಷದವರಾಗಲೀ ಈಗಿರತಕ್ಕ ಪಂಚವಾರ್ಷಿಕ ಯೋಜನೆಯಲ್ಲಿ ಗೊತ್ತಿಲ್ಲದೆ ಇರತಕ್ಕ ಕೆಲವಾರು ಯೋಜನೆಗಳ ಮುಖ್ಯಾಂಶವನ್ನು ಜನತೆಗೆ ತಿಳಿಯುವಂತೆ ತಿಳುವಳಿಕೆ ಕೊಟ್ಟು ಆ ರೂಲ್ಸ್‌ಗಳ ಉದ್ದೇಶಗಳು ಅವರಿಗೆ ಚೆನ್ನಾಗಿ ಮನವರಿಕೆಯಾಗುವಂತೆ ಮಾಡಿ ಆ ಸೊಸೈಟಿಗಳನ್ನು ಚೆನ್ನಾಗಿ ಆರ್ಗನೈಜ್ ಮಾಡುವುದು ನಮ್ಮ ಮುಖ್ಯ ಕರ್ತವ್ಯ.

ಈ ಪ್ಲಾನುಗಳನ್ನು ಕಾರ್ಯಗತ ಮಾಡುವುದರಲ್ಲಿ ಎಲ್ಲಾ ಸದಸ್ಯರ ಜವಾಬ್ದಾರಿಯೂ ಇದೆಯೆಂದೂ ಅರಿತುಕೊಳ್ಳಬೇಕು.

ಸಹಕಾರ ಸಂಘಗಳು ಬಂದಮೇಲೆ ಕ್ರೆಡಿಟ್ ಸೊಸೈಟಿಗಳನ್ನು ಕನ್ಯಾಕುಮಾರಿಯಿಂದ ಹಿಡಿದು ಹಿಮಾಲಯದವರೆಗೆ ದೇಶಾದ್ಯಂತ ಮಾಡಿದ್ದಾರೆ. ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಡಿಸ್ಟ್ರಿಕ್ಟ್‌ಬ್ಯಾಂಕ್ ಮಾಡಿದ್ದಾರೆ. ಸರ್ವಿಸ್ ಕೋ-ಆಪರೇಟೀವ್ ಮಾಡಿದ್ದಾರೆ. 8-10 ಹಳ್ಳಿಗಳನ್ನು ಸೇರಿಸಿ ಲಾರ್ಜ್-ಸ್ಕೇಲ್ ಸೊಸೈಟಿಗಳನ್ನು ಮಾಡಿ ಗೋಡೌನು ಸೌಲಭ್ಯವನ್ನು ಕೊಟ್ಟಿದ್ದಾರೆ ಇಷ್ಟೇ ಸಾಲದು. ಕೋ ಆಪರೇಶನ್ ಮೂವ್‌ಮೆಂಟಿನಿಂದ ಆಗಬೇಕಾದ ಕಾರ್ಯ ಅಗಾಧವಾಗಿದೆ. ಕ್ರೆಡಿಟ್ ಮತ್ತು ಮಾರ್ಕೆಟಿಂಗ್ ಫೆಸಿಲಿಟಿ ಜಾಸ್ತಿಯಾಗಬೇಕು. ಹೆಚ್ಚಿನ ಗೋಡೌನುಗಳನ್ನು ಕನ್‌ಸ್ಟ್ರಕ್ಟ್ ಮಾಡಬೇಕು. ಆರ್ಗನೈಜಿಂಗ್ ವ್ಯವಸ್ಥೆಯಾಗಬೇಕು. ಮಾರ್ಕೆಟಿಂಗ್ ಸೊಸೈಟಿಯನ್ನು ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲಿ ಸ್ಥಾಪನೆ ಮಾಡಿದರೂ, ಅದರಿಂದ ನಾವು ಎಷ್ಟೋ ಉಪಯೋಗವನ್ನು ನಿರೀಕ್ಷಿಸಿದ್ದೇವೋ, ಅಷ್ಟು ಆಗಿಲ್ಲ. ಸೊಸೈಟಿಗಳ ಆರ್ಗನೈಜೇಶನ್ನಿನಲ್ಲಿ ಇನ್ನೂ ಲೋಪದೋಷಗಳಿವೆ. ಅವುಗಳನ್ನು ಸರ್ಕಾರದವರು ಸರಿಪಡಿಸಬೇಕು. ಇನ್ನೂ ಮಹತ್ವವಾದ ಸೌಕರ್ಯಗಳು ಜನಗಳಿಗೆ ಬೇಕು, ಗೋಡೌನ್ ಫೆಸಿಲಿಟಿಗಳನ್ನು ದೇಶಾದ್ಯಂತ ಮಾಡಬೇಕು. ರೈತರು ಬೆಳೆದವನ್ನೆಲ್ಲವನ್ನು ಮಾರಾಟ ಮಾಡುವುದಕ್ಕೆ ಮತ್ತು ಅವರಿಗೆ ಅದಕ್ಕೆ

(ಶ್ರೀ ಜಿ. ಶಿವಪ್ಪ)

ಹೆಚ್ಚಿನ ಬೆಲೆ ಬರುವುದಕ್ಕೆ, credit and marketing link. ಸಹಕಾರ ಸಂಘಗಳೆಂದು ಏನು ಹೇಳುತ್ತೇವೆಯೋ, ಅವುಗಳನ್ನು ವ್ಯವಸ್ಥೆ ಮಾಡಲು, ಹೆಚ್ಚಿಸಲು, ಸರ್ಕಾರದವರು ತುಂಬಾ ಮಹತ್ವವನ್ನು ಕೊಡಬೇಕೆಂದು ಅವರನ್ನು ಒತ್ತಾಯ ಮಾಡುತ್ತೇನೆ.

ಬಹಳ ಮುಖ್ಯವಾದ ಡಿಪಾರ್ಟ್‌ಮೆಂಟ್‌ಯೆಂದರೆ ಅಗ್ರಿಕಲ್‌ಚರ್ ಡಿಪಾರ್ಟ್‌ಮೆಂಟ್. ರಾಚಯ್ಯನವರೇನೇ ಕಷ್ಟಪಟ್ಟಿದ್ದಾರೆ; ಆ ಇಲಾಖೆಯನ್ನು ಇಂಪ್ರೂವ್ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಆದರೂ ಅವರು ಬುಲ್‌ಡೋಜರ್ ಕೆಲಸ ಮಾಡಿದಹಾಗೆ ಮಾಡಬೇಕು. ನಮ್ಮ ದೇಶದಲ್ಲಿ ಆಹಾರೋತ್ಪನ್ನ ಜಾಸ್ತಿಯಾದ ಹೊರತು, ಇದಕ್ಕಾಗಿ ಪರದೇಶವನ್ನು ಅವಲಂಬಿಸುವುದನ್ನು ಬಿಟ್ಟ ಹೊರತು, ನಮ್ಮ ದೇಶದ ಸೌಭಾಗ್ಯವಾಗುವುದಿಲ್ಲ. ಆಹಾರೋತ್ಪನ್ನವನ್ನ ಹೆಚ್ಚಿಸುವುದಕ್ಕೆ ಅಗ್ರಿಕಲ್‌ಚರ್ ಇಲಾಖೆ ಶ್ರಮಿಸಬೇಕು. ಅದಕ್ಕೋಸ್ಕರ ರಾಚಯ್ಯನವರಿಗೆ ಹೇಳುತ್ತೇನೆ. Compost and disease control ಸ್ಕೀಮನ್ನು ವಿಸ್ತರಿಸಬೇಕು. Improved seeds ಸಪ್ಲೈ ಮಾಡಬೇಕು. By supplying improved seeds you can increase the production of our Country by at least ten per cent. Compost and disease control ವ್ಯವಸ್ಥೆ ಸರಿಯಾಗಿಲ್ಲ. ನಮ್ಮಲ್ಲಿ ಅನೇಕ ಜನಗಳಿಗೆ ಇವುಗಳಲ್ಲ ಆಸಕ್ತಿಇದೆ ಮತ್ತು ಆ ವಿಧಾನಗಳನ್ನು ಕಲಿತು ಕೊಂಡಿದ್ದಾರೆ. ಎಲ್ಲಾ ಸರ್ಕಾರನವರೇ ಮಾಡಬೇಕೆಂದರೆ ಸಾಧ್ಯವಿಲ್ಲ. ಜನರಿಗೆ ವ್ಯವಸಾಯ ವಿಧಾನಗಳಲ್ಲಿ ಮತ್ತು ಸ್ಕೀಮುಗಳಲ್ಲ ತರಬೇತಿ ಕೊಡಬೇಕು ಮತ್ತು ಅಗ್ರಿಕಲ್‌ಚರ್ ಸ್ಕೀಮುಗಳನ್ನು ಇಂಪ್ಲಿಮೆಂಟ್ ಮಾಡಬೇಕು. ಸೀಡ್ಸ್ ಮಲ್ಟಿಪ್ಲಿಕೇಶನ್ನಿಗೆ ಅನೇಕ ಸೀಡ್ ಫಾರಮ್ಮುಗಳನ್ನು ಮಾಡಿದ್ದಾರೆ ಆದರೆ ಅದು ಎಷ್ಟರಮಟ್ಟಿಗೆ ಯಶಸ್ವಿಯಾಗಿ ಕೆಲಸ ಮಾಡಬೇಕಾಗಿರುತ್ತೋ ಅಷ್ಟರ ಮಟ್ಟಿಗೆ ಮಾಡುತ್ತಿಲ್ಲ. ಸೀಡ್‌ಗ್ರೋಯಿಂಗ್‌ಗೆ ಗಮನ ಕೊಟ್ಟು, ತುಂಬ ಸೀಡ್ಸ್ ತೆಗೆದುಕೊಂಡು, ಅವುಗಳನ್ನು ದೇಶಾದ್ಯಂತ ಹಂಚುವ ವ್ಯವಸ್ಥೆ ಮಾಡಬೇಕು.

ಇನ್ನು ಫರ್ಟಿಲೈಸರ್ ಸಪ್ಲೈ ವಿಚಾರ. ನಮ್ಮ ರೈತರಿಗೆ ಬಿತ್ತನೆ ಕಾಲದಲ್ಲಿ, ಅತ್ಯಾವಶ್ಯಕವಾಗಿ ಬೇಕಾದ ಕಾಲದಲ್ಲಿ, ಅವರಿಗೆ ಎಷ್ಟು ಬೇಕೋ ಅಷ್ಟು ಸಿಗುತ್ತಿಲ್ಲ ಫರ್ಟಿಲೈಸರ್ ಕೊರತೆ ಬಹಳವಿದೆ. ನಮ್ಮ ಮೈಸೂರು ಸಂಸ್ಥಾನಕ್ಕೆ ಒಂದು ಫರ್ಟಿಲೈಜರ್ ಫ್ಯಾಕ್ಟರಿ ಬೇಕೇಬೇಕೆಂದು ಚೀಫ್ ಮಿನಿಸ್ಟರಿಗೆ ಹೇಳುತ್ತೇನೆ. ನಾನೂ ಅಗ್ರಿಕಲ್‌ಚರ್ ಇಲಾಖೆಯಲ್ಲಿ ಸಂಬಂಧ ಇಟ್ಟುಕೊಂಡಿದ್ದೇನೆ. The demand is increasing every year. ಅಮೋನಿಯಮ್ ಸಲ್ಫೇಟ್ ಮತ್ತು ಯೂರಿಯಾವನ್ನ ವ್ಯವಸಾಯದಲ್ಲಿ ಉಪಯೋಗ ಮಾತಕ್ಕಂಥಾದ್ದನ್ನು ನಮ್ಮ ಜನರು ಕಲಿತುಕೊಂಡಿದ್ದಾರೆ. ಹಿಂದಿನ ವರ್ಷ 10–20 ಟನ್ ಉಪಯೋಗಿಸಿದ್ದಾರೆ, ಈ ವರ್ಷ 40 ಟನ್ ಬೇಕೆನ್ನುತ್ತಾರೆ. ಆದ್ದರಿಂದ, ಮ್ಯಾಥೆಮ್ಯಾಟಿಕಲ್ ರೇಶ್ಯೋ ಪ್ರಕಾರ ಪ್ರತಿಯೊಂದು ಡಿಸ್ಟ್ರಿಕ್ಟಿಗೂ ಎಷ್ಟೆಷ್ಟು ಜಾಸ್ತಿ ಬೇಕೆನ್ನುವುದನ್ನು ತಿಳಿದುಕೊಂಡು ಅಷ್ಟಷ್ಟನ್ನೂ ಒದಗಿಸಲು ಪ್ರಯತ್ನ ಮಾಡಬೇಕು. ಸಿಂಧ್ರಿ ಫರ್ಟಿಲೈಸರ್ ಫ್ಯಾಕ್ಟರಿ ಇದೆ. ಬೆಳಗೊಳದಲ್ಲಿಯೂ ಒಂದು ಫ್ಯಾಕ್ಟರಿ ಇದೆ. ಆದರೆ ಅವು ನಮ್ಮರಾಜ್ಯಕ್ಕೆ ಸಾಕಾದಷ್ಟು ಸಪ್ಲೈ ಮಾಡಲಾರವು. ಮೈಸೂರಿನಲ್ಲಿ ಇನ್ನೊಂದು ಫರ್ಟಿಲೈಸರ್ ಫ್ಯಾಕ್ಟರಿಯನ್ನು ಸ್ಥಾಪಿಸಲು ಸರ್ಕಾರದವರು ತಕ್ಕ ಕಾರ್ಯಕ್ರಮವನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುವುದು ನನ್ನ ಕರ್ತವ್ಯವಾಗಿದೆ.

ಅಗ್ರಿಕಲ್‌ಚರ್ ಡಿಪಾರ್ಟ್‌ಮೆಂಟ್ ಸಾಯಿಲ್ ಇರೋಶನ್ ವಿಭಾಗಕ್ಕೆ ಅತಿಮುಖ್ಯವಾದ ಗಮನ ಕೊಡಬೇಕು. ಮನುಷ್ಯನ ಶರೀರಕ್ಕೆ ಚರ್ಮಹೇಗೆ ಮುಖ್ಯವೋ, ಭೂಮಿಗೆ ಅದರ ಒಂದು ಅಡಿ ಒಳಗಿರುವ ಭಾಗ ಅಷ್ಟು ಮುಖ್ಯವಾದುದು; ಅದಕ್ಕೆ ಅಷ್ಟು ಆಧಾರವಾಗಿರುವ ಸಾಯಿಲ್ ಇರುವುದು ಅದರಲ್ಲಿ. ಮನುಷ್ಯನ ಚರ್ಮಕೆಟ್ಟರೆ ಅವನಿಗೆ ಎಷ್ಟು ವ್ಯಾಕುಲವಾಗುತ್ತದೆಯೋ ಹಾಗೆ, ಭೂಮಿಯ ಫರ್ಟಿಲಟಿ ಅದರ ಒಂದು ಅಡಿ ಚರ್ಮದಲ್ಲಿರುವುದರಿಂದ ಅದನ್ನು ಕಾಪಾಡ

ಬೇಕು. ಯಥೇಚ್ಛವಾಗಿ ಮಳೆಬಂದಾಗ ಕುರುಕು ಬಂದು ಎರೋಶನ್ ಆಗಿ ಬಿಡುತ್ತದೆ. ನಾವು ಗವರನ್‌ಮೆಂಟ್ ಆಫ್ ಇಂಡಿಯಾದ ಸಹಾಯವನ್ನು ಸರಿಯಾದ ಕಾಲದಲ್ಲಿ ತೆಗೆದುಕೊಂಡು, ಸಾಯಿಲ್ ಕನ್‌ಸರ್ವೇಷನ ಮಾಡಲು ಪ್ರಯತ್ನಿಸಬೇಕು. ಭಾರತ ಸರ್ಕಾರದವರು ಇದಕ್ಕೆ ಯಥೇಚ್ಛವಾಗಿ ಹಣ ಕೊಡುತ್ತಿದ್ದಾರೆ. ರಾಚಯ್ಯನವರು ಉತ್ಸಾಹಶಾಲಿಗಳು ಬೊಂಬಾಯಿನಲ್ಲಿ ಬಂಡುಗಳನ್ನು ಹಾಕಿಕೊಂಡು ಭೂಮಿಯ ಕಸವು ಹೋಗದಹಾಗೆ ನೋಡಿಕೊಳ್ಳುತ್ತಾರೆ. ಅದೇ ಕಾರ್ಯಕ್ರಮವನ್ನು ನಮ್ಮ ಹಳೆಯ ಮೈಸೂರು ರಾಜ್ಯ ಮತ್ತಿತರ ಕಡೆಗಳಲ್ಲಿ ಆದಷ್ಟು ಜಾಗ್ರತೆ ನಮ್ಮ ರಾಚಯ್ಯನವರು ಕಾರ್ಯಗತ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಗ್ರಿಕಲ್‌ಚರ್‌ನಲ್ಲಿ ರಿಸರ್ಚ್ ಬಹಳ ಮುಖ್ಯವಾದುದು. ಈ ವಿಚಾರದಲ್ಲಿ ಹುಚ್ಚಮಾಸ್ತಿಗೌಡರು ಮಾತನಾಡಿದರೆಂದು ಕಾಣುತ್ತದೆ. ಅಗ್ರಿಕಲ್‌ಚರ್ ಇಲಾಖೆಯಲ್ಲಿ ನಮ್ಮ ದೇಶದಲ್ಲಿ ಎಷ್ಟರಮಟ್ಟಿಗೆ ರಿಸರ್ಚ್ ಆಗಬೇಕಾಗಿತ್ತೋ ಅಷ್ಟರಮಟ್ಟಿಗೆ ಆಗಿಲ್ಲ. ರಿಸರ್ಚಿನಿಂದ ಹೊರಬಿದ್ದ ಫಲಿತಾಂಶಗಳನ್ನು ಫಾರ್ಮರುಗಳಿಗೆ ತೆಗೆದುಕೊಂಡುಹೋಗಿ ಮುಟ್ಟಿಸುವುದು ಅತಿ ಮುಖ್ಯವಾದುದು. ಈ ರಿಸರ್ಚ್‌ರಿಸಲ್ಟುಗಳನ್ನು ರೈತರಿಗೆ ತೆಗೆದುಕೊಂಡು ಹೋಗತಕ್ಕಂಥ ಏಜನ್ಸಿಗೆ ಟ್ರೇನಿಂಗ್ ಸಾಲದು. ರಿಸರ್ಚ್ ಸಾಮಾನ್ಯ ವಿಷಯವಲ್ಲ. ಅದನ್ನು ಒಂದು ಮೂಲೆಯಲ್ಲಿ ಕೂತು, ಮಾಡಿ, ಅದರಿಂದ ಹೊರಪಟ್ಟ ಅಂಶಗಳು ವ್ಯವಸಾಯಗಾರರ ಮನಸ್ಸಿನ ಮೇಲೆ ತಕ್ಕ ಪರಿಣಾಮಗಳನ್ನು ಮಾಡುವಂತಿರಬೇಕು. ಹೊಸ ವಿಧಾನದಲ್ಲಿ ಉತ್ಪತ್ತಿಯನ್ನು ಜಾಸ್ತಿ ಮಾಡುವುದರಲ್ಲಿ ಟ್ರೇನ್ಡ್ ಪೀಪಲ್ ಕೊರತೆ ಇದೆ. ನಮ್ಮ ತಾಲ್ಲೂಕುಗಳಲ್ಲಿ ಒಬ್ಬ ಅಗ್ರಿಕಲ್‌ಚರ್ ಇನ್‌ಸ್ಪೆಕ್ಟರು ಇರುತ್ತಾರೆ. ಒಬ್ಬ ಅಧಿಕಾರಿ ಏನು ಕೆಲಸ ಮಾಡಬಲ್ಲನು ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಎನ್. ಇ. ಎಸ್. ಇಲಾಖೆಯವರಿಗೂ ಅಗ್ರಿಕಲ್‌ಚರ್ ಇಲಾಖೆಯವರಿಗೂ ಕೋ ಆರ್ಡಿನೇಶನ್ನಿನಿಂದ ಕೆಲಸ ಮಾಡಿದರೆ ಒಳ್ಳೆಯದು ವಿಲೇಜ್ ಲೆವೆಲ್ ವರ್ಕರುಗಳಿಗೆ ಅಗ್ರಿಕಲ್‌ಚರ್ ತಜ್ಞರುಗಳಿಂದ ತರಪೇತಿ ಕೊಡಿಸುವುದು ಈ ನನ್ನ ಸಲಹೆಗಳ ಬಗ್ಗೆ ಸರ್ಕಾರದವರು ಹೆಚ್ಚು ಗಮನಕೊಡಬೇಕೆಂದು ಹೇಳಲಿಚ್ಛಿಸುತ್ತೇನೆ.

ಇಷ್ಟೆಲ್ಲಾ ಹೇಳಿದ ಮೇಲೆ ಹಣ ಒದಗಿಸುವ ಸಮಸ್ಯೆಯು ಬಹಳ ಪ್ರಾಮುಖ್ಯವಾದುದು. ಮೂರನೆಯ ಪಂಚವಾರ್ಷಿಕ ಯೋಜನೆಗೆ ಹಣ ಒದಗಿಸುವುದರಲ್ಲಿ ವಿರೋಧ ಪಕ್ಷದವರು ಸರ್ಕಾರಕ್ಕೆ ಅವರ ಸಹಕಾರ ಕೊಟ್ಟೇಕೊಡಬೇಕು. ಈ ಯೋಜನೆಯನ್ನು ಒಂದು ಯಜ್ಞದಷ್ಟೇ ಶ್ರದ್ಧೆಯಿಂದ ಪರಿಗಣಿಸಬೇಕೆಂಬುದು ನೆಹ್ರೂರವರ ಇಚ್ಛೆ. ಏಕೆಂದರೆ ಇದರಲ್ಲಿ ಜನರಿಗೆ ಅನುಕೂಲವಾಗುವಂಥ ಅನೇಕ ಕಾರ್ಯಕ್ರಮಗಳಿವೆ; ಮಿಗಿಲಾಗಿ ಈ ಮೂರನೆಯ ಯೋಜನೆಯಿಂದ ಸಾಮಾನ್ಯ ಜನರ ಆರ್ಥಿಕ ಪರಿಸ್ಥಿತಿಯನ್ನೂ ಹೆಚ್ಚಿನಮಟ್ಟಕ್ಕೆ ತರಬೇಕೆಂಬ ಉದ್ದೇಶವಿದೆ. ನಮ್ಮ ವಿರೋಧ ಪಕ್ಷದವರು ಮುಂದಿನ ಎಲೆಕ್ಷನ್ನನ್ನೇ ದೃಷ್ಟಿಯಿಟ್ಟುಕೊಂಡು ಸರ್ಕಾರ ಮಾಡಿದ ಕೆಲಸವನ್ನೆಲ್ಲಾ ಅವಶ್ಯಕವಾಗಿ ಟೀಕಿಸದೆ, ಈ ಯೋಜನೆಯಲ್ಲಿ ಸರ್ಕಾರದ ಕೈಯನ್ನೇ ಬಲಪಡಿಸಬೇಕು.

ದೇಶದ ಅಭಿವೃದ್ಧಿಗೆ ಬೇಕಾದ ಹಣವನ್ನು ಸಂಪಾದಿಸಲು ಅನೇಕ ಅವಕಾಶಗಳಿವೆ. ಸರ್ಕಾರದವರು ಫಾರೆಸ್ಟ್ ವೆಲ್ತನ್ನು ಹೆಚ್ಚಿಸಿ, ಹೆಚ್ಚು ಆದಾಯ ಪಡೆಯಬಹುದು. ಈಗ ಫಾರೆಸ್ಟ್ ಪೋರ್ಟ್‌ಫೋಲಿಯುದಲ್ಲಿರುವ ಮಂತ್ರಿಗಳು ಸಾಧುಸಂತರು; ಅಪಾರವಾದ ಗೌರವವಿರತಕ್ಕಂಥವರು. ಅಂಥವರ ಕೈನಲ್ಲಿ ಇವತ್ತು ಫಾರೆಸ್ಟ್ ಇಲಾಖೆ ಬಂದಿದೆ. ಈ ಇಲಾಖೆಯಿಂದ ಸುಮಾರು ಮೂರುವರೆ ಕೋಟಿ ಉತ್ಪನ್ನ ಬರುತ್ತಿದೆ. ಅವರು ಮನಸ್ಸು ಮಾಡಿದರೆ ಫಾರೆಸ್ಟಿನಿಂದ ಉತ್ಪನ್ನವನ್ನೇ ಹೆಚ್ಚುಮಾಡಿ, ಸರ್ಕಾರಕ್ಕೆ ಇನ್ನೂ ಹೆಚ್ಚಿನ ರೀತಿಯಲ್ಲಿ ಇನ್‌ಕಂ ತಂದರೆ, ಬಹಳ ಅನುಕೂಲವಾಗುತ್ತದೆ. ಹೀಗೆ ಈ ಸೇಲ್ಸ್ ಟ್ಯಾಕ್ಸಿನಿಂದ ಬರತಕ್ಕ ಉತ್ಪನ್ನವನ್ನಿನ್ನೂ ಹೆಚ್ಚುಮಾಡಿ ಕೊಳ್ಳಬೇಕೆಂದು ಹೇಳುತ್ತೇನೆ. ಅರಣ್ಯ ಬಾಬಿನಿಂದಲೂ ನಮಗಿನ್ನೂ ಹೆಚ್ಚಿನ ವರಮಾನ ಬರಬೇಕಾಗಿದೆ. ಆದರೆ ಈ ದಿವಸ ಸರ್ಕಾರದವರು ಪೂರ್ಣಗೊಳಿಸಿರತಕ್ಕ ಈ ತುಂಗ ಮತ್ತು ತುಂಗಭದ್ರ ಪ್ರಾಜೆಕ್ಟುಗಳಿಂದ ನಮಗೀಗ ನಮ್ಮ ಇನ್‌ವೆಸ್ಟ್‌ಮೆಂಟಿಗೆ ತಕ್ಕಂತೆ ರಿಟರ್ನ್ಸ್ ಬರುತ್ತಿದೆಯೋ ಎಂತ ಕೇಳಬೇಕಾ

(ಶ್ರೀ ಡಿ. ಶಿವಪ್ಪ)

ಗಿದೆ. ಸರ್ಕಾರದ ದೃಷ್ಟಿಯಿಂದಲೂ ಮತ್ತು ರೈತನ ದೃಷ್ಟಿಯಿಂದಲೂ ಇವುಗಳಿಂದ ಬರಬೇಕಾಗಿರ
ತಕ್ಕ ರಿಟರ್ನ್ ಸರಿಯಾಗಿ ಬರುತ್ತಿದೆಯೇ ಎಂಬುದನ್ನು ಪರಿಶೀಲಿಸಬೇಕಾದುದು ಅತ್ಯಗತ್ಯ ಕಾರಣ
ವೇನೆಂದರೆ ನಮ್ಮ ಸರ್ಕಾರ ಮುಂದಿನ್ನೂ ಈ ಬಾಬಿನಲ್ಲಿ ಹೆಚ್ಚು ಹಣವನ್ನು ಇನ್ವೆಸ್ಟ್ ಮಾಡ
ತಕ್ಕ ಸಂದರ್ಭಗಳಿರುವುದರಿಂದ ಈ ಐಟಂನ್ನು ಪರಿಶೀಲನೆ ಮಾಡಲೇ ಬೇಕು. ಹಾಗೊಂದು
ವೇಳೆ ನಿರೀಕ್ಷಿಸಿರತಕ್ಕ ಮಟ್ಟಕ್ಕೆ ಆದಾಯ ಬರುತ್ತಿಲ್ಲವೆಂದು ಕಂಡು ಬಂದರೆ ಅದಕ್ಕೆ ಕಾರಣ
ಗಳೇನೆಂಬುದನ್ನು ಕಂಡು ಹಿಡಿಯಬೇಕು. ಆದರೆ ನಮ್ಮಲ್ಲಿ ಕೆಲವು ಅನ್-ಪ್ರೊಡಕ್ಟೀವ್ ಪ್ರಾಜೆ
ಕ್ಟುಗಳಿರಬಹುದು. ಕೆ. ಆರ್. ಸಾಗರ ಪ್ರತಿಯೊಬ್ಬರಿಗೂ ಗೊತ್ತಿದೆ. ಆದರೆ ಇದರಿಂದ
ನಮಗೆಷ್ಟು ರಿಟರ್ನ್ ಬರಬೇಕಾಗಿತ್ತೊ, ಅಷ್ಟು ಬರುತ್ತಿದೆಯೇ, ಹಾಗೆ ತುಂಗಭದ್ರ ಪ್ರಾಜೆಕ್ಟಿ
ನಿಂದ ಎಷ್ಟು ಆದಾಯ ಬರಬೇಕಾಗಿತ್ತೋ ಅಷ್ಟು ಬರುತ್ತಿದೆಯೇ ಎಂಬುದನ್ನೆಲ್ಲ ಪರ್ಯಾಲೋಚಿಸ
ಬೇಕಾದ ಅಂಶಗಳಾಗಿವೆ. ಆದರೆ ಇತ್ತೀಚೆಗೆ ಈ ಪ್ರಾಜೆಕ್ಟುಗಳ ನಿರ್ಮಾಣದಿಂದ ಭೂಮಿಗಳ ಬೆಲೆ
ಯೇನೋ ಬಹಳವಾಗಿ ಏರಿರುತ್ತೆ. ನಾನು ಇಲ್ಲಿಯವರೆಗೇನೋ ಸರ್ಕಾರದವರು ಮಾಡಿರತಕ್ಕ
ಕಾರ್ಯಗಳನ್ನು ಪ್ರಶಂಶೆ ಮಾಡಿದ್ದೇನೆ ಆದರೆ ಸರ್ಕಾರದವರು ಮಾಡಿರತಕ್ಕ ಕೆಲವು ಐಟಂಗಳಲ್ಲಿ
ಅವರನ್ನು ಕ್ರಿಟಿಸೈಜ್ ಮಾಡಬೇಕಾಗಿತ್ತು ಆದರೆ ನನಗೀಗ ಕಾಲಾವಕಾಶವಿಲ್ಲ. ಆದ್ದರಿಂದ
ನಮ್ಮೀ ವಿರೋಧಪಕ್ಷದವರು ನಾನು ನಮ್ಮ ಆಡಳಿತಪಕ್ಷವನ್ನು ಬರಿ ಹೊಗಳುತ್ತಿದ್ದೇನೆಂದು ಮಾತ್ರ
ಯಾರೂ ಭಾವಿಸಬಾರದು. ನಮ್ಮೀ ಜಿಲ್ಲೆಯಲ್ಲಿ ಅಂದರೆ ಪೂರ್ವದ ಅರ್ಧಭಾಗಕ್ಕೆ ಈಗಾಗಲೇ ಕ್ಷಾಮ
ಉಂಟಾಗಿದೆ. ಹಿರಿಯೂರು ಚಳ್ಳಕೆರೆ, ಮೊಳಕಾಲ್ಮುರು ಈ ತಾಲ್ಲೂಕುಗಳಲ್ಲಿ ಕ್ಷಾಮ ಪ್ರಾರಂ
ಭವಾಗಿದೆ. ಇದರಲ್ಲಿ ಏನೂ ಉತ್ಪ್ರೇಕ್ಷೆಯಿಲ್ಲ. ಈ ಪ್ರದೇಶಕ್ಕೆ ಕೊಡಲೇ ಸರ್ಕಾರದವರು ಸೂಕ್ತ
ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕೆಂದು ನನಗೆ ಇಷ್ಟ. ನಾಲ್ಕಾರು ಮಾತುಗಳನ್ನಾಡಲು
ಅವಕಾಶ ಕಲ್ಪಿಸಿಕೊಟ್ಟ ನಮ್ಮ ಸ್ಪೀಕರ್-ರಾಯರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಈ ನಾಲ್ಕು
ಮಾತುಗಳನ್ನು ಮುಗಿಸುತ್ತೇನೆ.

Sri B. G. Khot.—Sir, At the very outset of the year, we have been confronted with two legislative business of great importance which have staggered our thoughts and baffled our imagination. They are (1) the Governor's Address and (2) the annual budget. Of course, the Governor's Address is now a past matter and therefore I do not wish to dwell at length on that. In passing I may however say that it was a pedestrian address containing a few remarks here and there. There is nothing much in it.

In regard to the budget I must say that it presents an unhappy picture. It has created feeling of dissatisfaction, discontent and helplessness and because of this it is also hopeless. Hopes, if they are to succeed must shelter help and if it is helpless it is also hopeless!

But, one thing is clear, and it is that the Hon'ble-Minister for Finance has tried to put the financial conditions of the State in as accurate a manner as possible and I must of duty express my feelings of thankfulness for his honesty and integrity . . . . .

Sri J. H. Shamsuddin.—And lucid exposition ?

SRI B. G. KHOT.—For his truth and sincerity, for his devotion to duty and his constant and unfailing efforts. Still then, I must however submit that in some places, I honestly differ from him.

According to the Constitution and the several rules and conventions; the budget has to go through five important stages. They are : 1. presentation of the budget, 2. General discussion, 3. Voting on Demands for Grants, 4. Appropriation Bill and 5. Consideration of taxation and borrowing proposals.

The first stage is now over, that is, the budget has been duly presented in this House. We are now passing through the second phase. We are discussing the budget : its merits and its demerits. In discussing the budget, three points are mainly worth considering. They are 1. Discussion of estimates of revenue and expenditure, 2. Discussion of ways and means and the programme of Government and 3. Charged expenditure. The last is only discussed and not voted upon and in view of this factor, it does not merit detailed consideration.

Looked from this point of view, I must confess frankly and most honestly, to the best of my knowledge and belief, that the budget speech presents a lucid picture of the activities of all the five years. The Minister has ably presented to us what he has done during the last four years. Perhaps, this would be his last budget in this regime because the general election would take place next year and perhaps we would not consider another budget in great detail as we do now. I must again say that he has presented a vivid picture of the activities of the last four years.

The budget speech apart from being a survey of the activities of the last four years, it also reflects the adverse economic conditions of our State. I will try to illustrate this presently. On page 3 and 4 of the budget speech, we find that direct taxation has increased from 10 crores and odd to 13 crores. Indirect taxes have risen from 11 crores to 18 crores. The total indirect and direct taxation has increased from 13·63 to 22·10. This is the position of our revenues in regard to taxation.

MR. CHAIRMAN.—The Hon'ble Member may continue his speech tomorrow.

The House adjourned at Five Minutes past six of the Clock to meet again at One of the Clock on Friday the 24th March 1961.

WD 6389—GPB—(L.A. New Br.)—500—23-12-66.